THE BOOK WAS DRENCHED

TIGHT BINDING BOOK

UNIVERSAL
LIBRARY

OU_198887

UNIVERSAL
LIBRARY

॥ श्रीः ॥

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ,

ಉಡುಪಿ.

ಶ್ರೀಪಾದರಾಯರ

ಮತ್ತು

ಶ್ರೀವ್ಯಾಸರಾಯರ ಕೀರ್ತನೆಗಳು.

(ಸುಳಾದಿಗಳು) —

ಪ್ರಥಮಾವೃತ್ತಿ

ಈ ಗ್ರಂಥವು

ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿತು.

1924.

ಬೆಲೆ: ೮ ಆಣೆ.

rinted & Published by

P. Guru Rau,

at the

Srikrishna Press, Udupi.

ಪ್ರಸ್ತಾವನೆ.

ಪುರುಷಾರ್ಥ ಶ್ರೇಷ್ಠವಾದ ಮೋಕ್ಷಸ್ಥಾನಕ್ಕೆ ಕರ್ಮ-ಜ್ಞಾನ-ಭಕ್ತಿ ಮಾರ್ಗಗಳೆಂಬ ಹಲವು ಮಾರ್ಗಗಳಿದ್ದರೂ ಅನೇಕ ವಿಘ್ನಪೀಡಿತವಾದ ಈ ಕಲಿಯುಗದಲ್ಲಿ ನಿರ್ವಿಘ್ನದಿಂದ ಯಜ್ಞಾದಿ ಕರ್ಮಗಳನ್ನೂ ಶಾಸ್ತ್ರೀಯಜ್ಞಾನವನ್ನೂ ಸಂಪಾದಿಸಲು ಅಶಕ್ತರಾಗಿ ಬಳಲುವ ಸಂಸಾರಿಗಳನ್ನುದ್ಧರಿಸಲು, ಪುರಂದರದಾಸಾದಿ ಮಹನೀಯರನೇಕರು ಅವತರಿಸಿ, ಭಕ್ತಿಮಾರ್ಗವನ್ನು ಕೀರ್ತನದ್ವಾರಾ ಸ್ಥಾಪಿಸಿರುವರೆಂಬುದು ಪ್ರಸಿದ್ಧ ವಿಷಯವಷ್ಟೆ.

ಅಂತಹ ಪುರಂದರದಾಸಾದಿಗಳಿಗೂ ಜ್ಞಾನೋಪದೇಶಕರಾದ **ಶ್ರೀವ್ಯಾಸರಾಯ** ಮಹಾಮುನಿಗಳು ಪ್ರಹ್ಲಾದರಾಯರ ಅಂಶರಾಗಿ ಭೂಮಿಯಲ್ಲವತರಿಸಿ, ಶ್ರೀಬ್ರಹ್ಮಣ್ಯತೀರ್ಥರಿಂದ ಸನ್ಯಾಸ ಪಡೆದು, **ಶ್ರೀಪಾದರಾಯ** ಯತಿವರರಲ್ಲಿ ವಿದ್ಯಾವ್ಯಾಸಂಗ ಮಾಡಿ, ನ್ಯಾಯಾಮೃತತರಂಗಿಣೀ ತರ್ಕತಾಂಡವ ಚಂದ್ರಿಕಾ ಮೊದಲಾದ ಸಂಸ್ಕೃತ ವೇದಾಂತವಾದಗ್ರಂಥಗಳನ್ನು ರಚಿಸಿ, ಜ್ಞಾನಮಾರ್ಗ ಪ್ರಕಾಶಕರಾಗಿ, **ಚಂದ್ರಿಕಾಚಾರ್ಯ**ರೆಂಬ ಪ್ರಖ್ಯಾತಿಯನ್ನು ಪಡೆದುದು ಮಾತ್ರವಲ್ಲದೆ, ಶ್ರೀಪಾದರಾಯರಿಂದಲೇ '**ಶ್ರೀಕೃಷ್ಣ**' ಎಂಬ ಅಂಕಿತ ಪಡೆದು ಪಾಮರಜನರುದ್ಧಾರಕ್ಕಾಗಿ ಅನೇಕ ಹರಿಕೀರ್ತನೆಗಳನ್ನೂ ಸುಳಾದಿಗಳನ್ನೂ ನಿರ್ಮಿಸಿದ್ದಾರೆ. ಈ ಮಹನೀಯರಿಗೆ ವ್ಯಾಸಕೂಟದಲ್ಲಿ ಪ್ರೇಮವಿರುವಷ್ಟೇ ದಾಸಕೂಟದಲ್ಲೂ ಪ್ರೀತಿಯಿದ್ದಿತೆಂಬುದು ಇವರ ಹರಿಕೀರ್ತನೆಗಳಿಂದಲೇ ತಿಳಿಯಬಹುದು.

ಶಾ. ಶಕ ೧೫೨೨ನೇ ಕ್ರಿ. ಶಕ ೧೬೦೦ನೇ ಶಾರ್ವರಿ ಫಾಲ್ಗುನ ಕೃಷ್ಣ ತೃತೀಯೆಯಲ್ಲಿ ಶ್ರೀವಾದಿರಾಜರು ಪರಂಧಾಮವನ್ನಲಂಕರಿಸಿದರು. ಇದರ ಮರುದಿನ ಚತುರ್ಥೀ ತಿಥಿಯಲ್ಲಿ ಶ್ರೀವ್ಯಾಸರಾಯರು ವೈಕುಂಠ

ಯಾತ್ರೆ ಮಾಡಿದರೆಂಬುದು ಪ್ರಸಿದ್ಧವಾದುದರಿಂದ ಈ ಮಹನೀಯರೂ ಮತ್ತು ಇವರ ವಿದ್ಯಾಗುರುಗಳಾದ ಶ್ರೀಪಾದರಾಯರೂ ಕ್ರಿ. ಶಕ 15ನೇ ಶತಮಾನದಲ್ಲಿದ್ದರೆಂದೂಹಿಸಬಹುದು.

ಮಹಾನುಭಾವರಾದ ಶ್ರೀಪಾದರಾಯರು ವ್ಯಾಸಕೂಟದಲ್ಲಿ ಅತಿ ಶ್ರೇಷ್ಠರೆಂದು ಕೀರ್ತಿಶಾಲಿಗಳಾಗಿ ಈ ಕನ್ನಡ ನಾಡಿನಲ್ಲಿ ಭಕ್ತಿಮಾರ್ಗದ ಗುರುತನ್ನೇ ಅರಿಯದ ಸಾಮಾನ್ಯಜನರ ಕ್ಷೇಮಕ್ಕಾಗಿ ವೈಷ್ಣವ ಸಂಪ್ರದಾಯದಲ್ಲಿಯೂ ಮೊತ್ತಮೊದಲು ದಾಸಕೂಟವನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿ, ಭಗವದಪರೋಕ್ಷಜ್ಞಾನಿಗಳಾದುದರಿಂದ ಶ್ರೀಪರಮಾತ್ಮನ ಅನುಗ್ರಹದಿಂದಲೇ **'ಶ್ರೀರಂಗವಿಠಲ'** ಎಂಬ ಅಂಕಿತ ಪಡೆದು ಅನೇಕ ಹರಿಕೀರ್ತನೆ, ಉಗಾಭೋಗ, ಸುಳಾದಿ ಮೊದಲಾದ ಗೀತಗಳನ್ನು ರಚಿಸಿ ದೀನರನ್ನುದ್ಧರಿಸಿದರು. ಈ ಕೀರ್ತನಬೀಜವು ಇವರಲ್ಲಂಕುರಿಸಿ, ಶ್ರೀವ್ಯಾಸರಾಯರಲ್ಲಿ ಪುಷ್ಪಿತವಾಗಿ ಪುರಂದರದಾಸಾದಿಗಳಲ್ಲಿ ಫಲಿಸಿತು.

ದಾಸಕೂಟದ ಆದಿಪುರುಷರೆನಿಸಿದ ಈ ಗುರುಶಿಷ್ಯರಾದ ಮಹಾತ್ಮರ ವಚನಾಮೃತಗಳನ್ನು ಶ್ರಮಪಟ್ಟು ಯಥಾಶಕ್ತಿ ಸಂಗ್ರಹಿಸಿ **'ಶ್ರೀಪಾದರಾಯರ ಮತ್ತು ಶ್ರೀವ್ಯಾಸರಾಯರ ಕೀರ್ತನೆಗಳು, ಸುಳಾದಿಗಳು'** ಎಂಬ ಈ ಚಿಕ್ಕ ಗ್ರಂಥವನ್ನು ಪ್ರಕಟಿಸಿರುತ್ತೇನೆ. ಈ ಗ್ರಂಥಶೋಧನದಲ್ಲಿ ಶ್ರಮಪಟ್ಟ ವೇ. ಮೂ. ಯು. ವಾಸುದೇವಾಚಾರ್ಯರಿಗೆ ನನ್ನ ಧನ್ಯವಾದಗಳು. ಇನ್ನು ಮುಂದೆ ಈ ಮಹನೀಯರ ಕೀರ್ತನೆ ಸಂಗ್ರಹವುಳ್ಳವರು ಅದನ್ನು ದಯವಿಟ್ಟು ಕಳುಹಿಸಿದರೆ ಮುಂದಿನ ಮುದ್ರಣದಲ್ಲಿ ಪ್ರಕಟಿಸುವೆನು.

ಉಡುಪಿ,
ತಾ. 4–12–'24.

ಪಾವಂಜೆ ಗುರುರಾವ್,
ಪ್ರಕಾಶಕ,
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ, **ಉಡುಪಿ.**

ಅನುಕ್ರಮಣಿಕೆ.

ಶ್ರೀಪಾದರಾಯರ ಕೀರ್ತನೆಗಳು.

	ಪದ.
ಅ	
ಅಕಟಕಟ ಸಂಸಾರ	೩೬
ಆ	
ಆಶ್ಚರ್ಯಜನಕವಾಗೀ	೪೦
ಇ	
ಇಕ್ಕೋ ನೋಡೆ ರಂಗ	೧೮
ಇಟ್ಟಾಂಗೆ ಇರುವೆನು	೨೭
ಇದನಾದರು ಕೊಡದಿದ್ದರೆ	೧೯
ಎ	
ಎಲ್ಯಾಡಿ ಓಡಿಬಂದೆ	೧೩
ಎಲ್ಯಾಡಿ ಬಂದ್ಯೋ	೪೮
ಏ	
ಏಕೆ ಪುಟ್ಟಿಸಿದಿ ನೀ	೧೫
ಏನಮ್ಮ ಕಲ್ಲ ಬಿಡೆ	೩೧
ಏನಾಯಿತು ಈ ರಂಗಗೆ	೫೦
ಒ	
ಒಲ್ಲೆವ್ವಾ ಲಕುಮಿಯು	೩೩
ಕ	
ಕಂಗಳಿದೇತಕೋ	೨
ಕಂಜನೇತ್ರೆ ಶುಭ	೩೮
ಕಂಬುಕೊಳಲನೂದುತಾ	೩೪

	ಪದ.
ಕಳ್ಳನೆಂದು ದೂರುತಾರೆ	೩೯
ಕಾಳಬೆಳದಿಂಗಳು	೨೧
ಕೇಳಿದ್ಯಾ ಕೌತುಕವನ್ನ	೪೩
ಚ	
ಚಿತ್ತಜನಯ್ಯನ ಚಿಂತಿಸು	೪
ಜ	
ಜೋಜೋ ಜೋಜೋ	೪೪
ತ	
ತಪ್ಪೇನ ಮಾಡಿದೆನೊ	೧೭
ದ	
ದುರಿತಗಜ ಪಂಚಾನನ	೯
ನ	
ನಂದನಂದನ ಪಾಹಿ	೩೫
ನಲಿದಾಡೆ ಎನ್ನ ನಾಲಿಗೆ	೪೭
ನಾನೇನು ನಿನಗೆ ಬೇಡುವದಿಲ್ಲ	೧೪
ನಾರಾಯಣ ನಿನ್ನ ನಂಬಿದೆ	೧೦
ನೀನೇ ಬಲ್ಲಿದನೊ	೩೭
ಪ	
ಪಾಲೊಳಗದ್ದು ನೀರೊಳಗದ್ದು	೧೨
ಪೋಪ ಹೋಗೋಣ	೧೬

ಬ	ಪದ.
ಬಾರೋ ನಮ್ಮ ಮನೆಗೆ	೮
ಬಾರೋ ಮನೆಗೆ ಗೋವಿಂದ	೨೬
ಬಿಡಿಬಿಡಿ ಸಂದೇಹವನ್ನು	೪೧
ಭ	
ಭೃಂಗಾ ನಿನ್ನಟ್ಟಿದನೆ	೩೨
ಭೂಷಣಕೆ ಭೂಷಣ	೫
ಮ	
ಮದನನಯ್ಯನ	೪೬
ಮರೆತಿಯೋನೋ	೪೫
ಮರುದಂಶನ ಮತ	೭
ಮಾನಸಿಧಿ ಶ್ರೀಕೃಷ್ಣ	೩೦
ಮೋಸಹೋದೆನಲ್ಲ	೩
ಯ	
ಯಾಕೋ ಇಂಥ ದುಡುಕು	೨೫

ರ	ಪದ.
ರಂಗನಾಥನ ನೋಡುವ ಬನ್ನಿ	೨೨
ರಂಗ ಮನೆಗೆ ಬಾರೊ	೪೨
ವ	
ವಂದಿಪೆ ನಿನಗೆ ಗಣನಾಥ	೧
ವನಜನಯನ ನವ ನವ	೨೯
ವಿಧಿಗೆ ದಯವಿಲ್ಲವಕ್ಕ	೨೮
ವ್ಯರ್ಥವಲ್ಲವೆ ಜನ್ಮ	೨೦
ಸ	
ಸದ್ದುಮಾಡಲು ಬ್ಯಾಡ	೪೯
ಸರಸಿಜಾಕ್ಷ ಸರಸದಿಂದ	೨೩
ಸುಮ್ಮನೆ ವೈಷ್ಣವನೆಂಬಿರಿ	೬
ಸ್ಮರಿಸಿದವರನು ಕಾವ	೧೧
ಹ	
ಹರೇ ವೆಂಕಟ ಶೈಲವಲ್ಲಭ	೨೪

ಶ್ರೀವ್ಯಾಸರಾಯರ ಕೀರ್ತನೆಗಳು.

ಅ	ಪದ.
ಅಂಗನೆ ನೋಡುವ ಬಾರೆ	೪೬
ಆ	
ಆರು ನಿನಗಿದಿರೊ	೩೯
ಆವಾವ ಬಗೆಯಲ್ಲಿ	೨೪
ಇ	
ಇದಿರ್ಯಾರೊ ಗುರುವೆ	೩೦
ಉ	
ಉಕ್ಕುವ ತುಪ್ಪದಿ ಕಯ್ಯ	೫೦

ಎ	ಪದ.
ಎಂತು ಪೊಗಳುವೆ ನಿಮ್ಮ	೧೬
ಎಂದೆಂದೆನ್ನ ಮನದಿಂದ	೩೨
ಎನ ಬಿಂಬಮೂರುತಿಯ	೧೧
ಎನ್ನ ಮನ ಕಂಡಕಡೆಗೆ	೪೩
ಏ	
ಏನು ಸುಕೃತವ ಮಾಡಿ	೪೪
ಏನೆಂಬೆ ನಿನ್ನ ಕರುಣ	೩೧

	ಪದ.
ಓ	
ಓಲಗ ಸುಲಭವೊ	೭
ಕ	
ಕಡಗೋಲ ತಾರೆನ್ನ	೬೨
ಕಂದನಿಗೆ ಕಾಲಿಲ್ಲವಮ್ಮ	೬೦
ಕಾಣದೆ ನಿಲ್ಲಲಾರೆ	೩೩
ಕೃಷ್ಣ ಕೃಷ್ಣ ಕೃಷ್ಣಯೆಂದು	೩೫
ಕೊಳಲನೂದುವ ಚದುರ	೨
ಗ	
ಗೋವರ್ಧನ ಗಿರಿಧರ	೫೬
ಘ	
ಘಟಿಕಾಚಲ ವಾಸಿಯು	೫೭
ಭ	
ಭೀಭೀ ಮನವೆ	೨೭
ಜ	
ಜನುಮ ಜನುಮದಲ್ಲಿ	೧೨
ಜಯಜಯ ಜಯರಾಯ	೧೯
ಜಾಣ ನೀನಹುದೊ	೬೧
ತ	
ತಡವ್ಯಾಕೆ ಶ್ರೀರಾಮ	೪
ತೊಂಡನ ಕಂಡು ನಾ	೪೧
ತೋರಿರೈ ನೀವೆಲ್ಲರು	೬
ತೋರೇ ಬೇಗನೆ ತೋಯಜ	೧೪
ದ	
ದಾರಿಯ ತೋರೋ ಗೋಪಾಲ	೯
ದಾಸರೆಂದರೆ ಪುರಂದರ	೬೩
ದೂರಕೆ ದೂರನೆಂದು	೨೨
ಧ	ಪದ.
ಧೀರನ ನೋಡಿರೈ	೨೦
ನ	
ನಮೋ ಪಾರ್ವತೀಪತಿ	೬೮
ನರನಾದ ಮೇಲೆ ಹರಿ	೩
ನಾನೆಲ್ಲಿ ಜ್ಞಾನಿಯು	೫೫
ನಿದ್ರೆ ಬರುತಿದೆ ಯೆನಗೆ	೪೨
ನಿನಗೆ ನೀನೆ ಕೃಷ್ಣಾ	೮
ನಿನಗಾರು ಸರಿಯಿಲ್ಲ	೧೦
ನಿನ್ನಾಜ್ಞಾದವನು	೨೫
ನಿನ್ನ ಮಗನೇನೆ ಗೋಪಿ	೫೨
ನಿನ್ನ ನೋಡಿ ಧನ್ಯನಾದೆ	೫೩
ನೀನೆ ವರಗುರು	೪೯
ಪ	
ಪತ್ರವ ಕಳುಹಿದಳಾ	೨೧
ಪುಟ್ಟದೆ ಭುವಿಯಲ್ಲಿ	೪೮
ಬ	
ಬಗೆಯದಿರು ಬಗೆಯದಿರು	೧೩
ಬಾರೋ ಸೇರೋ ಯಲೊ	೩೭
ಮ	
ಮಂಗಳಂ ಜಯ ಮಂಗಳಂ	೬೬
ಮಂಗಳ ಮುಖ್ಯಪ್ರಾಣೇಶಗೆ	೬೭
ಮನ್ನಿಸೆನ್ನ ಮನ್ಮಥ ಜನಕ	೧೫
ಮಹಿಮೆ ಸಾಲದೆ ಇಷ್ಟು	೧೭
ಯ	
ಯಾಕೆ ವೃಂದಾವನ ಯಾಕೆ	೨೬

ರ	ಪದ.
ರಂಗ ಬಾರ ಬಾಲೆ ಕುರಂಗ	೪೭
ರಂಗಯ್ಯ ಮನೆಗೆ ಬಂದರೆ	೫೧
ಲ	
ಲಾಭ ಸಾಲದೆ ಇಂಥ	೨೯
ಲಾಭವಹದು ಹರಿ	೪೦
ವ	
ವರ್ಣಿಸಲಳವೆ ಗುಣ	೫೯
ವಾದಿಗಜಮಸ್ತಕಾಂಕುಶ	೧೮
ವಾದಿಗಳೆಲ್ಲರ ಗೆದ್ದ	೫೮
ವೃಂದಾವನದಿ	೩೬

ಶ	ಪದ.
ಶರಣು ಶರಣು	೫
ಶ್ರೀವದನ ಕುಮುದ ಚಂದ್ರ	೬೪
ಸ	
ಸಂಸಾರವೆಂಬ ಮಾರಿಗೆ	೨೮
ಸಾರಿರೋ ಡಂಗುರವ	೬೫
ಸಿಕ್ಕಿದನೆಲೆ ಜಾಣೆ	೧
ಸೇರಿವೆನು ಸೇರಿದೆನು	೪೫
ಹ	
ಹರಿದಾಸರ ಸಂಗಕೆ	೨೩
ಹರಿದಿನ ಪಾತಕ ಪರಿ	೩೮
ಹಲವು ಪರಿಯಲಿ	೩೪
ಹಿಂದೆ ಇಂದು ಮುಂದೆ	೫೪

ಶ್ರೀವ್ಯಾಸರಾಯರ ಸುಳಾದಿಗಳು.

		ಪುಟ.
೧.	ಸುಷುಪ್ತಿ ಸುಳಾದಿ	73.
೨.	ಶ್ರೀದೇವಿ ಸುಳಾದಿ	74.
೩.	ಕಾಮ ಸುಳಾದಿ	76.
೪.	ಹರಿಚರಿತೆಶ್ರವಣ	77.
೫.	ದೃಢಭಕ್ತಿ ಸುಳಾದಿ	78.
೬.	ಭಕ್ತಾಧೀನ ಸುಳಾದಿ	79.
೭	ವ್ಯಾಪ್ತಿ ಸುಳಾದಿ	80.
೮.	ನಾಮಸ್ಮರಣ ಸುಳಾದಿ	81.
೯.	ಉಪಾಸನಾ ಸುಳಾದಿ	83.
೧೦.	ಕ್ಷಮಾಪನಾ ಸುಳಾದಿ	84.

ಸಂಪೂರ್ಣವು.

ಶ್ರೀಃ

॥ ಶ್ರೀಪಾಂಡುರಂಗವಿಟ್ಠಲಾಯ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಶ್ರೀಪಾದರಾಯರ ಕೀರ್ತನೆಗಳು.

ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ ।
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ ॥

೧. ರಾಗ ನಾಟಿ, ಆದಿತಾಳ.

ವಂದಿಪೆ ನಿನಗೆ ಗಣನಾಥ । ಮೊದ । ಲೊಂದಿಪೆ ನಿನಗೆ ಗಣನಾಥ ॥ ಪಲ್ಲ ॥ ಬಾದ ವಿಘ್ನ ಕಳೆ ಗಣನಾಥ ॥ ॥ ಅನುಪಲ್ಲ ॥ ಹಿಂದೆ ರಾವಣನು ಮದ । ದಿಂದ ನಿನ್ನ ಪೂಜಿಸದೆ । ಸಂದ ರಣದಲಿ ಗಣನಾಥ ॥ ೧ ॥ ಮಾಧವ ನಾಜ್ಞದಿ ಧರ್ಮ । ರಾಜ ನಿನ್ನ ಪೂಜಿಸಲು । ಸಾಧಿಸಿದ ರಾಜ್ಯ ಗಣ ನಾಥ ॥ ೨ ॥ ಮಂಗಳ ಮೂರುತಿ ಗುರು । ರಂಗವಿಟ್ಠಲನ ಪಾದ । ಭೃಂಗನೆ ಪಾಲಿಸೊ ಗಣನಾಥ ॥ ೩ ॥ ಶ್ರೀಃ ॥

೨. ರಾಗ ತೋಡಿ, ರೂಪಕತಾಳ.

ಕಂಗಳಿದೇತಕೋ । ಕಸ್ತೂರಿ ರಂಗನ ನೋಡದ । ಕಾವೇರಿ ರಂಗನ ನೋಡದ । ಜನರ ॥ ಪಲ್ಲ ॥ ಜಗಂಗಳೊಳಗೆ । ಮಂಗಳ ಮೂರುತಿ ।

ರಂಗನ ಶ್ರೀಪಾ । ದಂಗಳ ನೋಡದ ॥ ಅನುಪಲ್ಲ ॥ ಎಂದಿಗಾದರೊಮ್ಮೆ ಜನರು । ಬಂದು ಭೂಮಿಯಲ್ಲಿ ನಿಂದು ॥ ಚಂದ್ರ ಪುಷ್ಕರಣಿಯಲ್ಲಿ ಮಿಂದಾ । ನಂದದಿಂದ ರಂಗನ ನೋಡದ ॥ ೧ ॥ ಹರಿಪಾದೋದಕ ಸಮ ಕಾವೇರಿ । ವಿರಜಾನದಿಯ ಸ್ನಾನವ ಮಾಡಿ ॥ ಪರಮ ವೈಕುಂಠ ರಂಗ ಮಂದಿರ । ಪರವಾಸುದೇವನ ನೋಡದ ॥ ೨ ॥ ಹಾರ ಹೀರ ವೈಜಯಂತಿ । ತೋರಮುತ್ತಿನ ಹಾರ ಪದಕ ॥ ತೇರನೇರಿ ಬೀದಿಲಿ ಬರುವ । ರಂಗವಿಠಲರಾಯನ ನೋಡದ ॥ ೩ ॥ ಶ್ರೀಃ ॥

೩. ರಾಗ ಕೇದಾರಗೌಳ, ಆದಿತಾಳ.

ಮೋಸ ಹೋದೆನಲ್ಲ । ಸಕಲವು । ವಾಸುದೇವ ಬಲ್ಲ ॥ ಪಲ್ಲ ॥ ಭಾಸುರಾಂಗ ಶ್ರೀವಾಸುಕಿಶಯನನ । ಸಾಸಿರ ನಾಮವ ಲೇಸಾಗಿ ಪಠಿಸದೆ ॥ ॥ ಅನುಪಲ್ಲ ॥ ದುಷ್ಟ ಜನರ ಕೂಡಿ । ನಾನತಿ । ಭ್ರಷ್ಟನಾದೆ ನೋಡಿ ॥ ದೃಷ್ಟ್ಯಗೋಚರ ಮುರ ಮುಷ್ಟಿ ವೈರಿಯ । ದೃಷ್ಟಿಯಿಂದ ನಾ ದೃಷ್ಟಿಸಿ ನೋಡದೆ ॥ ೧ ॥ ಕಾಯವು ಸ್ಥಿರವಲ್ಲ । ಎನ್ನೊಳು । ಮಾಯೆ ತುಂಬಿತಲ್ಲ ॥ ಪ್ರಾಯ ಮದದಿ ಪರಸ್ತ್ರೀಯರ ಕೂಡ್ಯಾಡಿ । ಕಾಯಜ ಜನಕನ ಗಾಯನ ಮಾಡದೆ ॥ ೨ ॥ ಕಂಗಳಿಂದಲೆನೊಡೊ । ದೇವ ಎ । ನ್ನಂಗ ಸಂಗವ ಮಾಡೋ ॥ ಮಂಗಳ ಮೂರುತಿ ಶ್ರೀರಂಗವಿಠಲ ಮುಂ । ದಂಗ ಬಾರದಂತೆ ನೀ ದಯಮಾಡೋ ॥ ೩ ॥ ಶ್ರೀಃ ॥

೪. ರಾಗ ಸಾವೇರಿ, ಆದಿತಾಳ.

ಚಿತ್ತಜನಯ್ಯನ ಚಿಂತಿಸು ಮನವೆ । ನೀ । ಮತ್ತನಾಗಿರ ಬೇಡವೊ ॥ ॥ ಪಲ್ಲ ॥ ಕಾಲನ ಬಂಟರು ನೂಲು ಹಗ್ಗವ ತಂದು । ಕಾಲು ಕೈಗಳ ಕಟ್ಟಿ ಮೇಲೆ ಕುಟ್ಟಿ ॥ ಕಾಲಾ ಸೂತ್ರದಲಿದ್ದ ಶೂಲದಿಂದೆಳವಾಗ । ಪಾಲಿಸುವರಾರಯ್ಯ ಜಾಲವನು ಮಾಡದೆ ॥ ೧ ॥ ದಂಡಧರನ ಭಟರಾ ಖಂಡ ಕೋಪದಿ ಬಂದು । ಕೆಂಡದ ಒಳಗೆಳದು ಕೊಂಡೊಯ್ದು ನಿನ್ನ ॥ ಖಂಡ ಖಂಡವ ಕಿತ್ತು ಕುಂಡದೊಳಿಡುವಾಗ । ಹೆಂಡಿರೊ ಮಕ್ಕಳೊ ಕಂಡು

ಬಿಡಿಸುವರಾರು ॥ ೨ ॥ ಅಂಗುಟಿಗೆ ಬಾಣಂಗಳೇರಿಸಿ ಸಿನ್ನೆರಡು । ಕಂಗಳಿಗೆ ಸೀಸಂಗಳ್ಹೊಯ್ಯಲು ॥ ತಂಗಿ ಅಕ್ಕ ಬಂದು ಭಂಗವ ಬಿಡಿಸುವರೆ। ಅಂಗವು ಸ್ಥಿರವಲ್ಲ ರಂಗ ವಿಠ್ಠಲ ಬಲ್ಲ ॥ ೩ ॥ ಶ್ರೀಃ ॥

೫. ರಾಗ ಸಾರಂಗ, ಝಂಪೆತಾಳ.

ಭೂಷಣಕೆ ಭೂಷಣ ಇದು ಭೂಷಣ ॥ ಶೇಷಗಿರಿವಾಸ ಶ್ರೀವರ ವೆಂಕಟೇಶ ॥ ಪಲ್ಲ ॥ ನಾಲಿಗೆಗೆ ಭೂಷಣ ನಾರಾಯಣನಾಮ । ಕಾಲಿಗೆ ಭೂಷಣ ಹರಿಯಾತ್ರೆಯೂ ॥ ಆಲಯಕೆ ಭೂಷಣ ತುಲಸಿ ವೃಂದಾವನವಿ। ಶಾಲಕರ್ಣಕೆ ಭೂಷಣ ವಿಷ್ಣುಕಥೆಯೂ ॥ ೧ ॥ ದಾನವೇ ಭೂಷಣ ಎರಡು ಹಸ್ತಂಗಳಿಗೆ। ಮಾನವೇ ಭೂಷಣ ಮಾನವರಿಗೆ ॥ ಜ್ಞಾನವೇ ಭೂಷಣ ಮುನಿಯೋಗಿವರಗಳಿಗೆ । ಮಾನಿನಿಗೆ ಭೂಷಣ ಪತಿಭಕ್ತಿಯೂ ॥ ೨ ॥ ರಂಗ ನಿನ್ನ ನೋಡುವದೆ ಕಂಗಳಿಗೆ ಭೂಷಣ। ಮಂಗಳಾಂಗನ ಮಣಿಯೆ ಶಿರ ಭೂಷಣ ॥ ಶೃಂಗಾರ ತುಲಸಿಮಣಿ ಕೊರಳಿಗೆ ಭೂಷಣ। ರಂಗ ವಿಠ್ಠಲ ನಿನ್ನ ನಾಮ ಅತಿ ಭೂಷಣ ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೬. ರಾಗ ಜುಂಜೋಟಿ, ಆದಿತಾಳ.

ಸುಮ್ಮನೆ ವೈಷ್ಣವನೆಂಬಿರಿ । ಪರ । ಬೊಮ್ಮ ಸುಜ್ಞಾನವನರಿಯದ ಮನುಜನ ॥ ಪಲ್ಲ ॥ ಮುಖವ ತೊಳೆದು ನಾಮವನಿಟ್ಟೆನಲ್ಲದೆ । ಸುಖತೀರ್ಥಶಾಸ್ತ್ರವನೋದಿದೆನೆ ॥ ಸುಖಕೆ ಶೃಂಗಾರಮಾಲೆ ಹಾಕಿದೆನಲ್ಲದೆ। ಭಕುತಿ ರಸದಲ್ಲಿ ಮುಳುಗಿದೆನೇನಯ್ಯ ॥ ೧ ॥ ಊರು ಮಾತುಗಳಾಡಿ ದಣಿದೆನಲ್ಲದೆ । ನಾರಾಯಣ ಕೃಷ್ಣ ಶರಣೆಂದೆನೆ ॥ ನಾರಿಯ ನುಡಿಕೇಳಿ ಮರುಳಾದೆನಲ್ಲದೆ। ಗುರುಹಿರಿಯರ ಮಾತ ಮನ್ನಿಸಿದೆನೇನಯ್ಯ ॥ ೨ ॥ ಜಗತು ಸತ್ಯವೆಂದು ಪಂಚಭೇದವ ತಿಳಿದು। ರಾಗ ದ್ವೇಷಗಳೊಂಭತ್ತು ವರ್ಜಿಸಿ ॥ ಭಾಗವತದಲ್ಲಿ ಶ್ರವಣ ಮನನದಿಂದ । ನಿಗಮಗೋಚರನೆಂದು ತಿಳಿದಿಹೆನೇನಯ್ಯ ॥ ೩ ॥ ನರೋತ್ತಮಗಧಿಕ ಗಂಧರ್ವರಿಂದಧಿಕ। ಸುರ ಇಂದ್ರಗಧಿಕ ಸಾಂಬಗಧಿಕ॥ ವಿರಿಂಚನಿಗಧಿಕ ಸಿರಿಗಧಿಕ। ಹರಿ

ಸರ್ವೋತ್ತಮನೆಂದು ತಿಳಿದಿಹನೇನಯ್ಯ ॥ ೪ ॥ ಗಂಗೆಯೊಳ್ ಮೈ ಮಣ್ಣ ತೊಳೆದಿಹನಲ್ಲದೆ । ಹಿಂಗದೆ ಸ್ನಾನವ ಮಾಡಿದನೆ ॥ ರಂಗವಿಠಲನ್ನ ನಿಜವಾದ ದಾಸರ । ಸಂಗದೊಳಗೆ ಓಲಾಡುತಿದ್ದನೇನಯ್ಯ ॥ ೫ ॥

೭. ರಾಗ ನಾದನಾಮಕ್ರಿಯೆ, ಅಟತಾಳ.

ಮರುದಂಶನ ಮತ ಹಿಡಿಯದೆ । ಇಹ । ಪರಗಳಲಿ ಸುಖವಿಲ್ಲವೆಂದು । ಅರಿತು ವಿವೇಕದಿ ಮರೆಯದೆ । ನಮ್ಮ । ಗುರುರಾಯರ ನಂಬಿ ಬದುಕಿರೋ ॥ ಪಲ್ಲ ॥ ಕ್ಷೀರವ ಕರದಿಟ್ಟಮಾತ್ರದಿ । ನಂ । ಸಕ್ಕರವಿಲ್ಲದೆ ಘೃತವಾಗದಂತೆ ॥ ಸೂರಿ ಜನರ ಸಂಗವಿಲ್ಲದೆ । ಸಾಧು । ವೈರಾಗ್ಯವು ಸಂಭವಿಸದಂತೆ ॥ ೧ ॥ ಉಪದೇಶ ಲಭ್ಯವಲ್ಲದ ಮಂತ್ರ । ವೇಸು । ಜಪಿಸಲು ಫಲಂಗಳ ಕೊಡದಂತೆ ॥ ಉಪವಾಸ ವ್ರತಂಗಳಿಲ್ಲದ । ಜೀವ । ತಪಸಿಯೆನಿಸಿಕೊಳಲರಿಯದಂತೆ ॥ ೨ ॥ ಸಾರ ಮಧ್ವಶಾಸ್ತ್ರ ಓದದೆ । ಗುರು । ತಾರತಮ್ಯ ಜ್ಞಾನ ಪುಟ್ಟದಂತೆ ॥ ಶ್ರೀರಂಗ ವಿಠ್ಠಲನ ಭಜಿಸದೆ । ಮುಂದೆ । ಪರಮಗತಿ ದೊರಕಲೊಲ್ಲದಂತೆ ॥ ೩ ॥ ಶ್ರೀಃ ॥

೮. ರಾಗ ಪುನ್ನಾಗವರಾಳಿ, ಆದಿತಾಳ.

ಬಾರೋ ನಮ್ಮ ಮನೆಗೆ । ಗೋಪಾಲಕೃಷ್ಣ । ಬಾರೋ ನಮ್ಮ ಮನೆಗೆ ॥ ॥ ಪಲ್ಲ ॥ ಮೂರ್ಜಗವೆಲ್ಲ ನಿನ್ನ । ಹೊಟ್ಟೆಯೊಳಗೆ ಇಟ್ಟ ॥ ಗೆಜ್ಜೆಯ ಕಟ್ಟಿ ತ । ಫೆಜ್ಜೆಯನಿಕ್ಕುತ ॥ ೧ ॥ ಕಸ್ತೂರಿ ತಿಲಕವು । ಶಿಸ್ತಾಗಿ ಪಣೆಯೊಳಿಟ್ಟ ॥ ಮಸ್ತಕದಲಿ ಪರ । ವಸ್ತುಗಳ್ಯಾಕೊ ॥ ೨ ॥ ಗೊಲ್ಲ ಬಾಲಕರನ್ನು । ನಿಲ್ಲಿಸಿ ಹೆಗಲೇರಿ ॥ ಗುಲ್ಲುಮಾಡದೆ ಮೊಸ । ರೆಲ್ಲ ಕುಡಿದ ಕೃಷ್ಣ ॥ ೩ ॥ ನಾರಿಯರು ಬಿಚ್ಚಿಟ್ಟ । ಶೀರೆಗಳೆಲ್ಲ ಪೊಯ್ದು । ನಾರಿನಿಲ್ಲದೆ ಕರ । ತಾರೆ ಶ್ರೀಕೃಷ್ಣನ ॥೪॥ ಅಂಗಳದಲ್ಲಿ ಬಲು । ಶೃಂಗಾರವಾಗಿರುವ ॥ ಮಂಗಳಮಹಿಮ ಭು । ಜಂಗಶಯನ ಕೃಷ್ಣ ॥ ೫ ॥ ನಾರಿಯರು ನಾವೆಲ್ಲ । ನೀರಿಗೆ ಹೋಗುವಾಗ ॥ ದಾರಿಯಡ್ಡ ಕಟ್ಟಿ । ಬಾರೆಂದು ಕರೆದ ಸ್ವಾಮಿ ॥ ೬ ॥ ಅಂಗನೆಯರ ವ್ರತ । ಭಂಗವ ಮಾಡಿದ ॥ ರಂಗವಿಠಲ ಭವ । ಭಂಗವ ಪರಿಹರಿಸಿ ॥ ೭ ॥ ಶ್ರೀಃ ॥

೯. ಶ್ರೀರಾಗ, ಅಟತಾಳ.

ಮದಾಂತಗಜ ಪಂಚಾನನ । ನರ । ಹರಿಯೆ ದೇವದೇವ ಕಾಯೋ ಗೋವಿಂದ ॥ ಪಲ್ಲ ॥ ಹೆತ್ತ ಮಕ್ಕಳು ಹುಚ್ಚರಾದರೆ ತಾಯಿತಂದೆ । ಎತ್ತದೆ ನೆಲಕೆ ಬಿಡುವರೆ ಗೋವಿಂದ ॥ ೧ ॥ ಪುನ್ನ ಮಾಡಿದ ಕರ್ಮ ಬೆನ್ನ ಬಿಡದಿದ್ದರೆ । ನಿನ್ನನೊಲ್ಲೈಸಲೇಕೋ ಗೋವಿಂದ ॥ ೨ ॥ ಹೆಸರುಳ್ಳ ನದಿಗಳ ಒಳಗೊಂಬೊ ಸಮುದ್ರನು ॥ ಬಿಸುಡೋನೆ ಕಾಲುಹೊಳೆಯ ಗೋವಿಂದ ॥ ೩ ॥ ಆಪತ್ತು ತಾಪತ್ರಯ ಬೆನ್ನ ಬಿಡದಿದ್ದರೆ ॥ ಶ್ರೀಪತಿ ಶರಣೆನ್ನಲೇಕೊ ಗೋವಿಂದ ॥ ೪ ॥ ಒಂದು ಕುರಿಗೆ ಆರು ಹುಲಿ ಬಂದು ಕವಿದಿವೆ ॥ ಬಂಧನ ಬಿಡಿಸಯ್ಯ ತಂದೆ ಗೋವಿಂದ ॥ ೫ ॥ ಅರಸು ಮುಟ್ಟಲು ದಾಸಿ ರಂಬೆಯಾದಳು ದೇವ ॥ ಪರಶು ಮುಟ್ಟಲು ಲೋಹ ಸ್ವರ್ಣ ಗೋವಿಂದ ॥ ೬ ॥ ಅಡವಿ ವೃಕ್ಷಕೆ ನೀರೆರೆವರಾರೆಲೊ ದೇವ ॥ ತಡೆಯದೆ ಸಲಹೊ ಎನ್ನೊಡೆಯ ಗೋವಿಂದ ॥ ೭ ॥ ಆಡುವ ಬೊಂಬೆಯಂತೆ ಮೂಜಗದೊಡೆಯ ನೀ ॥ ನಾಡಿಸಿ ಕುಣಿವ ಪಾತಕನೆ ಗೋವಿಂದ ॥ ೮ ॥ ಮಾನಾಭಿಮಾನದೊಡೆಯ ರಂಗ ವಿಠಲ । ಜ್ಞಾನಿಗಳರಸನೆ ಕಾಯೋ ಗೋವಿಂದ ॥ ೯ ॥ ಶ್ರೀಃ ॥

೧೦. ರಾಗ ಶಂಕರಾಭರಣ, ಆದಿತಾಳ.

ನಾರಾಯಣ ನಿನ್ನ ನಂಬಿದೆ । ನಿ । ಷ್ಠೂರತು ಪೊರೆವ ದೈವವೆಲ್ಲಿದೆ ॥ ॥ ಪಲ್ಲ ॥ ನಾ । ಮೀರಿ ದುಷ್ಕರ್ಮವ ಮಾಡಿದೆ । ಅ । ಪಾರಮಹಿಮನೆ ದಯಾನಿಧೆ ॥ ಅನುಪಲ್ಲ ॥ ನಾನಾ ಯೋನಿಗಳಲ್ಲಿ ಬಂದೆನೊ । ಮನ । ತಾಳಲಾರದೆ ಬಲು ನೊಂದೆನೊ । ದೀನರಕ್ಷಕ ಎನಗತಿ ಮುಂದೇನೋ । ಮಾನದಿ ಪಾಲಿಪ ದೊರೆ ನೀನೋ ॥ ೧ ॥ ದಾಸರ ಮನ ಉಲ್ಲಾಸನೆ । ಶ್ರೀಶ । ಆಶ್ರಿತ ಜನರನು ಪೋಷನೆ ॥ ಸಾಸಿರದಾನಂತ ರೂಪನೆ । ಕ್ಲೇಶ । ನಾಶ ಮಾಡಿಸೊ ಶ್ರೀನಿವಾಸನೆ ॥ ೨ ॥ ರಂಗನಗರ ಉತ್ತುಂಗನೆ । ಉ । ತ್ತುಂಗ ಗುಣಗಳ ಅಂತರಂಗನೆ ॥ ಗರುಡಗಮನ ವಿಹಂಗನೆ । ಅ । ನಂಗನ ಪಿತ ರಂಗವಿಠಲನೆ ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೧೧. ರಾಗ ಭೈರವಿ, ಆದಿತಾಳ.

ಸ್ಮರಿಸಿದವರನು ಕಾವ । ನಮ್ಮ । ಸೂರ್ಯನೇಕ ಪ್ರಭಾವ ॥ ಪಲ್ಲ ॥ ಸುರಮುನಿಗಳ ಸಂಜೀವ । ಸಿರಿವೆಂಕಟ ನಮ್ಮನು ಪೊರೆವ ॥ ಅನುಪಲ್ಲ ॥ ವೈಕುಂಠದಿಂದ ಬಂದು । ಶೇಷಾಚಲದಲಿ ನಿಂದು । ಭಕುತರನು ಪಾಲಿಪೆನೆಂದು । ಅಭಯ ದಯಾಕರ ಸಿಂಧು ॥ ಭಕುತಿ ಮುಕುತಿಯೀವ ವತ್ಸಲದೇವ । ಸಕಲ ಜನ ಸೇವಿತ ಘನ ಪರಿಪೂರ್ಣ । ವಿಕಸಿತ ಕಮಲನಯನ ಕಂಜನಾಭನೆ । ಪ್ರಕಟಿತ ಶುಭಕೀರ್ತಿಯಿಂದ ಮೆರವ ॥ ೧ ॥ ಜ್ಞಾನಿಗಳ ಗೋಚರನು । ತನ್ನ । ಧ್ಯಾನಿಪರ ಮನೋಹರನು । ಮಾನವರಾ ಶಿರಿಧರನು । ಬಹು । ದೈನ್ಯಾದಿಗಳ ಉದ್ಧರನು ॥ ಆನಂದ ಮಹಿಮನು ಅನಂತಾವತಾರನು । ಅನುದಿನ ನೆನವರ ಹೃದಯಮಂದಿರನು । ತನುವಿನ ಕ್ಲೇಶ ದುರಿತಸಂಹರನು । ಘನ ಮಣಿ ಭೂಷಣ ಶೃಂಗಾರನು ॥ ॥ ೨ ॥ ಜಯತು ದೋಷವಿನಾಶ । ಜಯ । ಜಯತು ಮಹಿಮವಿಶೇಷ । ಜಯತು ಶ್ರೀಹೃಷೀಕೇಶ । ಜಯ । ಜಯತು ಶ್ರೀವೆಂಕಟೇಶ ॥ ಜಯತು ಜನಾರ್ದನ ಜಗದ ಮೋಹನ । ಜಯ ಗಜವರದ ಪಾಲಿಪ ನಿಪುಣ । ಜಯ ಕಮಲಜಪಿತ ಜಯ ಜಗದೀಶ । ಜಯ ರಂಗ ವಿಠಲ ಕರುಣ ವಿಲಾಸ ॥ ೩ ॥ ಶ್ರೀಃ ॥

೧೨. ರಾಗ ಮಧ್ಯಮಾವತಿ, ಆದಿತಾಳ.

ಪಾಲೊಳಗದ್ದು ನೀರೊಳಗದ್ದು ಹರಿ ನಾ ನಿನ್ನ ನಂಬಿದೆನೊ ॥ ಪಲ್ಲ ॥ ಜಲಜನಾಭ ನೀನಿಟ್ಟ ತೆರದಲ್ಲಿ ಇರುವೆನ್ನೈಯ ॥ ಅನುಪಲ್ಲ ॥ ಸುಖದುಃಖದೊಳಗಿಡು ಸುಕೃತ ದುಷ್ಕೃತ ಮಾಡು । ನಿಖಿಳ ದುರಿತದೊಳೆನ್ನ ಲೋಲ್ಯಾಡಿಸು ॥ ಅಖಿಳಾಖಿಳನೆ ನೀನು ಅಭಯಾಭಯವ ಸೂಸು । ಮಕರಕುಂಡಲ ನಿನ್ನ ಮತವೆ ಸಮ್ಮತವಯ್ಯ ॥ ೧ ॥ ಜ್ಞಾನಾಜ್ಞಾನದೊಳಗಿಡು ಮಾನಾಪಮಾನವೆ ಮಾಡು । ಅನಾಥಾನಾಥರೊಳೆನ್ನ ಅನವರತಾಗಿರಿಸೊ ॥ ದೀನಾದೀನತೆಯೊಳಗೆನ್ನಾ ನೀ ನೀಡ್ಯಾಡು । ಶ್ರೀನಾಥ ನಿನ್ನಯ ಮತ ಮತವೆ ಸಮ್ಮತವಯ್ಯ ॥ ೨ ॥ ಪ್ರಾಣಾಪಾನ ವ್ಯಾನೋದಾನ ಸಮಾನಂಗಳ

ಭೇದಿಸು। ಘನದಾರಿದ್ರ್ಯವ ನೂಕು ಸುಖವ ಸುರರೊಳಘಾಕು॥ ಮುನಿಜನರ ಸಂಗ ಪೊರೆವ ರಂಗವಿಠಲ। ನಿನ್ನಯ ಮತ ಮತವೆ ಸನ್ಮತವಯ್ಯ॥ ೩॥

೧೩. ರಾಗ ಶಂಕರಾಭರಣ, ಅಟತಾಳ.

ಎಲ್ಯಾಡಿ ಓಡಿ ಬಂದೆ ಹೇಳಯ್ಯಾ ॥ ಪಲ್ಲ ॥ ನಿಲ್ಲು ನಿಲ್ಲು ಗೋಪಾಲ ಕೃಷ್ಣಯ್ಯಾ ॥ ಅನುಪಲ್ಲ ॥ ನೊಸಲಲ್ಲಿ ಕಿರಿಬೆವರಿಟ್ಟದೆ । ಇಲ್ಲಿ । ಹೊಸಪರಿ ಸುದ್ದಿಯು ಹುಟ್ಟಿದೆ॥ ಹುಸಿಯಲ್ಲ ನಿನ್ನ ಮಾತು ಮುಟ್ಟಿದೆ। ನಿನ್ನ । ನಸುನಗೆ ಕೀರ್ತಿಯು ಹೆಚ್ಚಿದೆ ॥ ೧ ॥ ಬೆರಳ ಉಂಗುರವೆಲ್ಲಿ ಹೋಗಿದೆ। ನಿನ್ನ। ಕೊರಳ ಪದಕವೆಲ್ಲಿ ನೀಗಿದೆ॥ ಆರಳೆಲೆ ಮಾಗಾಯಿ ಸಾಗಿದೆ । ಅವಳ । ದುರುಳ ಮಹಿಮೆಯೆ ಹೀಂಗಾಗಿದೆ ॥ ೨ ॥ ಕಳ್ಳತನವು ಹೇಗೆ ಮಾಡಿದೆ। ನಿನ್ನ। ಸುಳ್ಳು ಕಡೆಗೆ ನಾ ನೋಡದೆ । ಬಲು ಹರುಷದಿಂದಲಿ ಮನ ತಾಳಿದೆ । ಚಲುವ ರಂಗವಿಠಲ ನಗೆ ಗೇಡಾಗಿದೆ ॥ ೩ ॥ ಶ್ರೀಃ ॥

೧೪. ರಾಗ ಜುಂಜೋಟಿ, ಅಟತಾಳ.

ನಾನೇನು ನಿನಗೆ ಬೇಡುವದಿಲ್ಲ । ಎನ್ನ। ಹೃದಯ ಕಮಲದೊಳು ನಿಂದಿರು ಹರಿಯೆ ॥ ಪಲ್ಲ ॥ ಶಿರ ನಿನ್ನಾ ಚರಣದೊಳೆರಗಲಿ। ಎನ್ನ। ನರಚಕ್ಷುಗಳು ನಿನ್ನ ನೋಡಲೊ ಹರಿಯೆ॥ ಕರ್ಣ ಗೀತಂಗಳ ಕೇಳಲಿ। ಎನ್ನ। ನಾಸಿಕ ನಿರ್ಮಾಲ್ಯಾಘ್ರಾಣಿಸಲೊ ಹರಿಯೆ ॥ ೧ ॥ ನಾಲಿಗೆ ನಿನ್ನ ಕೊಂಡಾಡಲಿ। ಎನ್ನ। ಕರಗಳೆರಡು ಕೈಯ ಮುಗಿಯಲೊ ಹರಿಯೆ। ಪಾದ ತೀರ್ಥಯಾತ್ರೆ ಮಾಡಲಿ । ನಿನ್ನ । ಧ್ಯಾನವನೆನಗೆ ಕೊಡುಕಂಡ್ಯ ಹರಿಯೆ ॥ ೨ ॥ ಬುದ್ಧಿ ನಿನ್ನೊಳು ನಲಿದಾಡಲಿ। ಎನ್ನ ಚಿತ್ತ ನಿನ್ನೊಳು ಕುಣಿದಾಡಲೊ ಹರಿಯೆ ॥ ಭಕ್ತ ಜನರ ಸಂಗ ದೊರಕಲಿ। ರಂಗ। ವಿಟ್ಠಲ ನಿನ್ನ ದಯವಾಗಲೊ ಹರಿಯೆ ॥ ೩ ॥ ಶ್ರೀಃ ॥

೧೫. ರಾಗ ಪುನ್ನಾಗವರಾಳಿ, ಝಂಪೆತಾಳ.

ಏಕೆ ಪುಟ್ಟಿಸಿದಿ ನೀ ಸಾಕಲಾರದೆ ಜಗ । ದೇಕ ಕಾರಣ ಪುರುಷನೆ ॥ ಪಲ್ಲ ॥ ಏಕೋ ವಿಷ್ಣುಯೆಂಬೊ । ವಾಕು ಚಿಂತಿಸಿ ಇಂಥಾ ।

ಕಾಕು ಮಾಡುವದುಚಿತವೆ । ಕೃಷ್ಣ ॥ ಅನುಪಲ್ಲ ॥ ಒಡಲಿಗನ್ನವ ಕಾಣೆ । ಉಡಲು ಅರಿವೆಯು ಕಾಣೆ । ಗಡಗಡನೆ ನಡುಗುತಿಹೆನೊ ॥ ಮಡದಿ ಮಾತೆಯರ ಬಿ। ಟ್ಟೊಡಹುಟ್ಟಿದವರ ಬಿ। ಟ್ಟಡವಿ ಪಾಲಾದೆನಲ್ಲ ॥ ಕಡು ಕೊಡುವವರಿಲ್ಲ । ನುಡಿಯ ಕೇಳುವರಿಲ್ಲ । ಬಡತನವು ಕಂಗೆಡಿಸಿತೊ । ಕಡೆಹಾಯ್ಸುವರ ಕಾಣೆ । ನಡು ಮಡುವಿನೊಳು ಕೈಯ । ಬಿಡದೆ ದಡವನು ತೋರಿಸೋ । ಕೃಷ್ಣ ॥ ೧ ॥ ಕೊಟ್ಟವರ ಸಾಲವನು । ಕೊಟ್ಟು ತೀರಿಸದವರ । ಹೊಟ್ಟೆಯಲಿ ಪುಟ್ಟಲಾಯ್ತೋ ॥ ಎಷ್ಟು ಜನ್ಮದಿ ಮನ । ಮುಟ್ಟಿ ಮಾಡಿದ ಕರ್ಮ । ಗಂಟೆಗ ಉಣಿಸುತಿಹನೋ ॥ ಸೃಷ್ಟಿಯೊಳಗೆನ್ನಂಥ । ಕೆಟ್ಟಪಾಪಿಷ್ಠ ಜನ । ಪುಟ್ಟಸಲಿಲ್ಲವೇನೋ ॥ ವಿಟ್ಠಲನೆ ನಿನ್ನ ಮನ । ಮುಟ್ಟಿ ಭಜಿಸಿ ಹಿಂದೆ । ಎಷ್ಟು ಜನ ಬದುಕಲಿಲ್ಲ । ಕೃಷ್ಣ ॥ ೨ ॥ ಆಳು ದೇಹವು ಗೇಣು । ಕೀಳಾಗಿ ಪಲ್ಗಿರಿದು । ಖೂಳಜನರುಗಳ ಮನೆಗೆ ॥ ಹಾಳು ಒಡಲಿಗೆ ತುತ್ತು । ಕೂಳಿಘೋಗ್ಯವರನ್ನ । ಓಲೈಸಲಾರೆನಲ್ಲೊ ॥ ಬಾಳು ಈ ಪರಿಯಾದ । ಮೇಲೆ ಭೂಮಿಯಲಿ ಬಹು । ಕಾಲಕಳೆಯುವದುಚಿತವೆ ॥ ಆಲಸ್ಯ ಮಾಡದೀ । ವೇಳೆಯಲಿ ನೀನೆನ್ನ । ಪಾಲಿಸಲು ಬಹು ಕೀರ್ತಿಯೋ । ಕೃಷ್ಣ ॥ ೩ ॥ ಏನೆಂದು ಸಿರಿಯರಸ । ನೆಂದು ಸ್ತುತಿಸಾರುತಿದೆ । ಬಂದುದೀಗೇನೊ ಸಿರಿಯೊ ॥ ಒಂದೊಂದು ನಿಮಿಷ ಯುಗ । ದಿಂದಧಿಕವಾಗುತಿದೆ । ಮುಂದೋರಘಾಂಗಾಯಿತೊ ॥ ಸಂದೇಹವಿಲ್ಲ ಗೋ । ವಿಂದ ಶ್ರೀಪಾದದಾಣೆ । ತಂದೆ ನೀ ರಕ್ಷಿಸದಿರೆ ॥ ಮುಂದೆ ಭಜಿಸುವವರು ಹೀ । ಗೆಂದು ವಾರ್ತೆಯ ಕೇಳೆ । ಚಂದವಪಕೀರ್ತಿ ಮಾತು । ಕೃಷ್ಣ ॥ ೪ ॥ ಹರಿಯಾತ್ರೆ ಮಾಡಲಿಲ್ಲ । ಹರಿಮೂರ್ತಿ ನೋಡಲಿಲ್ಲ । ಹರಿದಾಸನಾಗಲಿಲ್ಲ ॥ ಹರಿಯ ಸ್ಮರಣೆಯ ಸ್ಮರಿಸಿ । ಶಿರಿತುಲಸಿ ಪುಷ್ಪವನು । ಕರವೆತ್ತಿ ನೀಡಲಿಲ್ಲ ॥ ಸರುವಜ್ಞರಾಯರು । ವಿರಚಿಸಿದ ಗ್ರಂಥಗಳ । ದರುಶನವ ಮಾಡಲಿಲ್ಲ ॥ ಸ್ಮರಿಸಲಾರದ ಪಾಪ । ಸ್ಮರಣೆ ಪೂರ್ವಕ ಮಾಡಿ । ಸ್ಥಿರ ಭಾಜನಾದೆನಲ್ಲ । ಕೃಷ್ಣ ॥ ೫ ॥ ಉರಿಯೊಳಗೆ ಬಿದ್ದು ಶ । ರೀರವನೆ ಕಳೆಯಲೊ । ಪರುವತವನೇರ್ಯುರುಳಲೊ ॥ ಕೊರಳಿ ಘಗ್ಗವ ಹಾಕಿ । ಮರವೇರಿ ಕರಬಿಡಲೊ । ಗರಗಸದಿ ಶಿರ ತರಿಯಲೊ ॥

ಕರಿಯು ಸೊಂಡಿಲ ಪಿಡಿದು । ಧರಧರನೆ ಎಳೆಯಲೊ । ಉರಗಗರಳವ ಸವಿಯಲೊ ॥ ಕರುಣವಾರಿಧಿ ನೀನೆ । ಕರಪಿಡಿದು ಸಲಹದಿರೆ । ಧರೆಯನುದ್ಧರಿಪರ್ಯಾರೊ । ಕೃಷ್ಣ ॥ ೬ ॥ ಎಷ್ಟು ಹೇಳಲಿ ಯೆನ್ನ । ಕಷ್ಟಕೋಟಿಗಳನ್ನ । ಸುಟ್ಟೀಗ ಬೇಯಿಸಿದಿಕೊ ॥ ಕೃಷ್ಣನಾಮ ವಜ್ರಕ್ಕೆ । ಬೆಟ್ಟ ದುರಿತವನೀಗ । ಥಟ್ಟನೆ ಬಂದು ನೀನು ॥ ಕಷ್ಟಪಟ್ಟ ಮಗನೆಂದು । ದೃಷ್ಟಿ ನಿರೋಧಿಸ್ಯೆನ್ನ । ಗಟ್ಟ್ಯಾಗಿ ಪಿಡಿವರಾರೊ ॥ ಇಷ್ಟವನು ಸಲ್ಲಿಸಿ । ಗುಟ್ಟಿಲ್ಲಿ ನೀ ರಂಗ । ವಿಟ್ಠಲ ಯೆನ್ನ ಕಾಯೋ ॥ ಕೃಷ್ಣ ॥ ೭ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೧೬. ರಾಗ ಶಂಕರಾಭರಣ, ಆದಿತಾಳ.

ಪೋಪ ಹೋಗೋಣ ಬಾರೋ ರಂಗ । ಪೋಪ ಹೋಗೋಣ ॥ ॥ ಪಲ್ಲ ॥ ಪೋಪ ಹೋಗೋಣ ಬಾರೋ ರಂಗ । ಪೊಡವಿಗೊಡೆಯ ಬಾಲನೆ ॥ ಸರ್ಪಶಯನ ನಿನಗೆ ಸರಿಯಾರು । ಕಾಣೆ ಜಗದೊಳು ॥ ಅನುಪಲ್ಲ ॥ ಜಾಹ್ನವೀಯ ತೀರವಂತೆ । ಜನಕರಾಯನ ಕುವರಿಯಂತೆ ॥ ಧನುವನೆತ್ತಿ ಬಡಿದವರಿಗೆ । ಜಾನಕೀಯು ಕೊಡುವರಂತೆ ॥ ೧ ॥ ಕುಂಡನೀಯ ನಗರವಂತೆ । ಭೀಷ್ಮಕರಾಯನ ತನಯಳಂತೆ ॥ ಶಿಶುಪಾಲನ ಒಲ್ಲಳಂತೆ । ಓಲೆ ನಿನಗೆ ಬರೆದಳಂತೆ ॥ ೨ ॥ ಕೌರವರು ಪಾಂಡವರು । ಲತ್ತೆಯಾಡಿ ಸೋತರಂತೆ ॥ ರಥವ ಪಿಡಿದು ನಡೆಸುವದಕ್ಕೆ । ರಂಗವಿಠಲ ಬರಬೇಕಂತೆ ॥ ೩ ॥ ಶ್ರೀಃ ॥

೧೭. ರಾಗ ಕಮಾಚ್, ಆದಿತಾಳ.

ತಪ್ಪೇನ ಮಾಡಿದೆನೊ । ಯಾದವೇಂದ್ರ । ತಪ್ಪೇನ ಮಾಡಿದೆನೊ ॥ ಪಲ್ಲ ॥ ತಪ್ಪೇನೊ ನಿನಗೆ ಯೆನ್ನಪ್ಪ ಕೈಬಿಡುವಂಥ ॥ ಅನುಪಲ್ಲ ॥ ಪಾತಕರೊಳಗತಿ ಪಾತಕಿಯೆ ನಾನು । ಪ್ರೀತನ್ನ ಮಾಡಿಕೋ ಅ । ನಾಥ ಬಂಧುವೆ ಇಂಥ ॥ ೧ ॥ ಘೋರ ದುರಿತವೆಲ್ಲ । ಹೀರಿ ಬಿಸಾಡುವ ॥ ಸಾರುವ ಶ್ರುತಿಗಳು । ಪಾರಗಾಣಿಸದಂಥ ॥ ೨ ॥ ಗಂಗಾ ಜನಕ ಗುರು । ರಂಗವಿಠಲನರ । ಸಿಂಗ ನಿನ್ನಯ ಅಂತ । ರಂಗ ವಲಿಯದಂಥ ॥ ೩ ॥ ಶ್ರೀಃ ॥

೧೮. ರಾಗ ಆನಂದಭೈರವಿ, ಏಕತಾಳ.

ಇಕ್ಕೋ ನೋಡೆ ರಂಗನಾಥನ । ಚಿಕ್ಕ ಪಾದವ ॥ ಪಲ್ಲ ॥ ಸಿಕ್ಕಿತೆ ಶ್ರೀಲಕ್ಷ್ಮೀಪತಿಯ । ದಿವ್ಯ ಪಾದವ ॥ ಅನುಪಲ್ಲ ॥ ಶಂಖ ಚಕ್ರ ಗದಾ ಪದ್ಮ ಅಂಕಿತ ಪಾದವ । ಅಂಕುಶ ಕುಲಿಶ ಕಾಮಿನಿ ಅಂಕಿತ ಪಾದವ ॥ ಪಂಕಜಾಸನನ ಹೃದಯದಲ್ಲಿ ನಲಿಯುವ ಪಾದವ । ಸಂತಾಪಹರಣ ವೆಂಕಟೇಶನ ದಿವ್ಯ ಪಾದವ ॥ ೧ ॥ ಲಲನೆ ಲಕ್ಷ್ಮೀಯಂಕದಲ್ಲಿ ನಲಿಯುವ ಪಾದವ । ಜಲಜಾಸನನ ಅಭೀಷ್ಟವೆಲ್ಲ ಸಲಿಸುವ ಪಾದವ ॥ ಮಲ್ಲರ ಗೆಲಿದು ಕಂಸಾಸುರನ ಕೊಂದ ಪಾದವ । ಬಲಿಯ ಮೆಟ್ಟಿ ಭಾಗೀರಥಿಯ ಪಡೆದ ಪಾದವ ॥ ೨ ॥ ಬಂಡೆಯ ಬಾಲೆಯ ಮಾಡಿದ ಉದ್ದಂಡ ಪಾದವ । ಬಂಡಿಲಿದ್ದ ಶಕಟಾಸುರನ ಒದ್ದ ಪಾದವ ॥ ಅಂಡಜ ಹನುಮರ ಭುಜದೊಳೊಪ್ಪುವ ಪಾದವ ॥ ಕಂಡೆವೆ ಶ್ರೀರಂಗವಿಠಲನ ದಿವ್ಯ ಪಾದವ ॥ ೩ ॥ ಶ್ರೀಃ ॥

೧೯. ರಾಗ ಶಂಕರಾಭರಣ, ಅಟತಾಳ.

ಇದನಾದರೂ ಕೊಡದಿದ್ದರೆ । ನಿನ್ನ । ಪದ ಕಮಲವ ನಂಬಿ ಭಜಿಸುವದೇಕೊ ॥ ಪಲ್ಲ ॥ ನಿನ್ನ ಪದ ಕಮಲವ ನಂಬಿ ಭಜಿಸುವದೇಕೊ ॥ ಅನುಪಲ್ಲ ॥ ಗ್ರಾಸವಸನಗಳಿಲ್ಲವೆಂದು । ನಿನ್ನ । ಬ್ಯಾಸರಿಸಿ ಬೇಡ ಬಂದದ್ದಿಲ್ಲ ॥ ವಾಸುದೇವನೆ ನಿನ್ನ ದಾಸರ ದಾಸರ । ದಾಸರ ದಾಸ್ಯವ ಕೊಡು ಸಾಕೆಂದರೆ ॥ ೧ ॥ ಸತಿಸುತರು ಸಂತತ ಭಾಗ್ಯದಲ್ಲಿಪ್ಪ । ಅತಿಶಯ ಬೇಕೆಂದು ಬಂದದ್ದಿಲ್ಲ ॥ ಇತರ ವಿಷಯಗಳಿಗೆರಗುವದೆನ್ನ ಮನಸು । ಕಥಾಮೃತವನೆ ಕೇಳಿಸು ಸಾಕೆಂದರೆ ॥ ೨ ॥ ಒಡವೆಗಳು ಒಡ್ಯಾಣಗಳಿಲ್ಲೆಂದು । ಬಡವನೆಂದು ಬೇಡಬಂದದ್ದಿಲ್ಲ ॥ ಒಡೆಯ ನಿನ್ನಡಿಗಳಿಗೆರಗುವದೆ ಸುಖ । ಬಿಡದಿರುವದು ಒಂದೆ ಕೊಡು ಸಾಕೆಂದರೆ ॥ ೩ ॥ ಸಾಲವಾಯಿತು ಸಂಬಳವು ಎನಗಿಲ್ಲ । ಸಾಲವೆಂದು ಬೇಡ ಬಂದದ್ದಿಲ್ಲ ॥ ನಾಲಿಗೆಯಲಿ ನಿನ್ನ ನಾಮದುಚ್ಚಾರಣೆ । ಪಾಲಿಸ ಬೇಕೆಂದು ಬಂದೆ ನಾನಲ್ಲದೆ ॥ ೪ ॥ ಆಗಬೇಕು ರಾಜ್ಯ ಭೋಗಗಳೆನಗೆಂದು । ಬೇಗದಿಂದಲಿ ಬೇಡಬಂದ

ದ್ದಿಲ್ಲ ॥ ನಾಗಶಯನ ರಂಗವಿಠಲ ನಿನ್ನಯ । ಬಾಗಿಲ ಕಾಯ್ವ ಭಾಗ್ಯವೆ ಸಾಕೆಂದರೆ ॥ ೫ ॥ ಶ್ರೀಃ ॥

೨೦. ರಾಗ ಪಂತುವರಾಳಿ, ಅಟತಾಳ.

ವ್ಯರ್ಥವಲ್ಲವೆ । ಜನ್ಮ । ವ್ಯರ್ಥವಲ್ಲವೆ ॥ ಪಲ್ಲ ॥ ತೀರ್ಥಪಾದನ ಭಜಿಸಿ ಕೃ । ತಾರ್ಥನಾಗದವನ ಜನ್ಮ । ವ್ಯರ್ಥವಲ್ಲವೆ ॥ ಅನುಪಲ್ಲ ॥ ಅರುಣೋದಯದಲೆದ್ದು । ವರನದೀಲಿ ಸ್ನಾನ ಮಾಡಿ ॥ ಅರಳು ಮಲ್ಲಿಗೆ ಜಾಜಿ ತಂದು ಶ್ರೀ । ಹರಿಗೆ ಅರ್ಪಿಸದವನ ಜನ್ಮ ॥ ೧ ॥ ಒಂದು ಶಂಖ ಉದಕವನ್ನು । ಚಂದದಿಂದ ಹರಿಗೆ ಯೆರದು ॥ ಗಂಧ ಅಕ್ಷತೆ ಪುಷ್ಪಗಳಿಂದ । ಸಿಂಧುಶಯನನರ್ಚಿಸದವನ ॥ ೨ ॥ ಎಳೆಯ ತುಲಸಿದಳವ ತಂದು । ನಳಿನನಾಭಗೆ ಅರ್ಚನೆ ಮಾಡಿ ॥ ಸುಲಭದಿಂದ ಹಲವು ಕಾಲದ । ಮಲವ ಕಳೆಯದವನ ಜನ್ಮ ॥ ೩ ॥ ಭೋಗಿಶಯನ ದಿನದಲೆದ್ದು । ಭೋಗಗಳನೆಲ್ಲ ತೊರೆದು ॥ ಭಾಗವತರ ಮೇಳದಿಂದ । ಜಾಗರಣೆಯ ಮಾಡದವನ ॥ ೪ ॥ ಭಂಗುರದ ದೇಹ ಪಡೆದು । ರಂಗನಾಥನ ಪೂಜೆ ಮಾಡಿ ॥ ರಂಗ ಪಟ್ಟಣದೊಳಗೆ ಶ್ರೀ । ರಂಗವಿಠಲನ ನೋಡದವನ ॥ ೫ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೨೧. ರಾಗ ಮುಖಾರಿ, ಅಟತಾಳ.

ಕಾಳ ಬೆಳದಿಂಗಳು ಈ ಸಂಸಾರ । ಕತ್ತಲೆ ಬೆಳದಿಂಗಳು ॥ ಪಲ್ಲ ॥ ಉಂಟಾದ ಕಾಲಕ್ಕೆ ನೆಂಟರು ಇಷ್ಟರು । ಬಂಟರಾಗಿ ಬಂದು ಬಾಗಿಲ ಕಾಯ್ವರು ॥ ಉಂಟಾದ ದಿನತಪ್ಪಿ ಬಡತನ ಬಂದರೆ । ಒಂಟಿ ಹಾಂಗೆ ಕತ್ತ ಮೇಲಕ್ಕೆತ್ತುವರು ॥ ೧ ॥ ಹೆಡಿಗೆಯ ಭಕ್ಷ್ಯಕ್ಕೆ ಗಡಿಗೆ ತುಪ್ಪವಿಕ್ಕಿ । ಸಡಗರದಿಂದುಂಬೊ ಸರಿನೆಂಟರು ॥ ಸಡಗರ ದಿನತಪ್ಪಿ ಬಡತನ ಬಂದರೆ । ಸುಡು ನುಡಿಗಳನಾಡಿ ನಡಿನಡಿಯೆಂಬೊರು ॥ ೨ ॥ ಏರುವ ಪಲ್ಲಕ್ಕಿ ಅಂದಣ ದಂಡಿಗೆ । ಮೂರು ದಿನದ ಭಾಗ್ಯ ಝುಣಝುಣವು ॥ ನೂರಾರು ಸಾವಿರ ದಂಡವ ಕೊಟ್ಟರೆ । ರಂಗವಿಟ್ಠಲಗೆ ಸರಿಯೆಂಬೊರಯ್ಯ ॥ ೩ ॥ ಶ್ರೀಃ ॥

೨೨. ರಾಗ ಪಂತುವರಾಳಿ, ಅಟತಾಳ.

ರಂಗನಾಥನ ನೋಡುವ ಬನ್ನಿ ॥ ಪಲ್ಲ ॥ ಶ್ರೀ । ರಂಗನ ದಿವ್ಯ ವಿಮಾನ ದಲ್ಲಿಹನ ॥ ಅನುಪಲ್ಲ ॥ ಕಮನೀಯ ಗಾತ್ರನ ಕರುಣಾಂತರಂಗನ । ಕಾಮಿತಾರ್ಥ ಕಲ್ಪವೃಕ್ಷನ ॥ ಕಮಲದಳನೇತ್ರನ ಕಸ್ತೂರಿ ರಂಗನ । ಕಾಮಧೇನುವಾದ ಕಾವೇರಿ ರಂಗನ ॥ ೧ ॥ ವಾಸುಕಿಶಯನನ ವಾರಿಧಿ ನಿಲಯನ । ವಾಸುದೇವ ವಾರಿಜನಾಭನ ॥ ವಾಸವಾದಿ ಭಕ್ತ ಹೃದ ಯಾಂಬರದಲ್ಲಿ । ವಾಸವಾಗಿರುತಿಹ ವಸುದೇವ ಸುತನಾ ॥ ೨ ॥ ಮಂಗಳ ಗಾತ್ರನ ಮಂಜುಳ ಭೂಷನ । ಗಂಗಾಜನಕ ಅಜಜನಕನ ॥ ಸಂಗೀತ ಲೋಲನ ಸಾಧು ಸಮ್ಮತ । ರಂಗವಿಠ್ಠಲ ರಾಜೀವ ನೇತ್ರನ ॥ ೩ ॥

೨೩. ರಾಗ ಮೋಹನ, ಅಟತಾಳ.

ಸರಸಿಜಾಕ್ಷ ಸರಸದಿಂದ । ಸರಸಿಜೋದ್ಭವಗೊಲಿದು ಬಂದ ॥ ಪಲ್ಲ ॥ ಉರಸಿನ ಮೇಲೆ ಸರಸಿಜಾಕ್ಷಿಯನಿರಿಸಿ ಬಂದ ॥ ಅನುಪಲ್ಲ ॥ ಧೀರ ಶರಧಿ ಗಂಭೀರಾ । ವರಘನಸಾರ ಕಸ್ತೂರಿ ತಿಲಕಧರಾ ॥ ಹಾರ ಮೌಕ್ತಿಕ ಕೇಯೂರ । ಧರಿಸಿದ ನವನೀತ ಚೋರಾ ಬಂದಾ ॥ ೧ ॥ ನಂದಗೋಪೀ ಯಾನಂದ ಮಾಡಿದ । ಕಂದಾ ಗೋಕುಲದಿ ಬಂದ ॥ ಸುಂದರಿಯರ ಅಂದದಿಂದ ಗೋ । ವಿಂದ ಮುಕುಂದ ॥ ೨ ॥ ಅಂಗನೆಯರ ತುಂಗ ಕುಚಗಳಾ । ಲಿಂಗನ ಮಾಡಿ ನವಮೋಹನಾಂಗ ॥ ರಂಗವಿಠಲನ ಸೊಬಗ ನಮ್ಮಂತ । ರಂಗದೊಳಗಿಹ ಕಲ್ಮಷ ಭಂಗಾ ॥ ೩ ॥ ಶ್ರೀಃ ॥

೨೪. ರಾಗ ಧನಾಸಿ, ಆದಿತಾಳ.

ಹರೇ ವೆಂಕಟ ಶೈಲವಲ್ಲಭ ಪಾಲಿಸೊ ನೀ ಯೆನ್ನ ॥ ಪಲ್ಲ ॥ ದುರಿತ ದೂರ ನೀನಲ್ಲದೆ ಧರೆಯೊಳು । ಧೊರೆಗಳ ನಾ ಕಾಣೆ । ನಿನ್ನಾಣೆ ॥ ೧ ॥ ಇಂದಿರೇಶ ಅರವಿಂದನಯನ ಎನ್ನ । ತಂದೆತಾಯಿ ನೀನೇ ॥ ಪೊಂದಿದ ವರ ಅಘವೃಂದವ ಕಳೆವ । ಮಂದರಾದ್ರಿಧರನೆ ಶ್ರೀಧರನೇ ॥ ೨ ॥ ಮಂಗ ಳಾಂಗಮಹನೀಯ ಗುಣಾರ್ಣವ । ಗಂಗೋದಿತ ಪಾದ ॥ ಅಂಗಜಪಿತ ಅಹಿರಾಜ ಶಯ್ಯ ಶ್ರೀ । ರಂಗವಿಠಲ ಧೊರೆಯೇ । ಶ್ರೀಹರಿಯೇ ॥ ೩ ॥

೨೫. ರಾಗ ವರಾಳಿ, ಆದಿತಾಳ.

ಯಾಕೋ ಇಂಥ ದುಡುಕು । ಲೋಕೇಶನಯ್ಯ ॥ ಪಲ್ಲ ॥ ಗೊಲ್ಲ ಬಾಲಕರು ನೀವೆಲ್ಲರು ಕೂಡಿಕೊಂಡು ॥ ಗುಲ್ಲು ಮಾಡದೆ ಮೊಸರೆಲ್ಲ ಸವಿದ ಕೃಷ್ಣ ॥ ೧ ॥ ಪೂತನಿ ಮೊಲೆಯನ್ನು ಭೀತಿಯಿಲ್ಲದೆ ಉಂಡು । ಘಾತವು ಮಾಡಿದಿ ಮಾತನಾಡಿಸೊ ರಂಗ ॥ ೨ ॥ ದುಷ್ಟ ಕಂಸನ ನೀನು ಕಷ್ಟವಿಲ್ಲದೆ ಮಡುಹಿ ॥ ಮುಷ್ಟಿಕನ ಕೊಂದು ದೃಷ್ಟಿ ತಾಗಿತೆಂದು ॥ ॥ ೩ ॥ ನಿಜ ಮಹಿಮನೆ ಸಜ್ಜನರ ಸಲಹಿದಿ ॥ ದುರ್ಜನರ ಕೊಂದ ಅರ್ಜುನ ಸಾರಥಿ ॥ ೪ ॥ ಅಂಗಿ ಟೊಪ್ಪಿಗೆ ಉಂಗುರ ಉಡಿದಾರ । ಶೃಂಗರಿಸಿಕೊಂಡು ಶ್ರೀರಂಗವಿಠಲ ಬಾರೋ ॥ ೫ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೨೬. ರಾಗ ಆರಭಿ, ಅಟತಾಳ.

ಬಾರೋ ಮನೆಗೆ ಗೋವಿಂದ । ನಿನ್ನಂಘ್ರಿಕಮಲವ । ತೋರೋ ಯೆನಗೆ ಮುಕುಂದ ॥ ಪಲ್ಲ ॥ ನಲಿದಾಡು ಮನದಲಿ । ಮಾರಾಪಿತ ಆನಂದ ॥ ಚಾರುತರ ಶರೀರ ಕರುಣಾ । ವಾರಿನಿಧಿ ಭವಘೋರನಾಶನ । ವಾರಿಜಾಸನ ವಂದ್ಯ ನೀರಜ । ಸಾರಸದ್ಗುಣ ಹೇ ರಮಾಪತೇ ॥ ಅನುಪಲ್ಲ ॥ ನೋಡು ದಯದಿಂದೆನ್ನ । ಕರಪದುಮ ಶಿರದಲಿ । ನೀಡು ಭಕ್ತ ಪ್ರಸನ್ನ । ನಲಿದಾಡು ಮನದಲಿ । ಬೇಡಿಕೊಂಬುವೆನೊ ನಿನ್ನ । ಆನಂದ ಘನ್ನ ॥ ಮಾಡದಿರು ಅನುಮಾನವ ಕೊಂ । ಡಾಡುವೆನು ತವ ಮಹಿಮೆಗಳನು । ಜೋಡಿಸುವೆ ಕರಗಳನು ಚರಣಕೆ । ಕೂಡಿಸೋ ತವ ದಾಸಜನರೊಳು ॥ ಬಾರೋ ॥ ೧ ॥ ಹೇಸಿ ವಿಷಯಗಳಲ್ಲಿ । ತೊಳಲಾಡಿ ನಾ ಬಲು । ಕ್ಲೇಶ ಪಡುವದು ಬಲ್ಲಿ । ಧನಯುವತಿಗಳ ಸುಖ । ಲೇಶವೆಂಬುವದು ಕೊಲ್ಲಿ । ಆಶೆ ಬಿಡಿಸಿಲ್ಲಿ ॥ ಯೇಸು ಜನ್ಮದ ದೋಷದಿಂದಲಿ । ಈಸುವೆನು ಇದರೊಳಗೆ ಇಂದಿಗೆ । ಮೋಸವಾಯಿತು ಆದುದಾಗಲಿ । ಶ್ರೀಶ ನೀ ಕೈಪಿಡಿದು ರಕ್ಷಿಸು ॥ ೨ ॥ ನೀನೆ ಗತಿಯು ಎನಗಿಂದು । ಉದ್ಧರಿಸೊ ಬೇಗನೆ ।

ದೀನಜನರಿಗೆ ಬಂಧೋ। ನಾ ನಿನ್ನ ಸೇವಕ । ಶ್ರೀನಿವಾಸ ಎಂದೆಂದು । ಕಾರುಣ್ಯಸಿಂಧೋ ॥ ಪ್ರಾಣಪತಿ ಹೃದಯಾಬ್ಜ ಮಂಟಪ । ಸ್ಥಾನದೊಳ ಗಭಿವ್ಯಾಪ್ತ ಚಿನುಮಯ । ಧ್ಯಾನಗೋಚರನಾಗು ಕಣ್ಣಿಗೆ । ಕಾಣುವೆನು ಶ್ರೀರಂಗವಿಠ್ಠಲ ॥ ೩ ॥ ಶ್ರೀಃ ॥

೨೭. ರಾಗ ಆನಂದಭೈರವಿ, ಅಟತಾಳ.

ಇಟ್ಹ್ಯಾಂಗೆ ಇರುವೆನು ಹರಿಯೇ । ಎನ್ನ ಧೊರೆಯೇ ॥ ಪಲ್ಲ ॥ ಸೃಷ್ಟಿ ಗೊಂದಿತ ಪಾದ ಪದುಮ ಶ್ರೀಹರಿಯೇ ॥ ಅನುಪಲ್ಲ ॥ ಸಣ್ಣ ಶಾಲ್ಯೋ ದನ್ನ ಬೆಣ್ಣೆ ಕಾಸಿದ ತುಪ್ಪ । ಚಿನ್ನದ ಹರಿವಾಣದಲಿ ಭೋಜನ ॥ ಘನ್ನ ಮಹಿಮ ನಿನ್ನ ಕರುಣ ತಪ್ಪಲು ಕಾ । ದನ್ನಕ್ಕೆ ಬಾಯ ಬಿಡಿಸುವೆ ಯಲ್ಲೋ ಸ್ವಾಮಿ ॥ ೧ ॥ ಕೆಂಪಿಲಿ ಪೊಳೆವ ಪೀತಾಂಬರನುಡಿಸುವಿ । ಸೊಂಪಿನಂಚಿನ ಶಾಲು ಹೊದಿಸುವಿಯೋ ಕೃಷ್ಣ ॥ ಕಪಿಲಹರೇ ನಿನ್ನ ಕೃಪೆಯು ತಪ್ಪಿದ ಮೇಲೆ । ಹೇ ಪಿನಾಕಿವಂದ್ಯ ಕೌಪೀನ ದೊರೆಯದೊ ॥ ॥ ೨ ॥ ಚಂದ್ರಶಾಲೆ ಚಂದ್ರಕಿರಣದಂತೊಪ್ಪುವ । ಚಂದದ ಮಂಚ ದೋಳ್ಮಲಗಿಸುವಿ ॥ ಮಂದರೋದ್ಧರ ನಿನ್ನ ಮಮತೆ ತಪ್ಪಿದ ಮೇಲೆ । ಮಂದಿರದೊಳು ತೋಳ್ತಲೆದಿಂಬು ಮಾಡಿಸುವಿ ॥ ೩ ॥ ನರಯಾನ ದೊಳು ಕ್ಷಣ ನರವರನೆನಿಸುವಿ । ವರ ಛತ್ರಚಾಮರ ಹಾಕಿಸುವಿ ॥ ಕರುಣನಿಧೇ ನಿನ್ನ ಕರುಣ ತಪ್ಪಿದ ಮೇಲೆ । ಚರಣ ಭರಣ ಪಾದರ ಕ್ಷೆಯು ದೊರೆಯದೊ ॥ ೪ ॥ ಗಂಗಾಜನಕ ಪಾಂಡುರಂಗ ನಿನ ಭಕು ತರ । ಸಂಗವಿರಲಿ ದುಷ್ಟ ಸಂಗ ಬೇಡಾ ಬೇಡಾ ॥ ಅಂಗನೆಯರ ಕೂಡಾನಂಗ ಬಾಣಕೆ ಸಿಲುಕಿ । ಭಂಗವ ಪಡಲಾರೆ ರಂಗವಿಟ್ಠಲ ಕಾಯೋ ॥ ೫ ॥ ಶ್ರೀಃ ॥

೨೮. ರಾಗ ಕಾಂಬೋದಿ, ಅಟತಾಳ.

ವಿಧಿಗೆ ದಯವಿಲ್ಲವಕ್ಕ ಎನ್ನ ಮ್ಯಾಲೆ ॥ ಪಲ್ಲ ॥ ಯದುಪತಿಯ ತೊಲ ಗಲಿಸಿದನೊಮ್ಮೊಮ್ಮೆ ॥ ಅನುಪಲ್ಲ ॥ ಎವೆಯ ಮರೆಯ ಮಾಡಿ

ಹೋದ್ಯಾಕೊ ಎಲೊ ವಿಧಿಯೆ । ಸುಳಿಗುರುಳ ಕಡೆಕಣ್ಣ ನೋಟದಿಂದ ॥ ಖವಕವಿಸಿ ನಗುವ ಮುದ್ದು ಮೊಗವ ನಾನು । ತವಕದಿಂದಲಿ ಮರುಳೆ ನೋಡಧೋದೆ ॥ ೧ ॥ ಹಕ್ಕಿಯು ಮೇಲುಳ್ಳ ದಯವು ಎನ್ನ ಮೇಲೆ । ಇಕ್ಕದೇಕೆ ಹೋದ್ಯೊ ಅಕ್ಕಟಕ್ಕಟ ॥ ಪಕ್ಕ ಎರಡುಳ್ಳಡೆ ಮಧುರಿಗೆ ಪೋಗಿ । ಚಕ್ಕನೆ ಹರಿಯು ಕೂಡೆ ಇಪ್ಪುವೆನಲ್ಲದೆ ॥ ೨ ॥ ತಂಗಿ ನಮ್ಮ ದೆಯು ಕಲ್ಲಾಗಿ ಪೋದವಯ್ಯೊ । ಹೇಂಗೆ ಪೋದನು ಕೇಳು ಶ್ರೀಪತಿ ಎನ್ನಗಲೀ ॥ ರಂಗವಿಟ್ಠಲನ್ನ ಅಂಗವಾ ಬಿಟ್ಟಂಥ । ಭಂಗಜೀವನ ಸುಡು ಸುಡು ನುಡಿವ್ಯಾತಕೆ ॥ ೩ ॥ ಶ್ರೀಃ ॥

೨೯. ರಾಗ ಆಹೇರಿ, ಝಂಪೆತಾಳ.

ವನಜನಯನ ನವ ನವ ಮಧುಪನೆಂಬುವರೆ ॥ ಪಲ್ಲ ॥ ಮನದೆ ಗಪ ಮದನ ಪಿತ ವಿಠಲರಾಯಾ ॥ ಅನುಪಲ್ಲ ॥ ಅರಿಯದ ಬಾಲೆಗೆ ತನ್ನ ಪರಿಯನರುಹಿಸಿ ಮುನ್ನೆ । ನೆರದು ಸಖಿ ರತಿಸುಖವ ನೆರೆ ಬೀರಿದಾ ॥ ತೊರದು ಬದುಕುವದೆಂತೊ ರತಿಪತಿಯ ಪಿತನಗಲಿ । ವಿರಹದುರಿಯು ವ್ಯೆಯನಡರಿ ನುಡಿದೆ ॥ ೧ ॥ ಇವನ ಕಪಟದ ವಚನವನು ನಾವು ದಿಟ ವೆಂದು । ನವ ಕುಳಿಕ ಗೀತವನು ಹರಿಣಿಯಂತೆ ॥ ವಿವರವರಿಯದೆ ನಾವು ಕಡುನೊಂದೆವೆಲೆ ಮಧುಪಾ । ಇವರೊಡಲನರಿಯದೆ ಕರುಣಿ ಯೆಂಬುವರೂ ॥ ೨ ॥ ನಡೆ ನಗೆಯ ತುದಿನೋಟ ಬಲೆಯನೆಮ್ಮೊಳು ಬೀಸಿ । ತಡೆಯದೆಮ್ಮನು ವಶವ ಮಾಡಿ ॥ ಪಡಿಯಿಲ್ಲದನುಭವದ ಸುಖದ ಸವಿಯನು ತೋರಿ । ಮಡದಿ ನಡೆಯಳು ಮಧುರೆಯೊಳು ನಲ್ಲನಾ ॥ ೩ ॥ ಪತಿಸುತರು ಧನ ಧಾನ್ಯವನು ಮುನ್ನೆ ನೀಡ್ಯಾಡಿ । ಗತಿ ನಮಗೆ ಅವನೆಂದು ಮನ ಸೋತೆವು ॥ ಕೃತಕವರಿಯದೆ ನಮ್ಮ ನೆರೆಬಿಟ್ಟನೆ ಶ್ರೀ । ಪತಿಯೊಡನೆ ಪಂಥ ನಾವೆಂತು ಮಧುಪಾ ॥ ೪ ॥ ಎಂದೆಂದು ನಿಮ್ಮಗಲೆನೆಂದು ಅಭಯವನಿತ್ತು । ಇಂದುಮುಖಿಯರ ಕೂಡಿ ನೆರೆ ಮಾರಿದಾ ॥ ನಂದನಂದನ ನಮ್ಮ ಕಾನನದೊಳೀಡ್ಯಾಡಿ । ಇಂದು ಮಧುರಿಯ ನಾರಿಯರ ಮೆಚ್ಚಿದಾ ॥ ೫ ॥ ಮರುಳುಗಳು ನಾವು ಶ್ರೀ

ಪತಿಯ ಕೂಟವ ಬಯಸಿ । ಇರುಳು ಹಗಲಾಗಿ ಕುದಿಯುತಲಿ ಬಿರಿಯುತ್ತ ॥ ಸಿರಿಯವನುಂಗುಟದುಗುರ ಕೊನೆಯ ಕಾಣದಿರೆ । ಹರಿ ನಮ್ಮನೆರದುದಾಶ್ಚರ್ಯ ಜಗದಿ ॥ ೬ ॥ ತುಂಗ ಗುಣಗಣ ನಿಲಯ ಅಂಗಜಜನಕ ಶ್ರೀ । ರಂಗನಿಗೆ ಮನಸೋತು ಮರುಳಾದೆವೊ ॥ ಹೀಂಗೆ ಬದುಕುವದೆಂತೊ ಭೃಂಗ ಮಧುರಿಗೆ ಪೋಗಿ । ರಂಗ ವಿಠ್ಠಲನ ತಂದೆಮ್ಮನಾಳುಹಲುಬೇಕು ॥ ೭ ॥ ಶ್ರೀಃ ॥

ಶೃಂಗಾರಪಾರಿಜಾತ.

೩೦. ರಾಗ ಮೋಹನ, ಝಂಪೆತಾಳ.

ಮಾನನಿಧಿ ಶ್ರೀಕೃಷ್ಣ ಮಧುರೆಘೋಗುವನಂತೆ । ಏನು ಪಥವಮ್ಮ ನಮಗೆ ॥ ಪಲ್ಲ ॥ ಮಾನವೇನಿದಕೆ ಮಾನಿನಿಯರೆಲ್ಲ ಕೂಡಿ । ಆಣೆಯನು ಕೊಟ್ಟವನ ಅಡ್ಡ ನಿಲಿಸುವ ಬನ್ನಿ ॥ ಅನುಪಲ್ಲ ॥ ಕಳ್ಳತನವೆ ನಮಗಲ್ಲದವ ಸುಳ್ಳು ಯೆಲ್ಲವನು ಬಲ್ಲಿರಮ್ಮ । ಬಿಲದಲೀನಮ್ಮ ಬಿಟ್ಟದೇ ವಳಿತು ವನಜಾಕ್ಷ । ಎಲ್ಲಿಗೈದಿದರೆ ನಾವಲ್ಲಿಘೋಗುವ ಬನ್ನಿ ॥ ೧ ॥ ಇಂದುದಯದಿ ಮೊದಲು ಇಂದೀವರಾಕ್ಷಿಯರು ಗೋ । ವಿಂದನಾ ಬಳಿಗೈದುವಾ ॥ ಒಂದು ಕಡೆಯಲಿ ಕುಳಿತು ಅರುಣಾಕ್ಷಿ ಓರ್ವಳೆ ಕೈ । ಯಿಂದಲ್ಲಿಗ ಕರಿಸಿ ಕೇಳ್ವನು ಕೇಳ್ವನು ॥ ೨ ॥ ಹರಿಣಾಂಕ ವದನೆಯರು ನೆರದು ಬರುತಿಹರು ಕೇಳಿ । ಪರಮ ಹರುಷದಲಿ ಬಂದೂ । ಸರಿರಾತ್ರಿಯಲಿ ಹೋಗಿ ಬರುವೆನೆಂದೆನಲಾಗಿ । ಯೆರಗಿ ಬಿನ್ನೈಸಿದರು ಅಂಬುಜ ದಳಾಕ್ಷನಿಗೆ ॥ ೩ ॥

ಶ್ಲೋಕ ॥ ಹಲವು ಕಾಲವು ನಿನ್ನ ಸ್ನೇಹ ಸುಖವಾ ಹಾರೈಸಿಕೊಂಡಿರುತಿಪ್ಪ । ಲಲನಾವ್ಯೂಹವ ಬಿಟ್ಟ ಕ್ರೂರನೊಡನೆ ನೀ ಮಧುರೆಗೆ ಪೋದಡೆ । ಕವಿತಾರಾಭವೆ ಕಾಂತ ಕೇಳು ದಿನವಾ ಆ,ಕಂತುವಿನ ಬಾಧೆಗೆ । ಘಳಿಗೊಂದು ಯುಗವಾಗಿ ತೋರುತಲಿದೆ ಜಲಜಾಕ್ಷ ನೀನಿಲ್ಲದೆ ॥ ೧ ॥

ಪದ ॥ ಬೇಡ ಮಧುರಿಗೆ ಪೋಗಬೇಡೆಲವೊ ಶ್ರೀಕೃಷ್ಣ । ಬೇಡಿಕೊಂಬೆವೊ ದೈನ್ಯದಿ ॥ ನೋಡು ನಮ್ಮಲಿ ದಯಮಾಡು ಮದನಂಗೆ ಗುರಿ । ಮಾಡುವದು ಉಚಿತವೆಲೊ ಮಾಧವ ಕೃಪಾಕರನೆ ॥ ೧ ॥

ಶ್ಲೋಕ ॥ ಬಾಲಭಾವದಲಿದ್ದಾಲಿಂಗ ಸುಖವ ಬಹು ಬಗೆಯಲಿಂದುಳುಹಿದಾ । ಲೋಲಲೋಚನೆ ನಿಮ್ಮ ಬಿಟ್ಟು ಪುರದಾ ಬಾಲೇರಿಗಾನೊಲಿದರೆ । ನೀಲಕಂಠನು ನೆಚ್ಚನೋಡು ನಿಜವಾ ನಿಮಗೇತಕೀ ಸಂಶಯ । ಕಾಲಕ್ಷೇಪವನಲ್ಲಿ ಮಾಡೆ ಕಿಂಚಿತ್ಕಾಲದೊಳಾನೈದುವೆ ॥ ೨ ॥

ಪದ ॥ ಪಾಲಿಸುವುದಪ್ಪಣೆಯ ಪಾಟಲಸುಗಂಧಿಯರೇ । ಕಾಲಹರಣವ ಮಾಡದೆ ॥ ನಾಳೆ ಉದಯಕೆ ಪೋಗಿ ನಾಲ್ಕೆಂಟು ದಿನದೊಳಾ । ವೇಳೆಗಿಲ್ಲಿಗೆ ಬರುವೆ ಕಾಳಾಹಿವೇಣಿಯರೇ ॥ ೨ ॥

ಶ್ಲೋಕ ॥ ಮಾರನಯ್ಯನೆ ಕೇಳು ಅಲ್ಲಿರುತಿಪ್ಪ ನಾರೇರು ಬಲು ನಿಪುಣರೊ । ನೀರಜಾಂಬಕ ಕೇಳು ನಿನ್ನ ಮನವಾ ನಿಮಿಷಾರ್ಧದೊಳು ಸೆಳವರೆ । ಮಾರಕೇಳಿಯ ಶಾಸ್ತ್ರ ಮರ್ಮವರಿತು ಆ ನಾರಿಯರು ನೆರೆಯಲು । ಗಾರುಹಳ್ಳಿಯಲಿಪ್ಪ ಗೋವಳೆಯರಾ ವಿಚಾರಂಗಳ ಸ್ಮರಿಸೀಯಾ ॥ ೩ ॥

ಪದ ॥ ಬಿಲ್ಲ ಹಬ್ಬವೆ ಸುಳ್ಳು ಬಿಸರುಹಾಕ್ಷಿಯರಿಕ್ಕು । ಬಿಲ್ಲನುತ್ಸಹಕೆ ನಿನ್ನ ॥ ಖುಲ್ಲ ಅಕ್ರೂರನಾ ಕಳುಹಿ ಕರೆಸಿದರು ನೀನಲ್ಲಿ । ವಲ್ಲಭೇರ ನೆರೆದು ನಮ್ಮೆಲ್ಲ ಮರೆವಿಯೊ ॥ ೩ ॥

ಶ್ಲೋಕ ॥ ನಾರಿ ಹಾರ ಕಿರೀಟ ಕುಂಡಲಯುಗ ಕೇಯೂರ ಪರಿಯಾದಿಗಳು । ಚಾರು ವಸ್ತ್ರ ಸುಗಂಧಪುಷ್ಪ ನಿಚ್ಚ ಹಾರಂಗಳಂ ಧರಿಸಿದೇ ॥ ಮಾರಕೇಳಿಯ ಮಾತಿಲಿಂದವರಾ ಮನಸೆಮ್ಮಲೊಂದಾಗದೆ । ನಾರೇರೊಲುಮೆಯುಂಟೆ ಲೋಕದೊಳಗೆ ಇನ್ನೇತಕೆ ದೂರ್ವಿರೇ ॥ ೪ ॥

ಪದ ॥ ಮಲ್ಲಯುದ್ಧವ ಕೊಡಬೇಕೆನುತ ಮಾವ ನ । ಮ್ಮಲ್ಲಿಗೆ ಕರೆಸಲದಕೆ ॥ ಇಲ್ಲದಪವಾದ ಈ ಸುಳ್ಳು ಸುದ್ದಿಗಳು ನೀ । ವೆಲ್ಲ ಸೃಜಿಸಿದರೆ ಸರಿಯಿಲ್ಲ ನಿಮಗಿಳೆಯೊಳಗೆ ॥ ೪ ॥

ಶ್ಲೋಕ ॥ ಪತಿ ಸುತ ಪಿತೃ ಮುಖ್ಯ ಭ್ರಾತೃಬಾಂಧವರು ಎಂಬಾ । ಅತಿಶಯ ನಮಗಿಲ್ಲಾ ಲಾಲಿಸೀಮಾತನೆಲ್ಲ ॥ ರತಿಪತಿ ಪಿತ ನೀನೂ ರಾತ್ರಿಯೊಳ್ ಕೊಳಲನೂದೆ । ಕ್ಷಿತಿಪತಿ ನಿನ್ನಡಿಗೆ ಕ್ಷಿಪ್ರದಿಂ ಬಂದೆವೆಂದು ॥ ೫ ॥

ಪದ ॥ ಬಾಲತನದಲಿ ರವಿಜ ತೀರದಲಿ ನೀ ವತ್ಸ । ಪಾಲನೆಯ ಮಾಡುತಿಪ್ಪಾ ॥ ಕಾಲ ಮೊದಲಾಗಿ ಈ ವೇಳೆ ಪರಿಯಂತರವೂ । ಆಲಯವಗಲಿರುವ ಕಾಂತೆಯರ ತ್ಯಜಿಸಿನ್ನು ॥ ೫ ॥

ಶ್ಲೋಕ ॥ ನೀಲಕುಂತಳೆ ಕೇಳು ನಿಮ್ಮ ಮನೆಯ ಆ ನೆಲವಿನ ಮೇಲಿನ । ಪಾಲು ಬೆಣ್ಣೆಯ ಕದ್ದು ಮೆದ್ದು ಬಹಳ ಕಾಲಗಳನೆ ಕಳೆದನೆ ॥ ಬಾಲೆ ಮನ್ಮಥ ಬಾಣವೆತ್ತುತವನೆ ಬಹು ಬಗೆಯಲಿಂದುಳುಹಿದಾ ॥ ಲೋಲಲೋಚನೆ ನಿಮ್ಮೊಳಾನು ಬಹಳ ಜಾಲಂಗಳ ಮಾಳ್ಪೆನೆ ॥ ೬ ॥

ಪದ ॥ ಬಟ್ಟುಕಂಗಳೆ ನಿಮ್ಮ ಬಿಟ್ಟು ಘಳಿಗಿರಲಾರೆ । ದುಷ್ಟಕಂಸನು ಕರೆಸಲವಕೆ ॥ ಅಟ್ಟಿ ಪೋಗದಲಿರೆ ಶಿಟ್ಟಿನಿಂದಲಿ ಪ್ರಜಕೆ । ಅಟ್ಟುಳಿಯ ಮಾಡುವನು ಅಂಬುಜಕಂಠಿಯರೇ ॥ ೬ ॥

ಶ್ಲೋಕ ॥ ವಾರಿಜೋದ್ಭವನಯ್ಯ ನಿನ್ನ ವಿರಹ ವಾರಾಶಿಯೊಳೆ ಮುಳುಗಿಪ್ಪಾ । ವಾರಿವಾಹನಿಭಾಂಗ ವಾಸವನುತ ವಾಕೆಮ್ಮದೊಂದಾಲಿಸೋ ॥ ವಾರಿಜಾಂಬಕ ವಾರಿಜಾರಿವದನ ವಾರಾಶಿಜಾವಲ್ಲಭಾ । ವಾರಿಧಿಶಯ ಪಾರಗಾಣಿಸೊ ಕೃಪಾ ನಾವೆಯಲಿಂದೆಮ್ಮನೂ ॥ ೭ ॥

ಪದ ॥ ಮಾರನೆಂಬುವ ಬಲು ಕ್ರೂರ ನಮ್ಮಗಲಿಸಿ । ಊರಿಗೆ ಹೋದದನು ಕೇಳಿ ॥ ವಾರಿಜಾಸ್ತ್ರವನೆ ಎದೆಗೇರಿ ನಮ್ಮನು ಬಿಡದೆ । ಹೋರುವನಹೋರಾತ್ರಿಯಲಿ ಚರಿಸುತಾ ॥ ೭ ॥

ಶ್ಲೋಕ ॥ ಪರಿಪರಿಯಲಿ ನಿಮ್ಮ ಪಾಡನೆ ಕೇಳಿ ಮುನ್ನಾ । ಕರುಣವು ನಿಮಗಿಲ್ಲ ಕಾಂತೆ ಕೇಳೆಮ್ಮ ಸೊಲ್ಲಾ ॥ ತ್ವರಿತದಿ ಬರದಿಲ್ಲೆ ತಡೆದು ನಾನಿರಲು ಅಲ್ಲೆ । ಸರಸಿಜಭವ ಮಾರನಾಣೆ ಕೇಳೆ ಪ್ರವೀಣೆ ॥ ೮ ॥

ಪದ ॥ ಹರಿಣಾಂಕ ವದನೆಯರು ಹರುಷಪೂರಿತರಾಗಿ । ಕರೆದು ತಾಂಬೂಲವಿತ್ತು ॥ ಕಳುಹಿರೆನ್ನನು ನಿಮ್ಮ ಕ್ಷಿತುಕಾಲಕೇ ಬಂದು । ನೆರೆಯದಿದ್ದರೆ ನಾನು ಪರಮ ಪುರುಷನೆ ಕೇಳಿ ॥ ೮ ॥

ಶ್ಲೋಕ ॥ ಮಾರನೆಂಬವ ಮಡಿದು ಪೋದ ಶಿವನಾ ಆ ಮೂರನೆ ಕಣ್ಣಿನಿಂದಾ । ನಾರಿರಿಲ್ಲದ ನಾಭಿಯಿಂದ ಪಡೆದ ತಾ ಬ್ರಹ್ಮನೆಂಬಾತನಾ ॥ ಸಾರಿಯಿರ್ವರ ಕುಮಾರರಾಣೆ ಹರಿಯು ಸೇರಿ ನಿಲ್ಲುವದು ಎಂತೆನೆ । ಮಾರಿ ಹೊರಗಿನಹೊರಗೆ ಹೋಯಿತೆಂಬನ ತಿರಿಗಿರೆ ಭಾಮಿನೀ ॥ ೯ ॥

ಪದ ॥ ಹಲವು ಮಾತುಗಳೇಕೆ ಜಲಜಾಕ್ಷಿ ನಿಮ್ಮ ಪದ । ನಳಿನವನು ನೆರೆನಂಬಿಹಾ ॥ ಬಲುಮೆಯಿಂದಿರುತಿಪ್ಪ ಲಲನಾವ್ಯೂಹವ ಬಿಟ್ಟು । ಸಲಹೊ ಬಾಹೆಮ್ಮನು ರಂಗವಿಠ್ಠಲರೇಯಾ ॥ ೯ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೩೧. ರಾಗ ಕಲ್ಯಾಣಿ, ಅಟತಾಳ.

ಏನಮ್ಮ ಕಲ್ಲಬಿಡೆ । ಈ ಧೋತ್ರವ । ಚನ್ನಾಗಿ ಒಗಿಯಬೇಕು ॥ ಪಲ್ಲ ॥ ಚನ್ನಕೇಶವನ ಪ್ರಸಾದ ಸಮಯಕ್ಕೆ । ಇನ್ನು ದ್ವಾದಶಿ ಪಾರಣೆ ವೇಳೆ ವಿಚಾರಿತು ॥ ಅನುಪಲ್ಲ ॥ ವೇದವನೋದಬೇಕು । ಷಡ್ವರ್ಗದ । ಭೇದವ ತಿಳಿಯಬೇಕು ॥ ಮದಕು ಹೋಗುವ ಉಪಾಯದ ತೆರನೀಗಿ । ಕುಟ್ಟಿ ಜಲದೊಳು ಶೆಳೆದು ಒಗಿಯಬೇಕು ॥ ೧ ॥ ಉಟ್ಟ ಧೋತರವೂಳಿಸದ । ಅಂಗದೊಳುಳ್ಳ । ದುಷ್ಟರು ಐವರಿಂದ ॥ ಕುಷ್ಟುಹೋಗುವ ಉಪಾಯ ತೆರನೀಗಿ । ಕುಟ್ಟಿ ಜಲದೊಳು ಶೆಳದು ಒಗೆಯಬೇಕು ॥ ೨ ॥ ಬೇಲೂರ ಪುರಿ ಚನ್ನಾನ । ಸೇವೆಗೆ ನೀನು । ಆಲಸ್ಯವನು ಮಾಡದೆ ॥ ಕಾಲಾವಿಚಾರಿಂದರೆ ರಂಗವಿಠಲ ಬೈವಾ । ನೀಲಕುಂತಳೆ ಕಲ್ಲಬಿಟ್ಟು ಕಡೆಗೆ ಸಾರೆ ॥ ೩ ॥ ಶ್ರೀಃ ॥

ಭ್ರಮರಗೀತಾ.

೩೨. ರಾಗ ಮುಖಾರಿ, ಅಟತಾಳ.

ಭೃಂಗಾ ನಿನ್ನಟ್ಟಿದನೆ ಶ್ರೀ । ರಂಗ ಮಧುರೆಲಿ ನಿಂತು । ಅಂಗಜ ಲುಬ್ಧಕ । ಪೊಂಗೊಳಲ ತಡೆಯನಿಕ್ಕಿ ॥ ಅಂಗನೇರೆಂಬ ಹುಲ್ಲೆ ವೃ । ಗಂಗಾಳಿಗೆ ಗುರಿಹಚ್ಚಿ । ಹಿಂಗಿಸುತ್ತೈದಾನೆ ಅಸುವಾ । ಹೇ ಕಿತವಾ ॥ ॥ ಪಲ್ಲ ॥ ನಿನ್ನ ನೋಡೆ ನಮ್ಮ ಅಚ್ಯು । ತನ್ನ ಕಂಡಂತಾಯಿತಯ್ಯೊ । ಚನ್ನಿಗರರಸ ಕುಶ । ಲೋನ್ನತಿಯೊಳಿಹನೇನೋ ॥ ಚಿನ್ನತನ ವೊದ ಲಾಗ್ಯಾ । ಪನ್ನಕಿತವ ಬಲ್ಲೆವೊ । ನನ್ನಿಗಾರಚಿತ್ತ ಚೋ । ರನ್ನ ಶ್ರೀ ಹರಿಯಾ ॥ ಮನ್ನಣೆಗೆ ಮೆಚ್ಚಿ ತನು । ವನ್ನೊಪ್ಪಿಸಿದ ಮುಗುಧ । ವೆಣ್ಣು ಗಳ ವಿರಹಾಬ್ಧಿ । ಯನ್ನೆ ದಾಟಿಸುವೆನೆಂದು ॥ ತನ್ನ ನೇಹವೆಂಬ ನಾವೆ । ಯನ್ನೇರಿಸಿ ವೋಸದಿ ನಡು ನೀರೊಳು ತೊರಧೋದನೆ । ಹೇ ಕಿತವಾ ॥ ೧ ॥ ತಮ್ಮ ನಂದಗೋಪ ಯಶೋ । ದ್ಯಮ್ಮನ ಕಂಡು ಬಾರೆಂದು । ರಮ್ಮೆಯು ರಮಣ ನಿನ್ನ । ಒಮ್ಮೆ ಕಳುಹಿದನೇನೊ ॥ ಹಮ್ಮು ಗೆಟ್ಟು ರಮ್ಮಣೇರೆಂ । ದುಮ್ಮಳಿಸಿದೆವೊ ವೃಥಾ । ನಮ್ಮ ಹಂಬಲಿನ್ನೇ ನವಗೆ । ಶ್ರೀಹರಿಗೆ ॥ ಹೊಮ್ಮೇಲಟ್ಟಾದಲಂಚೆಯು । ಗಮ್ಮನೇರ ಕುಚದ ಕುಂ । ಕುಮ್ಮ ಕಸ್ತೂರಿಯ ಕರ । ದಿಮ್ಮದಿ ಪಿಲುಕಿದಂಗೆ । ಕಮ್ಮಗೋಲನ ಬಾಣಂಗಾ । ಳುಮ್ಮಳಿಸಿ ಈಸುತಿದೆ । ಸುಮ್ಮನೆ ಬಾಹೋದೇ ಸುಲಭ । ಹೇ ಕಿತವಾ ॥ ೨ ॥ ಮಧುಕುಂಜ ವನದಲ್ಲಿ । ಮಧುವೈರಿ ಕೊಳಲೂ ದಲಾ । ಮಧುರಾ ಸುಸ್ವರ ಕೇಳಿ । ಮದಿರಾಕ್ಷೇರೆಲ್ಲರು ಧಾ । ಮದ ಧ್ಯಾನ ಬಿಟ್ಟು ವೃಗ । ಮದ ಕಂಪವಿಡಿದೈದಿ । ಮದನನಯ್ಯನ ಕಾಣುತ । ಶ್ರೀಹರಿಯಾ ॥ ಮುದವೇರಿ ತಲೆವಾಗಿ । ಮೇದಿನಿ ನಿಟ್ಟಿಸಲಾಗ । ವೃದು ವಾಕ್ಯದೊಳೆಮ್ಮಪ್ಪಿ ॥ ಅಧರಾಮೃತ ಭೋಜನ । ಕೊದಗುವ ಸತತ ಸ । ನ್ನದ ನಮ್ಮನಗಲಿ ಕ । ಲ್ಲೆದೆಯಾದನೆಂತೊ ಕೃಪಾಳು । ಹೇ ಕಿತವ ॥ ॥ ೩ ॥ ವಜ್ರಾಂಕುಶ ಧ್ವಜಾಂಕಿತ । ಹೆಜ್ಜೆಯನ್ನೆ ತಿಳಿದ ನ । ಮ್ಮಬ್ಜಾಕ್ಷಿ ಯರೊಡನೆ ರತಿ । ಕಜ್ಜದುಪವನದಲ್ಲಿ । ನಿರ್ಜರೋತ್ತಂಸರೊಡನೆ ।

ಮಜ್ಜನ ಕ್ರೀಡ್ಯಾಡುವ ಸಾ । ಯುಜ್ಯ ಸುಖ ಎತ್ತಲಿಪ್ಪದೊ । ಶ್ರೀಹರಿಯಾ ॥ ಅಬ್ಜಭವ ಮುನಿಜನ । ಪೂಜ್ಯನಗಲಿದ ಮೇಲೆ । ನಿರ್ಜೀವಿಗಳಾಗಿ ಕಣ್ಣ । ಕಜ್ಜಲ ಕಲಕಿಕೊಂಡು ॥ ಲಜ್ಜೆಗೆಟ್ಟು ತನುವತಿ । ಜಜ್ಝರಿತದಿ ಜೀವಿಸೆ । ವಜ್ರ ಎದೆಯಲ್ಲಾವೆ ನಮ್ಮದೆ । ಹೇ ಕಿತವಾ ॥ ೪ ॥ ಕತ್ತಲೆ ವೈರಿಯು ಬಿಟ್ಟು । ಮುತ್ತಿನ ಜೋಲ್ಲೆದುರುಬಿಲಿ । ಕಸ್ತೂರಿ ತಿಲಕವು ಬಲಿತಾ ಕುಂಡಲ ಬೆಳಗುತಿರೆ । ವೃತ್ತ ವಾರನಾರಿ ಮಂದ । ಸ್ಮಿತ ತಿಂಗಳಿಂದ ಎಮ್ಮಯ । ಹೃತ್ತಾಪವ ಪರಿಹರಿಸುವ ಶ್ರೀಹರಿಯಾ ॥ ಮತ್ತೆ ವಕ್ಷದ ಶ್ರೀವತ್ಸ । ಕೌಸ್ತುಭ ವೈಜಯಂತಿ ಮಾಲೆ । ಶ್ರೀತುಳಸಿ ಘಮಘಮಿಸುತ್ತಲಿಹ ವನಮಾಲೆಯೂ । ರತುನ ಕಂಕಣ ಭುಜ । ಕೀರ್ತಿಯಿಂದೊಪ್ಪುವ ಪುರು । ಷೋತ್ತಮನ್ನ ಬಣ್ಣಿಪರುಂಟೆ । ಹೇ ಕಿತವಾ ॥ ೫ ॥ ಉತ್ಪಲ ಶಾಮಲ ಮೋದ । ವೆತ್ತ ಭಾವಚನ್ನದಿಂದ । ಅತ್ಯಮ್ಮಲಾ ಪೊನ್ನಂಬರ ಸುತ್ತಿದಡಾ । ಮತ್ತನೂಪುರಾ ಜ । ಣತ್ಕಾರಾದಿ ಮಿಂಚುವ । ಚಿತ್ತ ಶಿಖಿಗೆ ಪೀಯೂಷ । ಸುತ್ತ ಮೇಘನಂತೆ ಒಪ್ಪುವ । ಶ್ರೀಹರಿಯಾ ॥ ಹೆತ್ತ ತಾಯಿ ಆಪ್ತ ಬಂಧು । ಗೋತ್ರಗತಿ ನೀನೇ ನಮ್ಮ । ಚಿತ್ತವೆಂದು ನಂಬಿ ತನ್ನ । ಹತ್ತಿಲಿ ಸಾರಿದವರ । ವತ್ತಿ ತಾ ರಥವನೇರಿ । ಸತ್ವರಾ ಬರುವೆನೆಂದು । ಮತ್ತಕ್ರೂರನೊಡನೈದಿದಾ । ಹೇ ಕಿತವಾ ॥ ೬ ॥ ಲಕ್ಷುಮಿ ರಮಣ ನವ । ಸುಕ್ಷ್ಮದ ಗೊಲ್ಲತೆರು ನಾವು । ಕುಕ್ಷಿಯೊಳು ಬೊಮ್ಮಾಂಡವವಗೆ । ಮಕ್ಷಿಕಗಳಂತಿಪ್ಪೆವೊ । ಮೋಕ್ಷಿಗಳರಸನು ಅವ । ಗೋಕ್ಷೀರ ವ್ರತರಾವು । ರಕ್ಷಿಸುವನೆಂತೊ ನಮ್ಮನು । ಶ್ರೀಹರಿಯು ॥ ರಕ್ಷಿಸಲುದಿಸಿ ಜನ । ರಕ್ಷಣೆಗೆ ಪಾಲ್ಬೆಣ್ಣೆಯಾ । ಭಕ್ಷಿಸಿ ನಿರುತಾ ನಮ್ಮ । ಅಕ್ಷಿಗೆ ಹಬ್ಬವನುಣಿಸಿ । ಈ ಕ್ಷೋಣಿ ಭಾರಹಾರ್ಯವು ಶಿಕ್ಷೆಗೇ ನರರಸಾಮ್ಯ । ವಕ್ಷಾಮಾಣರಾದೆ ಮೂರ್ಖರೊ ॥ ಹೇ ಕಿತವಾ ॥ ೭ ॥ ಹಿಂದೆ ಮಾಡಿದ ಸದ್ಧರ್ಮ । ದಿಂದ ಮಧುರ ನಗರದ । ಇಂದೀವರಾಕ್ಷೀರಾನಂದ । ಸಿಂಧು ಉದಿಸಿದ ಪೂರ್ಣ । ಚಂದ್ರನಂತೊಪ್ಪುವ ಸಿರಿ ॥ ಮಂದರಧರನಂಘ್ರಿಯಾ । ಪೊಂದುವ ಭಾಗ್ಯಕ್ಕೆಣೆಯುಂಟೇ । ಶ್ರೀಹರಿಯಾ ॥ ಅಂದೆಮ್ಮೊಳು ರಾಸಕ್ರೀಡೆ । ಯಿಂದ ಬಂದ

ಪರಾಧವ । ಒಂದನೆಣಿಸದೆ ಸಲ । ಹೆಂದು ಬಿನ್ನೈಸಿ ಸಾಷ್ಟಾಂಗ । ದಿಂದ ವಂದಿಪೆವು ಭಕ್ತ । ಬಂಧುವಿಗೆ ಯೆವ್ಮಾಹೃದಯ । ಮಂದಿರ ಮೊಳೆಂದೆಂದಿರೆಂದು । ಹೇ ಕಿತವಾ ॥ ೮ ॥ ಹೆಂಗಳೆರೊಂದಾಗಿ ಅಂತ । ರಂಗದರಸನಾಡಿದ । ಮಂಗಳ ಚರಿತ್ರೆಯನ್ನು । ಸಂಗೀತದಿಂ ಪೊಗಳುತ್ತ । ಕಂಗಾಳು ಶೃಂಗಾಳುವುತ್ತ । ಇಂಗಿತಜ್ಞ ದೇವಾ । ನಂಗಸಂಗದಾನಂದವ ನೆಗದು । ಶ್ರೀಹರಿಯು॥ ಮಂಗಳ ವೇದಸ್ತ್ರೀಯನಾರಿ। ಶೃಂಗಾರಕೂರುವೂ ನವ್ಮ । ಪೊಂಗಣ್ಣನ ಶೀಳ್ದ ನರ । ಸಿಂಗ ವಟು ಭಾರ್ಗವನೆ । ಅಂಗದ ಪಾರ್ಥಪಶಂಭು ತು । ರಂಗಾಪ ರಂಗವಿಠಲ । ಹಿಂಗಿಸುವದೆಂತು ಯೆವ್ಮೊಳು । ತುಂಗ ಮಹಿಮ ನವೊ ಎಂಬೆ। ಹೇ ಕಿತವಾ ॥ ೯ ॥

೩೩. ರಾಗ ಆಹೇರಿ, ಅಟತಾಳ.

ಒಲ್ಲೆವ್ವಾ ಲಕುಮಿಯ । ನಲ್ಲ ಬಾರದಿದ್ದರೆ ತನುಹೊರೆ ॥ ಪಲ್ಲ ॥ ಹಾರ ಕೊರಳಾಗೆ ಭಾರ ಹುವ್ವಿನಸರ ಸೈರಿಸಲಾರೆನೆ ॥ ಮಾರನಯ್ಯನು ಬಾರದಿದ್ದರೆ । ಮಾರನಂಬಿಗೆ ಗುರಿಮಾಡೆ ॥ ೧ ॥ ಎಲ್ಲ ದೇವರ ವಲ್ಲಭನೆಂದು । ವಲ್ಲಿದೆ ಮನ ನಿಲ್ಲದೆ ॥ ನಿಲ್ಲದೆ ರಂಗ ಪೋದ ಮಧುರಿಗೆ । ಬಿಲ್ಲಹಬ್ಬದ ನೆವದಿಂದ ॥ ೨ ॥ ಮುನ್ನಾ ಆಡಿದ ಮಾತ ನೋಡೋ ಸು । ವರ್ಣದೊಳಗೆಲ್ಲ ಈಡ್ಯಾಡಿ ॥ ವನ್ನಜಾಕ್ಷನು ಬಾರಾಪುರದ । ವನ್ನಿತೆಯರನು ಮೆಚ್ಚಿ ॥ ೩ ॥ ಮಂದಾನಿಲ ಸೊಬಗು ತರುಣಿಯೊ । ಳೆಂದಾನಗಧರನೆಂದು। ವಂದೆ ಶಕುನ ಕಂಗಳ ನೋಟಕ್ಕೆ । ವೃಂದಾವನಪತಿ ಅಗಲಿದಾ ॥ ೪ ॥ ಪೊಂಗೊಳಲಾ ಧ್ವನಿಗೆ ಸಿಲ್ಕಿ ಭಂಗಬಟ್ಟೆ ನಂಗಜನಿಂದಲಿ ॥ ಪೆಂಗಳಿಗುಚಿತವಲ್ಲ । ರಂಗವಿಠಲನ ತೋರದಿದ್ದಡೆ ॥ ೫ ॥ ಶ್ರೀಃ ॥

೩೪. ರಾಗ ಮಾಯಾಮಾಳವ, ಅಟತಾಳ.

ಕಂಬು ಕೊಳಲನೂದುತ । ನಂಬಿಸಿ ಪೋದನೆಯವ್ವ । ಅಂಬುಜನಾಭಗೆ ಮನ । ಹಂಬಲಿಸುತ್ತಿದೆಯವ್ವ ॥ ಪಲ್ಲ ॥ ಮನೆಮನೆ ವಾರತೆಗೆ । ಮನವೆಳಸದೆಯವ್ವ । ಮನಸಿಜ ಪಿತನೊಡನೆ। ಮನತೆರಳಿತೆಯವ್ವ ॥ ೧ ॥

ನಡೆಯಲಾರೆವೆ ನಾವು ಒಂ। ದಡಿಯಿಡೆವಶವಿಲ್ಲ॥ ಇಂಥ। ಬೆಡಗುಗಾರನ ಕೂಡೆ। ನುಡಿತೆರಳಿತೆಯವ್ವ ॥ ೨ ॥ ಮಾತು ಮನಸು ಬಾರದು । ಕಾತರಿಸುತಿದೆ ಮನ ॥ ಪ್ರೀತಿವಂತನ ಕಾಣದೆ । ನಾ ತಾಳಲಾರೆನವ್ವ ॥ ೩ ॥ ನಿನ್ನೆ ಮೊದಲಾಗಿ ಯೆನ್ನ । ಕಣ್ಣಿಗೆ ನಿದ್ರೆಬಾರದು ॥ ಬನ್ನಣೆಗಾರನ ಕೂಡೆ । ಹೆಣ್ಣುಜನ್ಮ ಸಾಕೆಯವ್ವ ॥ ೪ ॥ ಗೋಪಿನಾಥನ ಕಾಣದೆ । ತಾಪಘನವಾಯಿತವ್ವ ॥ ಗೋಪಜನರ ಕೂಡಿದ । ಶ್ರೀಪತಿ ರಂಗವಿಠ್ಠಲ ॥ ೫ ॥

೩೫. ರಾಗ ಕರಹರಪ್ರಿಯ, ಅಟತಾಳ.

ನಂದನಂದನ ಪಾಹಿ ಗುಣವೃಂದ । ಸುಂದರರೂಪ ಗೋವಿಂದ ಮುಕುಂದ ॥ ಪಲ್ಲ ॥ ಪವನಜಪರಿವಾರ ಯಮುನಾವಿಹಾರ । ನವರತ್ನಹಾರ ನವನೀತಚೋರ ॥ ೧ ॥ ದಿನಕರದ್ಯುತಿಜಾಲ ಕನಕಾಮಯಚೇಲ ॥ ಜನಕಾನುಕೂಲ ಜನಕಜಾಲೋಲ ॥ ೨ ॥ ತುಂಗ ವಿಹಂಗತುರಂಗ ದಯಾಪಾಂಗ ॥ ರಂಗವಿಠಲ ಭವಭಂಗ ಶುಭಾಂಗ ॥ ೩ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೩೬. ರಾಗ ಕಾಂಬೋಧಿ, ಝಂಪೆತಾಳ.

ಲಟಕಟ ಸಂಸಾರವನು ನೆಚ್ಚಿ ಕೆಡಬೇಡಾ ॥ ಪಲ್ಲ ॥ ವಿಕಟದಲಿ ಮಾನವರು ಕೆಟ್ಟರೆಲ್ಲರು ನಿಜಾ ॥ ಅನುಪಲ್ಲ ॥ ಮುನ್ನೆ ನರಕಾಸುರನು ಬಡಿದು ಚಿಂತಾಮಣಿಯ । ತನ್ನ ಮನೆಯಲಿ ತಂದು ನಿಲಿಸೆ ನೃಪರಾ ॥ ಕನ್ನೆಯರ ಷೋಡಶಸಹಸ್ರವನೆ ತಂದಾತ। ಹೆಣ್ಣನೊಬ್ಬಳನೊಯ್ದುದಿಲ್ಲ ನೋಡೋ ॥ ೧ ॥ ಕೌರವರು ಧರೆಯೆಲ್ಲ ತನಗಾಗ ಬೇಕೆಂದು । ವೀರಪಾಂಡವರೊಡನೆ ಕದನ ಮಾಡಿ ॥ ಮಾರಿಯಾ ವಶವಯ್ದಿ ಪೋಪಾಗ ತನ್ನೊಡನೆ। ಸಿರಿಯ ಭೂಮಿಯ ವಯ್ದುದಿಲ್ಲ ನೋಡೊ ॥ ೨ ॥ ಸಾವಿರ ಕರವಪಡೆದ ಕಾರ್ತವೀರ್ಯಾರ್ಜುನನು। ಭುವನದೊಳಗೊಬ್ಬನೆ ವೀರನೆನಿಸಿ ॥ ರಾವಣನ ಸೆರೆ ಇಟ್ಟ ಕಾಮಧೇನುವ ಬಯಸಿ । ಆವಾಗಲೇನು

ಕೊಂಡೊಯ್ದು ನೋಡೋ ॥ ೩ ॥ ಪರಮ ತಪವನೆ ಮಾಡಿ ನಹುಷ ಸುರಪತಿಯೆನಿಸಿ । ವರಮುನಿಗಳ ಕೈಲೆ ದಂಡಿಗೆಯ ಪೊರಿಸಿ ॥ ಉರಗ ಜನುಮವನೈದಿ ಹೋಹಾಗ ತನ್ನೊಡನೆ । ಸುರಲೋಕದೊಳಗಿನ್ನೇನಾದ ನೋಡೋ ॥ ೪ ॥ ತುಂಗಗುಣ ಧ್ರುವ ವಿಭೀಷಣ ಹನುಮಾದಿಗಳು । ಮಂಗಳಾತ್ಮಕ ಹರಿಯನರಿತು ಭಜಿಸಿ ॥ ಭಂಗವಿಲ್ಲದೆ ಹೊರೆದು ಸಕಲ ಸೌಭಾಗ್ಯವನು । ರಂಗವಿಟ್ಠಲರೇಯನ ನೆರೆನಂಬಿರೊ ॥ ೫ ॥ ಶ್ರೀಃ ॥

೩೭. ರಾಗ ಭೈರವಿ, ಆದಿತಾಳ.

ನೀನೇ ಬಲ್ಲಿದನೊ ರಂಗ । ನಿನ್ನ ದಾಸರು ಬಲ್ಲಿದರೋ ॥ ಪಲ್ಲ ॥ ನಾನಾ ತೆರದಿ ನೀಧ್ಯಾನಿಸಿ ನೋಡಲು । ನೀನೆ ಭಕತರಾಧೀನನಾದ ಮೇಲೆ ॥ ॥ ಅನುಪಲ್ಲ ॥ ಪರಮಪುರುಷ ಪರಬ್ರಹ್ಮನೆಂದೆನುತಲಿ । ನಿರುತದಿ ಶ್ರುತಿಯು ಕೊಂಡಾಡಲೂ ನಿನ್ನನೂ ॥ ನರ ಧರ್ಮಜನರಮನೆಯ ಒಳಗೇನೆಂ । ಧರುಷದಿಂದ ಕರೆವಲ್ಲಿ ಪೋದಮೇಲೆ ॥ ೧ ॥ ಜಲಜಭವಾಂಡದೊಡೆಯನೆಂದೆನಿಸುವ । ಬಲುಬಲು ದೊಡ್ಡವನಹುದಹುದಾದಡೆ ॥ ಒಲಿದಡೆ ಸದ್ಗತಿ ನೀವೆ ಅನುದಿನ । ಬಲಿಯ ಮನೆಯ ಬಾಗಿಲ ಕಾಯ್ದ ಮೇಲೆ ॥ ೨ ॥ ಖ್ಯಾತಿಯಿಂದ ಪುರುಹೂತ ಸಹಿತ ಸುರ। ವ್ರಾತವು ನಿನ್ನನು ಓಲೈಸುತಿರೆ ॥ ಭೂತಳದೊಳು ಸಂಪ್ರೀತಿಯಿಂದಲಿ। ಪಾರ್ಥನ ರಥಕೆ ನೀ ಸೂತನಾದಮೇಲೆ ॥ ೩ ॥ ಧುರದೊಳು ಪಣೆಯನೆ ಹೊಡೆದ ಭೀಷ್ಮನ। ಮರಳಿಪುದೆನುತಲಿ ಚಕ್ರವ ಪಿಡಿಯಲು ॥ ಹರಿನಿನ್ನ ನಾಮದ ಜೋಡು ತೊಟ್ಟಿರಲವ। ನಿರವ ಕಂಡು ಸುಮ್ಮನೆ ತಿರುಗಿದಮೇಲೆ ॥ ೪ ॥ ತರಳಗೋಸುಗ ಒಡೆದು ಕಂಬದಿ ಬಂದು । ನರಮೃಗವೇಷದಿ ಭಕತರ ಸ್ಥಿತಿಗತಿ ॥ ಕರುಣದಿ ಸಲಹೊ ಶ್ರೀರಂಗವಿಟ್ಠಲ ನಿನ್ನ । ಸ್ಮರಿಪರ ಮನದಲಿ ಸೆರೆಯುಸಿಕ್ಕಿದ ಮೇಲೆ ॥ ೫ ॥

೩೮. ರಾಗ ಮಧ್ಯಮಾವತಿ, ಅಟತಾಳ.

ಕಂಜನೇತ್ರೆ ಶುಭ ಮಂಜುಳಗಾತ್ರೆ । ಕುಂಜರದಂತೆ ಗಮನೆ । ರಂಜಿತಾಂಗಿ ನಿರಂಜನಾಂಗಿ ॥ ಪಲ್ಲ ॥ ಧರೆಯಮೇಲೆ ಹಿರಿಯಳು ನಾ ।

ನಿರಲು ಲಜ್ಜೆ । ತೊರದು ನೀನು ॥ ಸರಸವಾಡೋರೆ ಮುರಹರನ । ಕರೆದು ಭಾಮಿನಿ ಸುಗುಣೆ ಕಾಮಿನಿ ॥ ೧ ॥ ಪತಿಯ ಪ್ರೀತಿಯಿಂದ ಎನ್ನ ಮೇಲೆ । ಅತಿಶಯ ಇರಲು ಜ್ಯೇಷ್ಠ ॥ ಸತಿಯಳೇನೆನು ನೀನು ನೋಡು । ಮತಿಯ ರುಗ್ಮಿಣಿ ಸುಪದ್ಮಗಂಧಿನೀ ॥ ೨ ॥ ಒಂದು ಕಾಲದಲ್ಲಿ ದಾಸಿ । ಯಿಂದ ಪತಿಯು ಸರಸವಾಡಲು ॥ ಬಂದಳೇನೆ ಅರಸಿ ಸಮ । ಳೆಂದು ಭಾಮಿನಿ ಸುಗುಣೆ ಕಾಮಿನೀ ॥ ೩ ॥ ದಾಸಿನಾಮಳು ನಾನು ಅಲ್ಲ । ವೇಶಮಾತನಾಡಬೇಡ ॥ ಶ್ರೀಶನ ದಯ ರಾಶಿ ಇರಲು । ದಾಸಿ ರುಗ್ಮಿಣಿ ಸುಪದ್ಮ ಗಂಧಿನಿ ॥ ೪ ॥ ಸಾರೆ ಕೃತ್ಯ ವಾರೆಮಾಡಿ । ದ್ವಾರಾವತಿಯಿಂದ ಎನ್ನ ॥ ಸಾರೆ ಬಂದ ಪ್ರೀತಿಯು ಆ । ಹಾರೆ ಭಾಮಿನಿ ಸುಗುಣೆ ಕಾಮಿನಿ ॥ ೫ ॥ ಕಡಲಶಾಯಿ ತಡೆದರಿನ್ನು । ದಿಡುಗು ದೇಹ ಬಿಡುವೆನೆಂಬೊ ॥ ನುಡಿಯ ಕೇಳಿ ಪಿಡಿದನೆ। ಬಿಡದೆ ರುಗ್ಮಿಣಿ ಸುಪದ್ಮ ಗಂಧಿನಿ ॥ ॥ ೬ ॥ ಮಂದರಧರ ಪ್ರೀತಿಯ । ಲಿಂದೆ ನಿನ್ನ ಪಡೆದನೇನೆ ॥ ಒಂದು ಮಣಿಯ ಕಾರಣದ। ಲಿಂದೆ ಭಾಮಿನಿ ಸುಗುಣೆ ಕಾಮಿನಿ ॥ ೭ ॥ ಸುಮ್ಮನೆ ಬಂದವಳಿಗೆ । ಬ್ರಹ್ಮ ಲಗ್ನದಿ ಬಂದೆನಗೆ ॥ ಸಾಮ್ಯವೇನೆ ಯಾಕೆ ನಿನಗೆ । ಹೆಮ್ಮೆ ರುಗ್ಮಿಣಿ ಸುಪದ್ಮ ಗಂಧಿನೀ ॥ ೮ ॥ ಮಾನಾದಿ ಭಕ್ತಿಯು ಕನ್ಯಾ । ದಾನವು ಲೋಕದೊಳಗುಂಟು ॥ ಏನು ನಿನ್ನ ತಾತಾ ಕೊಟ್ಟ । ದೀನ ಭಾಮಿನಿ ಸುಗುಣೆ ಕಾಮಿನಿ ॥ ೯ ॥ ಎನ್ನ ಹಾಗಾದೆಂದು । ಚನ್ನ ಕೇಳಿ ಶತಧನ್ವನ ॥ ಬೆನ್ನಟ್ಟಿ ಕೊಂದಾನೆ ನಿ । ಚ್ಚನ್ನ ರುಗ್ಮಿಣಿ ಸುಪದ್ಮ ಗಂಧಿನಿ ॥ ೧೦ ॥ ನೀತಿ ಅರಸರ ಸ್ವಭಾವ । ಚೋರರ ಕೊಲ್ಲಬೇಕೆಂಬೊ ॥ ಸಾರಪ್ರೀತಿಯುದರಿಂದ । ತಾರೆ ಭಾಮಿನಿ ಸುಗುಣೆ ಕಾಮಿನಿ ॥ ೧೧ ॥ ಇಂದ್ರಾದಿದೇವತೆಗಳಿಂದ । ಸಾಂದ್ರಯುದ್ಧವನ್ನೆ ಮಾಡಿ ॥ ಮೀಂದ್ರ ಎನಗೆ ಪಾರಿಜಾತ । ತಂದ ರುಗ್ಮಿಣಿ ಸುಪದ್ಮ ಗಂಧಿನೀ ॥ ೧೨ ॥ ವರದ ರಂಗ ಕರದೊಳೆನ್ನ । ಸುರ ವೃಕ್ಷಪುಷ್ಪಿರಲು ನಿನ್ನ ॥ ತ್ವರೆಕ್ಲೇಶನೋಡಿ ತಂದ । ತರುವ ಭಾಮಿನಿ ಸುಗುಣೆ ಕಾಮಿನಿ ॥ ೧೩ ॥ ನಿಜಳೆಂದು ರಂಗನು ಎನ್ನ । ವಿಜಯ ಯಾತ್ರೆಯಲ್ಲಿ ತನ್ನ । ಭುಜಗಳಿಂದ ಆಲಿಂಗಿಸೀದ । ಸುಜನೆ ರುಗ್ಮಿಣಿ ಸುಪದ್ಮ ಗಂಧಿನೀ ॥ ೧೪ ॥ ಅರಸರ ಸ್ವಭಾವ

ತಮ್ಮ। ಸರಸೇರ ಮನೆಯೊಳಗಿಟ್ಟು । ನಿರಸಾದಾನೇರಿಂಧೋಗೋದು। ಸ್ಮರಿಸೆ ಭಾಮಿನಿ ಸುಗುಣೆ ಕಾಮಿನಿ ॥ ೧೫ ॥ ಸಾರಾವಚನ ಕೇಳಿ ಭಾಮೆ । ಮೋರೆ ಕೆಳಗೆ ಮಾಡುತಿರಲು । ನಾರಿ ರುಗ್ಮಿಣಿ ಬಾರೆ ಎಂದು। ವೀರಕರೆದನು ಆಕೆಯಲ್ಲಿ ಸೇರಿದನು ॥ ೧೬ ॥ ಮಂಗಳಾಂಗ ಮಹಿಮ ಕೇಶವಾ । ಲಿಂಗಿಸಿದ ಭೈಷ್ಮಿಯನ್ನು ॥ ತುಂಗಸರ್ವ ಗೋಪೀರಮಣ। ರಂಗವಿಠಲನು ಪೂರ್ಣ ಶ್ರೀಪತಿ ॥ ೧೭ ॥ ಶ್ರೀಃ ॥

೩೯. ರಾಗ ಮೋಹನ, ಅಟತಾಳ.

ಕಳ್ಳನೆಂದು ದೂರುತಾರೆ। ಗೋಪ್ಯಮ್ಮ ಕೇಳೆ। ಗೊಲ್ಲತಿಯರೆಲ್ಲ ಕೂಡಿ ॥ ॥ ಪಲ್ಲ ॥ ಕೊಲ್ಲಬೇಕೆಂಬ ಬಗೆಯೊಳೆನ್ನ ಇಲ್ಲದ ಸುದ್ದಿ ಪುಟ್ಟಿಸಿ ॥ ಅನು ಪಲ್ಲ ॥ ಹರವಿಹಾಲ ಕುಡಿವೋರೆ। ಎನ್ನ ಹೊಟ್ಟೆ। ಕೆರೆಯೇನೆ ನೋಡೆ ಅಮ್ಮಯ್ಯಾ । ಕರದು ಅಣ್ಣನ ಕೇಳು। ಉಂಟಾದರೆ । ಒರಳಿಗೆ ಕಟ್ಟಿ ಇನ್ನೊಮ್ಮೆ ॥ ೧ ॥ ಅಟ್ಟವನೇರಿ ಇಳಿಯೋದು । ಅದು ಎನಗೆ। ಕಷ್ಟವ ಲ್ಲವೆ ಅಮ್ಮಯ್ಯ ನೀ ॥ ಕೊಟ್ಟಹಾಲು ಕುಡಿಯಲಾರದೆ। ಅದ ನಾನು। ಬಟ್ಟಲಲ್ಲೆ ಬಿಟ್ಟು ಪೋದೆ ॥ ೨ ॥ ವಿಾಸಲ ಬೆಣ್ಣೆ ಮೆಲುವೋದು। ಅದು ಎನಗೆ । ದೋಷವಲ್ಲವೇನೆ ಅಮ್ಮಯ್ಯ ॥ ಆಶೆಮಾಡಿಕೊಂಡ ದೇವರು। ಅದು ಎನ್ನ। ಮೋಸಮಾಡಿ ಕಣ್ಣು ಕಳೆಯದೆ ॥ ೩ ॥ ಪುಂಡುತನ ಮಾಡೋರೆ। ನಾನು ದೊಡ್ಡ । ಗಂಡಸೇನೆ ನೋಡೆ ಅಮ್ಮಯ್ಯ ॥ ಕಂಡ ವಾರು ದೂರುತಾರೆ। ಗೋಪ್ಯಮ್ಮ ನಿನ್ನ। ಕಂದನಲ್ಲವೇನಮ್ಮಯ್ಯ ॥ ೪ ॥ ಉಂಗುರದ ಕರದಿಂದ। ಗೋಪಿ ತನ್ನ। ಶೃಂಗರದ ಮಗನ ಎತ್ತಿ । ರಂಗ ವಿಟ್ಠಲನ್ನ ಪಾಡಿ। ಉ। ತ್ತುಂಗ ಉಡುಪಿ ಕೃಷ್ಣನ ತೂಗಿದಳಾಗ ॥ ೫ ॥

೪೦. ರಾಗ ಆನಂದಭೈರವಿ, ಝಂಪೆತಾಳ.

ಐಶ್ವರ್ಯಜನಕವಾಗೀ। ನಿರ್ಮಿಸಿದ । ಪಚ್ಚೆಯತೊಟ್ಟಲಲ್ಲೀ ॥ ಅಚ್ಯುತಾನಂತನಿರಲೂ । ತೂಗಿದರು । ಮಚ್ಛಾವತಾರ ಹರಿಯಾ ॥ ೧ ॥ ಧರ್ಮಸಂಸ್ಥಾಪನೆಂದೂ। ನಿರವಧಿಕ। ನಿರ್ಮಲಚರಿತ್ರನೆಂದೂ॥ ಮರ್ಮ

ಕರ್ಮಗಳ ತಿಳಿದು । ತೂಗಿದರು । ಕೂರ್ಮಾವತಾರ ಹರಿಯಾ ॥ ೨ ॥ ಸರಸಿಜಾಕ್ಷಿಯರೆಲ್ಲರೂ । ಜನವಶೀ । ಕರದಿವ್ಯರೂಪದಿಂದಾ ॥ ಪರವು ಹರುಷದಲಿ ಪಾಡೀ । ತೂಗಿದರು । ವರಹಾವತಾರಹರಿಯಾ ॥ ೩ ॥ ಕರಿ ಕುಂಭಗಳ ಪೋಲುವ । ಕುಚದೊಳು । ಹಾರಪದಕವು ಹೊಳೆಯುತಾ ॥ ವರವರ್ಣಿನಿಯರು ಪಾಡಿ । ತೂಗಿದರು । ನರಸಿಂಹಾವತಾರ ಹರಿಯಾ ॥ ॥ ೪ ॥ ಭಾಮಾಮಣಿಯರೆಲ್ಲರೂ । ಯದುವಂಶ । ಸೋಮನಿವನೆಂದು ಪೊಗಳೀ ॥ ನೇಮದಿಂದಲಿ ಪಾಡಿ । ತೂಗಿದರು । ವಾಮನಾವತಾರ ಹರಿಯಾ ॥ ೫ ॥ ಸಾಮಜವರದನೆಂದೂ । ಅತುಳಭೃಗು । ರಾಮನವ ತಾರನೆಂದೂ ॥ ಶ್ರೀಮದಾನಂದ ಹರಿಯು । ತೂಗಿದರು । ಪ್ರೇಮಾತಿರೇಕ ದಿಂದಾ ॥ ೬ ॥ ಕಾಮನಿಗೆ ಕಾಮನೆಂದೂ । ಸುರಸಾರ್ವ । ಭೌಮಗುಣ ಧಾಮನೆಂದೂ ॥ ವಾಮನೇತ್ರೆಯರು ಪಾಡಿ । ತೂಗಿದರು । ರಾಮಾವ ತಾರ ಹರಿಯಾ ॥ ೭ ॥ ಸೃಷ್ಟಿಯ ಕರ್ತನೆಂದೂ । ಜಗದೊಳಗೆ । ಶಿಷ್ಟ ಸಂತುಷ್ಟನೆಂದೂ ॥ ದೃಷ್ಟಾಂತರಹಿತನೆಂದೂ । ತೂಗಿದರು । ಕೃಷ್ಣಾವ ತಾರ ಹರಿಯಾ ॥ ೮ ॥ ವೃದ್ಧನಾರಿಯರೆಲ್ಲರೂ । ಜಗದೊಳಗೆ ಪ್ರ । ಸಿದ್ಧ ನಿವನೆಂದು ಪೊಗಳೀ ॥ ಬದ್ಧಾನುರಾಗದಿಂದಾ । ತೂಗಿದರು । ಬುದ್ಧಾವ ತಾರ ಹರಿಯಾ ॥ ೯ ॥ ಥಳಥಳತ್ಕಾರದಿಂದಾ । ರಂಜಿಸುವ । ಮಲಯು ಜಾಲೇಪದಿಂದಾ ॥ ಜಲಜಗಂಧಿಯರು ಪಾಡೀ । ತೂಗಿದರು । ಕಲ್ಕ್ಯಾ ವತಾರ ಹರಿಯಾ ॥ ೧೦ ॥ ಕನಕಮಯಖಚಿತವಾದಾ । ತಲ್ಪದಲಿ । ವನಜಭವಜನಕನಿರಲೂ ॥ ವನಜನಾಭನ್ನ ಪಾಡಿ । ತೂಗಿದರು । ವನಿ ತಾಮಣಿಯರೆಲ್ಲರೂ ॥ ೧೧ ॥ ದೇವಾಧಿದೇವನೆಂದೂ । ಈ ಶಿಶುವು । ಭಾವನಾತೀತನೆಂದೂ ॥ ದೇವಗಂಧರ್ವರು ಪಾಡಿ । ತೂಗಿದರು । ದೇವ ಗಾಂಧಾರರಾಗದಿಂದಾ ॥ ೧೨ ॥ ಕಂಕಣಧ್ವನಿಗಳಿಂದ । ರಂಜಿಸುವ । ಕಿಂಕಿಣೀಸ್ವನಗಳಿಂದಾ ॥ ಪಂಕಜಾಕ್ಷಿಯರು ಪಾಡಿ । ತೂಗಿದರು । ಶಂ ಖಿನೀಭಾಮಿನಿಯರೂ ॥ ೧೩ ॥ ಮತ್ತಗಜಗಾಮಿನಿಯರು । ದಿವ್ಯತರ । ಚಿತ್ರವಸ್ತ್ರಗಳನುಟ್ಟು ॥ ಚಿತ್ತಸಂತೋಷದಿಂದ । ತೂಗಿದರು । ಚಿತ್ರಿಣೀ ಭಾಮಿನಿಯರೂ ॥ ೧೪ ॥ ಆನಂದಸದನದೊಳಗೇ । ಗೋಪಿಯರು । ಆ

ನಂದಸುತನ ಕಂಡೂ ॥ ಆನಂದಭರಿತರಾಗಿ । ತೂಗಿದರು । ಆನಂದಭೈರವಿಯಿಂದಾ ॥ ೧೫ ॥ ಹಸ್ತಭೂಷಣವೆರೆಯಲೂ । ದಿವ್ಯತರ । ಹಸ್ತಲಾಘವಗಳಿಂದಾ ॥ ಹಸ್ತಗಳ ಪಿಡಿದುಕೊಂಡು । ತೂಗಿದರು । ಹಸ್ತಿನೀಭಾಮಿನಿಯರೂ ॥ ೧೬ ॥ ಚೊಕ್ಕಕಸ್ತೂರಿಪಂಕದಿಂ । ರಂಜಿಸುವ । ಮಕರಿಕಾಪತ್ರ ಬರದೂ ॥ ಲಿಕುಚಸ್ತನಿಯರು ಪಾಡಿ । ತೂಗಿದರು । ಅಕಳಂಕಚರಿತಹರಿಯಾ ॥ ೧೭ ॥ ಪಲ್ಲವಾಧರೆಯರೆಲ್ಲಾ । ಈ ಶಿಶುವು । ತುಲ್ಯವರ್ಜಿತನೆನುತಲೀ ॥ ಸಲ್ಲಲಿತಮಧುರಗಾನ । ತೂಗಿದರು । ಕಲ್ಯಾಣಿರಾಗದಿಂದಾ ॥ ೧೮ ॥ ಪದ್ಮರಾಗವ ಪೋಲುವ । ಹರಿಪಾದ । ಪದ್ಮದಲಿ ತಮ್ಮ ಹೃದಯಾ ॥ ಪದ್ಮದಲಿ ಸಿಲಿಸಿ ಪಾಡೀ । ತೂಗಿದರು । ಪದ್ಮಿನೀಭಾಮಿನಿಯರೂ ॥ ೧೯ ॥ ನೀಲಘನನೀಲ ಜೋಜೋ । ಕರುಣಾಲವಾಲ ಶ್ರೀಕೃಷ್ಣ ಜೋಜೋ ॥ ಲೀಲಾವತಾರ ಜೋಜೋ । ಪರಮಾತ್ಮ । ಬಾಲಗೋಪಾಲ ಜೋಜೋ ॥ ೨೦ ॥ ಇಂದುಧರನ ಮಿತ್ರ ಜೋಜೋ । ಶ್ರೀಕೃಷ್ಣ । ಇಂದುರವಿನೇತ್ರ ಜೋಜೋ ॥ ಇಂದುಕುಲನೇತ್ರ ಜೋಜೋ । ತೂಗಿದರು । ಇಂದಿರಾರಮಣ ಜೋಜೋ ॥ ೨೧ ॥ ವಿಷಧರನ ತಲ್ಪ ಜೋಜೋ । ಶ್ರೀಕೃಷ್ಣ । ವಿಷವನುಂಡವನೆ ಜೋಜೋ ॥ ವಿಷಶಯನ ಕೃಷ್ಣ ಜೋಜೋ । ಪರಮಾತ್ಮ । ರಂಗವಿಟ್ಠಲನೆ ಜೋಜೋ ॥ ॥ ೨೨ ॥ ತುಂಗಭವಭಂಗ ಜೋಜೋ । ಪರಮಾತ್ಮ । ರಂಗ ಕೃಪಾಂಗ ಜೋಜೋ ॥ ಮಂಗಳಾಪಾಂಗ ಜೋಜೋ । ನವ ಮೋಹ । ನಾಂಗ ರಂಗವಿಟ್ಠಲನೆ ಜೋಜೋ ॥ ೨೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೪೧. ರಾಗ ಭೂಪಾಳಿ, ಅಟತಾಳ.

ಬಿಡಬಿಡಿ ಸಂದೇಹವನ್ನು ॥ ಬಿಡಬಿಡಿ ಸಂದೇಹ ಪೊಡವಿಯ ಮನುಜರೆಲ್ಲ । ಒಡೆಯನೊಬ್ಬನೆ ಜಗಕೆ ರಂಗವಿಟ್ಠಲಾ ॥ ಪಲ್ಲ ॥ ಸುರಮುನಿಗಳು ಕೂಡಿ ಪರದೈವ ಯಾರೆಂದು । ಪರಮಹಟದಲಿ ವಿವಾದವನು ಮಾಡೆ ॥ ಸರಸಿಜಾತನ ಸುತನು ಚ ಗುಣವನರಿಯಲು ಪೋದ । ಅರಿತು ಬರುವೇ

ನೆಂದು ಪದ್ಮಜನ ಸಭೆಗೆ ॥ ೧ ॥ ಮುನಿವರನ ಕಂಡು ಪದ್ಮಜನೆದ್ದು ವಂದಿಸದೆ । ವನಜಭವ ಕೋಪವನು ಮಾಡಿ ಜರಿಯೆ । ಮುನಿಪರಮ ತತ್ವ ಇವನಲ್ಲೆಂದೆನುತ ಸಾರಿ ॥ ಮನಸಿಜನ ವೈರಿ ಲೋಕಕೆ ಪೋದನು ॥ ॥ ೨ ॥ ಹರನು ಭೃಗುಮುನಿ ಬರಲು ತನ್ನನುಜನೆಂತೆಂದು । ಸರಭಸದಲ್ಲಿದ್ದು ತಕ್ಕೈಸಪೋಗೆ ॥ ಜರಿದು ಹರನ ಪೂಜೆ ಜಗದಿ ಬೇಡೆನಲು ಶಂ। ಕರನು ಶೂಲವ ಪಿಡಿದು ಎಸೆಯ ಬಗೆದಾ ॥ ೩ ॥ ಹರನ ಕೋಪವ ಕಂಡು ಗಿರಿಜೆ ಚರಣವ ಪಿಡಿದು । ಕರುಣಿ ಕಾಯಲುಬೇಕು ಮುನಿಯ ಎನಲು ॥ ಮರಣಭಯದಿಂದ ನಿರ್ಮುಕ್ತನಾಗುತಲೆ ಮುನಿ । ಹೊರತೋದ ವೈಕುಂಠ ಲೋಕಕೆ ॥ ೪ ॥ ಅಲ್ಲಿ ಮಹಲಕ್ಷ್ಮಿ ತೊಡೆಯಲಿ ಪವಡಿಸಿ ಇರಲು । ಫುಲ್ಲನಾಭನೆ ಚರಣದಿಂದಲೊದೆಯೇ । ಮೆಲ್ಲನೆ ಪಿಡಿದು ಪಾದವ ಮುನಿಗೆ ಪೊಡಮಟ್ಟು । ಇಲ್ಲಿ ವಿಜಯಂಗೈಯ್ಯಲೇಕೆಂದನು ॥ ೫ ॥ ಪರಮ ಮುನಿಪಾದ ಸೋಂಕಲು ಪಾವನಾದೆನು । ಚರಣರಜ ಪರಮಪಾವನ ಸುಲಭವೆ ॥ ಸಿರಿಗೆ ನೆಲೆಮನೆಯಾಯ್ತು । ವರ ಪ್ರಹರದಿಂದೆನಲು । ಹರುಷದಲಿ ಉಬ್ಬಿ ಮುನಿ ತನುಮರೆದನೂ ॥ ॥ ೬ ॥ ಕರಿಯು ಸರಸಿನೊಳು ಮಕರಿಯು ಪಿಡಿದೆಳೆಯುತಿರೆ । ಪರಮಪುರುಷನೆ ಪೊರೆಯೊ ಎಂದು ಕೂಗೆ । ಗರುಡವಾಹನನಾಗಿ ಹರಿ ಬಂದು ಕಾಯ್ದುದಕೆ । ಪರದೈವವ್ಯಾರು ಇವನುಳಿದು ಜಗದಿ ॥ ೭ ॥ ರಾಜಸೂಯವ ಧರ್ಮಸುತನು ಮಾಡಿದ ವೇಳೆ । ಪೂಜೆಗರ್ಹರು ಸುರರೊಳ್ಯಾರೆನ್ನಲು ॥ ಭಾಜನನು ಸದ್ಗುಣನು ಕೃಷ್ಣನೊಬ್ಬನೆ ಯೆಂದು । ರಾಜೀತ ಸುರವ್ರತನು ನುಡಿದಾ ನಿಜವ ॥ ೮ ॥ ಗಂಗಾಜನಕಪಾದ ದಿವ್ಯಮಂಗಳ ಚರಿತ । ಶೃಂಗಾರ ನಿಧಿ ಭಕತಾಧೀನ ದೇವಾ ॥ ಮಂಗಳಾತ್ಮಕನಾದ ರಂಗವಿಠ್ಠಲನ । ಹಿಂಗದೆ ಜನರುಗಳು ನೆರೆನಂಬಿರೋ ॥ ೯ ॥

೪೨. ರಾಗ ಯದುಕುಲಕಾಂಬೋದಿ, ಆದಿತಾಳ.

ರಂಗ ಮನೆಗೆ ಬಾರೊ ಕೃಪಾಂಗ ಶ್ರೀ ॥ ಪಲ್ಲ ॥ ರಂಗಕಲುಷ ವಿಭಂಗ। ಗರುಡ ತುರಂಗ ನವ ಮೋಹನಾಂಗ । ಶ್ರೀರಂಗ ॥ ಅನುಪಲ್ಲ ॥ ಪಚ್ಚೆ

ಬಾವುಲಿಗಳು ನಿನ್ನ ಕಿವಿಯೊಳಗಿಟ್ಟು । ಮುಚ್ಚಿ ಮುದ್ದಾಡಿ ನೋಡುವೆ॥ ಹೆಚ್ಚಿದ । ವಾಲಿಯನು ಬಾಣದಿ ಬೆಚ್ಚಿದ ಸಪ್ತತಾಳಂಗಳನು । ಬಿಚ್ಚಿದ ಸಮುದ್ರವನ್ನು ಮುಚ್ಚಿದ ॥ ಎಚ್ಚರಿಕೆಯಲಿ ಲಂಕೆಯನು ಪೊಕ್ಕು ಕಿಚ್ಚುಗಳ ಹಚ್ಚಿಸಿದ । ಹನುಮನ ಮೆಚ್ಚಿಸಿದ । ಖರದೂಷಣರ ಶಿರಗಳ ಕೊಚ್ಚಿದ । ಅಚ್ಯುತಾನಂತ ॥ ೧ ॥ ಮುತ್ತಿನ ಹಾರಗಳು ನಿನ್ನ ಕುತ್ತಿಗ್ಗೆ ಹಾಕಿ । ಎತ್ತಿ ಮುದ್ದಾಡಿ ನೋಡುವೆ ॥ ಹತ್ತಿದ । ರಥವನು ಮುಂದೊತ್ತಿದಾ । ಉಭಯರಿಗೆ ಜಗಳವನು ಬಿತ್ತಿದ । ಮತ್ತಮಾತಂಗಗಳನೆಲ್ಲ । ಕತ್ತರಿಸಿ ಮುಂದೊತ್ತಿ ನಡೆಯುತ ಈ ತೆರದಿ ನಿಂದ । ವರ ರಥಿಕರ ಕತ್ತರಿಸಿ ಕಾಳಗವ ಮಾಡಿದ ॥ ೨ ॥ ಉಂಗುರಗಳ ನಿನ್ನ ಅಂಗುಲಿಗಳಿಗಿಟ್ಟು । ಕಂಗಾಳಿಂದ ನೋಡುವೆ । ಹೆಂಗಳ । ಗೋಪಹೆಂಗಳ । ಉತ್ತುಂಗ ಕುಚಂಗಳ । ಆಲಿಂಗಿಸಿ ಭುಜಂಗಳ । ಕಮಲ ಸಮಪಾದಂಗಳ । ಸ್ಮರಿಸಿದ ಮಾತಂಗರಾಯನ । ಭಂಗವ ಪರಿಹರಿಸಿ ಬೇಗದಿ । ಹಿಂಗದೆ ಸ್ವರ್ಗವನಿತ್ತ್ಯೋತುಂಗವಿಕ್ರಮ ರಂಗವಿಟ್ಠಲನೆ ॥ ೩ ॥ ಶ್ರೀಃ ॥

೪೩. ರಾಗ ಶಂಕರಾಭರಣ, ಆದಿತಾಳ.

ಕೇಳಿದ್ಯಾ ಕೌತುಕವನ್ನು । ಕೇಳಿದ್ಯಾ ॥ ಪಲ್ಲ ॥ ಕೇಳಿದ್ಯಾ ಕೌತುಕವನ್ನು । ನಾ ಕೇಳಿದೆ ನಿನಗಿಂತ ಮುನ್ನು ॥ ಅಹ । ಚಾಳಿಕಾರ ಕೃಷ್ಣ ಪೇಳದೆ ಮಧುರೆಗೆ । ಕೋಳಿ ಕೂಗದ ಮುನ್ನ । ನಾಳೆ ಪಯಣವಂತೆ ॥ ಅನುಪಲ್ಲ ॥ ಕರೆಯ ಬಂದಿಹನಂತೆ ಕ್ರೂರ । ತಮ್ಮ । ಕಿರಿಯಯ್ಯನಂತೆ ಅಕ್ರೂರ । ವರ । ಹೊರವಳಲಲಿ ಬಿಟ್ಟು ತೇರ । ಅಹ । ಹಿರಿಯನೆಂದು ಕಾಲಿಗೆರಗಲು ರಾಮಕೃ । ಷ್ಣರ ಕಕ್ಕಿಸಿಕೊಂಡು । ಮರುಳು ಮಾಡಿದ ಬುದ್ಧಿ ॥ ೧ ॥ ಸೋದರಮಾವನ ಮನೆಯ । ಬೆಳ । ಗಾದರೆ ಅಲ್ಲಿ ಉದಯ । ಪರ । ಮಾದರವಂತೆ ತ್ವರಿಯ । ಅಲ್ಲಿ । ತೋರಿದ ಮನಕೆ ನಾರಿಯ । ಅಹ । ಸಾಧಿಮಲ್ಲ ಮೊದಲಾದ ಬಿಲ್ಲುಹಬ್ಬ । ಸಾಧಿಸಿಕೊಂಡು ಬರುವೆವೆಂಬ ಸುದ್ದಿ॥ ೨ ॥ ಹುಟ್ಟಿದ್ದ ಸ್ಥಳವಂತೆ ಮಧುರಿ । ಕಂಸ । ನಟ್ಟುಳಿಗಾರದೆ ಬೆದರಿ । ತಂದಿಟ್ಟ ತನ್ನ ತಂಗೆಚದುರಿ । ತೋರಿ । ಕೊಟ್ಟಳು ಭಯವನ್ನು ಬೆದರಿ ॥

ಅಹ । ಎಷ್ಟು ಹೇಳಲಿ ರಂಗವಿಟ್ಠಲನು ಮಾವನ । ಬೆಟ್ಟಿಗಾಗಿ ಒಡಂಬಟ್ಟು ಪೋಗುವ ಸುದ್ದಿ ॥ ೩ ॥ ಶ್ರೀಃ ॥

೪೪. ರಾಗ ಶಂಕರಾಭರಣ, ಅಟತಾಳ.

ಜೋ ಜೋ ಜೋಜೋ ಜೋಜೋ ಜೋಕೃಷ್ಣ ಪರಮ । ನಂದ ಗೋಪಿಯ ಕಂದ ಮುಕುಂದ ॥ ಪಲ್ಲ ॥ ಭೂಮಿಯ ಚಿನ್ನದತೊಟ್ಟಿಲ ಮಾಡಿ । ಸೋಮ ಸೂರ್ಯರೆಂಬ ಕಲಶವ ಮಾಡಿ ॥ ಆ ಮಹಾ ಆಕಾಶ ಕೇದಂಟವಮಾಡಿ । ಜೋಜೋ ಜೋಜೋ ಜೋ ಯೆಂದು ಪಾಡಿ ॥ ೧ ॥ ವಸುದೇವ ಸುತನಾದ ಮುದ್ದು ಮುರಾರಿ । ಅಸುರೆ ಪೂತನಿಯ ಪ್ರಾಣಾಪಹಾರಿ ॥ ಅಸಮಸಾಹಸ ಮಲ್ಲದೈತ್ಯರ ವೈರಿ । ಶಿಶುವಾಗಿ ದೇವಕಿಗಾನಂದ ತೋರಿ ॥ ॥ ೨ ॥ ಬೌದ್ಧನಾಗಿ ದೈತ್ಯರನಳಿದ್ಯಲ್ಲ । ಮುದ್ದು ತುರಂಗವನೇರಿ ಕಲ್ಕ್ಯನಾದ್ಯಲ್ಲ ॥ ಪದ್ಮನಾಭ ಶಿರಿ ಭಕ್ತವತ್ಸಲ್ಲ । ನಿದ್ರೆಯ ಮಾಡಯ್ಯ ಶ್ರೀರಂಗ ವಿಠಲಾ ॥ ೩ ॥ ಶ್ರೀಃ ॥

೪೫. ರಾಗ ಕಾಂಬೋಧಿ, ಅಟತಾಳ.

ಮರೆತಿಯೋನೋ ರಂಗ । ಮಂಗಳಾಂಗ ॥ ತುರುಕರ ಕಾಯ್ವಲ್ಲಿ ತೊಂಡನಾಗಿದ್ದೆನ್ನ ॥ ಪಲ್ಲ ॥ ಕೋಲು ಕೈಯಲಿ ಕೊಳಲು । ಜೋಲುಗಂಬಳಿ ಹೆಗಲ । ಮೇಲೆ ಕಲ್ಲಿಚೀಲ ಕಂಕಳಲ್ಲಿ ॥ ಕಾಲಗಡಗವನಿಟ್ಟು ಕಾಡೊಳಿಹ ಪಶುಹಿಂಡಾ । ಲಾಲಿಸುವ ಬಾಲಕರ ಮೇಳದೊಳಗಿದ್ದೆನ್ನ ॥ ೧ ॥ ಕಲ್ಲುಮಣಿ ಕವಡಿಯನು ಕಾಡೊಳಿಹ ಗುಲುಗುಂಜಿ । ಸಲ್ಲದೊಡವೆಯ ನೀನು ಸರ್ವಾಂಗಕೆ ॥ ಅಲ್ಲಲ್ಲಿಸೆವ ಧರಿಸಿ ನವಿಲ । ಗರಿಗಳ ಗೊಂಡೆ । ಅಲ್ಲಿ ಗೊಲ್ಲರ ಕೂಡಾ ಚಲ್ಲಾಟಾ ಮಾಡುತಲಿ ॥ ೨ ॥ ಸಿರಿದೇವಿ ಬಂದು ಸೇರಿದ ಬಳಿಕ ಲೋಕದಲಿ । ಸಿರಿ ಅರಸನೆಂದು ಸೇವಕರರಿವರೊ ॥ ಶರಣಾಗತರ ಪೊರೆವ ಶ್ರೀರಂಗವಿಠಲಯ್ಯ । ನರಸಿಂಗ ನೀನಿರುವ ಪರಿಯು. ಮುಂದಿನ ಸಿರಿಯು ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೪೬. ರಾಗ ಕೇದಾರಗೌಳ, ಝಂಪೆತಾಳ.

ಮದನನಯ್ಯನ ಮನ ಮಧುಪನೆಂಬುವರೆ । ಮಧುರಿಪು ಮಾರ ಮಣ ವಿಠಲರೇಯ ॥ ಪಲ್ಲ ॥ ಅರಿಯದ ಬಾಲೇರಿಗೆ ತನ್ನ ಪರಿಯ ನಿರೂಪಿಸಿ ಮುನ್ನ । ನೆರೆದು ರತಿಪತಿಯಾ ಸುಖ ನೆರೆದೋರಿದಾ ॥ ತೊರೆದು ಬದುಕುವದೆಂತು ರತಿಪತಿಯ ಪಿತನಗಲಿ । ವಿರಹ ದುರಿತಾನ ಲವಡರಿ ಸುಡುತಲಿಹುದೆ ॥ ೧ ॥ ನಡೆನುಡಿ ನಗೆಯಮಾಡಿ ಬಾಲೆಯರನು ಬ್ಬಿಸಿ । ಬಿಡದೆ ಎಮ್ಮನು ತನ್ನ ವಶಮಾಡಿದಾ ॥ ಕಡೆಯಿಲ್ಲದನುಭವದಾ ಸುಖದ ಸವಿಯನೆ ತೋರಿ । ಮಡದಿ ತಡೆದಳೊ ಮಧುರಿಯಲಿ ನಲ್ಲನಾ ॥ ॥ ೨ ॥ ಎಂದೆಂದು ನಿಮ್ಮವಶದಲ್ಲಿಹೆನೆಂದು ಅಭಯವನಿತ್ತು । ಇಂದುಮುಖಿ ನಾರಿಯರ ನೆರೆನಂಬಿಸಿ ॥ ನಂದನಂದನ ನಮ್ಮ ಕಾನನದೊಳೀಡಾಡಿ । ಇಂದು ಮಧುರಿಯ ನಾರಿಯರ ನೇತ್ರದಾ ॥ ೩ ॥ ಇವನ ವಚನದ ಕಪಟ ತಿಳಿಯಲರಿಯದೆ ನಾವು । ನವ ಹರಿಣಿಯಂತೆ ಮರುಳಾಗಿ ಕೇಳೀ ॥ ವಿವರವರಿಯದೆ ನಾವು ಕಡುನೊಂದೆವೆಲೊ ಮಧುಪ । ಇವನ ಗುಣವರಿಯದಲೆ ಕಡುಕರುಣಿಯೆಂಬುವರು ॥ ೪ ॥ ಪತಿಸುತರ ಭವಬಂಧ ನಗಳೆಲ್ಲವೀಡಾಡಿ । ಗತಿ ನಮಗೆ ನೀನೆಂದು ಮರೆಹೊಕ್ಕೆವೋ ॥ ಕೃತಕ ನರಿಯದೆ ನಮ್ಮ ವನದಿ ನಿಲ್ಲಿಸಿ ಪೋದ । ಪತಿಯೊಡನೆ ಸಂಧಾನ ವೆಂತೊ ಎಲೊ ಮಧುಪಾ ॥ ೫ ॥ ಮರುಳುಗಳು ನಾವು ಶ್ರೀಹರಿಯು ಕೂಟ ಭಾಷಿ । ಇರುಳು ಹಗಲು ಜರೆಜರೆದಳಲುವ ॥ ಸಿರಿಯವನ ಉಂಗುಟದ ಉಗುರುಗುಣ ಕಾಣಳೆಲೊ । ಹರಿನಮ್ಮ ನೆನೆವುದಚ್ಚರಿಯಲ್ಲವೆ ॥ ೬ ॥ ತುಂಗಗುಣನಿಲಯವನ ಅಂಗಜನ ಪಿತನೆಂದು । ರಂಗನಿಗೆ ಮನ ಸೋತು ಮರುಳಾದೆವೋ ॥ ಹೀಂಗೆ ಬದುಕುವದೆಂತು ಭೃಂಗ ಮಧು ರೆಗೆ ಪೋಗಿ । ರಂಗವಿಟ್ಠಲನ ತಂದೆಮ್ಮನುಳುಹುವದೋ ॥ ೭ ॥ ಶ್ರೀಃ ॥

೪೭. ರಾಗ ಮಧ್ಯಮಾವತಿ, ಆದಿತಾಳ.

ನಲಿದಾಡೆ ಎನ್ನ ನಾಲಿಗೆ ಮೇಲೆ । ಶಾರದಾದೇವಿ ಕುಣಿದಾಡೆ ಎನ್ನ ನಾಲಿಗೆ ಮೇಲೆ ॥ ಪಲ್ಲ ॥ ಘಿಲು ಘಿಲು ಘಿಲು ಗೆಜ್ಜೆಯ ನಾದ । ಚಲುವ

ಅಂದುಗೆ ರುಳಿಪೆಂಡ್ಯಾನಿಟ್ಟ ಪುಟ್ಟಪಾದ । ಸುಖದನುತ ಪಾದಾ ॥ ಸರಸಿಜೋದ್ಭವನ ವದನನಿಲಯಳೆ ಕರುಣದಿಂದ । ಪರಿಪಾಲಿಸು ತಾಯಿ ॥ ॥ ೧ ॥ ನಸುನಗೆ ಮುಖವು ನಾಸಾಭರಣ । ಯೆಸವ ಕಪೋಲ । ಹೊಸ ಮುತ್ತಿನ ಚಳತುಂಬಿಟ್ಟ ಶ್ರವಣ । ತಿಲಕದಹಸನಾ ॥ ಶಶಿಸೂರ್ಯರ ಆಭರಣ ಶೋಭಿತಳೆ । ಕುಸುಮ ಮುಡಿದ ಮೂರ್ಧಜವುಳ್ಳವಳೆ ॥ ೨ ॥ ಶೃಂಗಾರವಾದ ಜಡೆ ಭಂಗಾರ ರಾಕಟೆಚೌರಿ । ಪೊಂಗ್ಯಾದಿಗೆ ಗೊಂಡೆ ಮುತ್ತಿನ ಹಾರಾ । ರಂಗುಮನೋಹರ ॥ ಮಂದಗಮನೆ ಅರವಿಂದನಯನೆ ಶ್ರೀ । ರಂಗವಿಠಲನ ತೋರಿ ಶುಭಾಂಗೆ ॥ ೩ ॥

೪೮. ರಾಗ ಶಂಕರಾಭರಣ, ಅಟತಾಳ.

ಎಲ್ಯಾಡಿ ಬಂದ್ಯೋ ಮುದ್ದು ರಂಗಯ್ಯ । ನೀನೆಲ್ಯಾಡಿ ಬಂದ್ಯೋ ಕೃಷ್ಣಯ್ಯ ॥ ಪಲ್ಲ ॥ ಎಲ್ಯಾಡಿ ಬಂದ್ಯೋ ಎನ್ನ ಕಣ್ಣಮುಂದಾಡದೆ ॥ ॥ ಅನುಪಲ್ಲ ॥ ಆಲಯದೊಳಗೆ ನೀನಾಡದೆ । ಬೆಣ್ಣೆ । ಪಾಲು ಸಕ್ಕರೆಯ ನೀ ಮೆಲ್ಲದೆ । ಚಿಕ್ಕ । ಬಾಲರೊಡಗೂಡಿ ಆಡದೆ । ಬಾಲಯ್ಯ ನೀನೆನ್ನ ಕಣ್ಣ ಮುಂದಾಡದೆ ॥ ೧ ॥ ಪದಕ ರತ್ನವ ನೀನೊಲ್ಲದೆ । ದಿವ್ಯ । ಮಧುರ ಭಾಷಣವ ನೀನಾಡದೆ ॥ ಸುದತಿಯರೊಡಗೂಡ್ಯಾಡದೆ । ಮುದ್ದು । ಚದುರಕೃಷ್ಣಯ್ಯ ಯೆನ್ನ ಕಣ್ಣಮುಂದಾಡದೆ ॥ ೨ ॥ ಅಷ್ಟದಿಕ್ಕಿನಲ್ಲಿ ಆರಸಿಕಾಣದೆ । ಬಲು । ದೃಷ್ಟಿಗೆಟ್ಟೆತೊ ನಿನ್ನ ನೋಡದೆ ॥ ನಾನೆಷ್ಟು ಹೇಳಲು ಕೇಳಬಾರದೆ । ರಂಗ । ವಿಟ್ಠಲ ನೀನೆನ್ನ ಕಣ್ಣಮುಂದಾಡದೆ ॥ ೩ ॥ ಶ್ರೀಃ ॥

೪೯. ರಾಗ ಕಲ್ಯಾಣಿ, ಅಟತಾಳ.

ಸುದ್ದು ಮಾಡಲು ಬ್ಯಾಡವೊ । ನಿನ್ನ ಕಾಲಿಗೆ । ಬಿದ್ದು ನಾ ಬೇಡಿಕೊಂಬೆ ॥ ॥ ಪಲ್ಲ ॥ ನಿದ್ದೆ ಗೈವರೆಲ್ಲ ನೀ ಬಂದುದ ಕಂಡು । ಪದ್ದಿಯೆಂಬರು ಕಾಣೋ ॥ ಅನುಪಲ್ಲ ॥ ಬಳೆ ಘಲುಕೆನುತಲಿದೆ । ಎನ್ನ ಕೈಯ । ಸುಮ್ಮನೆ ಪಿಡಿವರೇನೋ ॥ ಮೊಲೆಗಳ ಪಿಡಿದು ನೀನೆಳೆಯುವಾಗ

ಕೊರ । ಳೊಳಗಿನ ಹಾರ ತೋರುತಲಿದೆ ॥ ೧ ॥ ನೆರಿಕ್ಕೆಯು ತುಡುಕದಿರೊ । ಕಾಂಚಿದಾಮ । ಉಡಿಘಂಟೆ ಧ್ವನಿಸಿದೊಯ್ಯಾರ್ವ್ರೋ ॥ ತೊರದ ಚೆಂದುಟಿಗಳು ಸವಿದು ಚಪ್ಪರಿಸದೆ । ತರವಲ್ಲ ಗಂಡ ಎಚ್ಚತ್ತು ತಾಮುನವ್ರೊಲ್ಲ ॥ ೨ ॥ ನಾಡು ಮಾತುಗಳ್ಯಾತಕೋ । ಸಂಗೀತ । ಪಾಡುವ ಸಮಯವೇನೋ ॥ ಗಾಡಿಗಾರ ಶ್ರೀರಂಗವಿಠಲನ । ಪಾಡಿಪಂಘಗಳೊಡಗೂಡುವ ಸಮಯದಿ ॥ ೩ ॥ ಶ್ರೀಃ ॥

೫೦. ರಾಗ ಕಾಂಬೋಧಿ, ಏಕತಾಳ.

ಏನಾಯಿತು ಈ ರಂಗಗೆ ನೋಡಿರಮ್ಮ ॥ ಪಲ್ಲ ॥ ನಿ । ಧಾನಿಸಿ ನಮಗಿನ್ನು ಹೇಳಿರಮ್ಮ ॥ ಅನುಪಲ್ಲ ॥ ಪುಟ್ಟಿದಾರಭ್ಯ ಕಣ್ಣಮುಚ್ಚನಮ್ಮ । ಒಂ । ದಿಷ್ಟೇನಾದರು ಮೊಲೆಯನುಣ್ಣನಮ್ಮ ॥ ಚಿಟ್ಟಿಕ್ಕಿ ಮೊಗವ ತಾನು ಯೆತ್ತನಮ್ಮ । ಇನ್ನು ನಾ । ನೆಷ್ಟು ಹೇಳಲಿ ಬಾಯ ಮುಚ್ಚನಮ್ಮ ॥ ೧ ॥ ಕಾಯ ಕಿರಿದಾಗಿ ಮೈ ಹೆಚ್ಚಿತಮ್ಮ । ಹೆತ್ತ । ತಾಯ ಕರುಣವಿಲ್ಲದಾಯಿತಮ್ಮ ॥ ನೋಯ ನೋಟದಿಂದ ಆಚ್ಛಿಯಾಗಿತಮ್ಮ । ಆವನ । ಬಾಯೊಳಗೆ ವಿಶ್ವರೂಪ ತೋರಿತಮ್ಮ ॥ ೨ ॥ ಹೆಚ್ಚುಮಾತುಗಳ ತಾನಾಡನಮ್ಮ । ರಂಗ । ಸತ್ಯವಾಗಿ ಕುದುರೆ ತಾನೇರಿದನಮ್ಮ ॥ ನಿತ್ಯ ನಿರ್ದೋಷಿ ಗೋಪಿನಾಥನಮ್ಮ । ತನ್ನ । ಭಕ್ತರ ಸಲಹುವ ರಂಗವಿಟ್ಠಲನಮ್ಮ ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

ಶ್ರೀಪಾದರಾಯರ ಕೀರ್ತನೆಗಳು ಸಂಪೂರ್ಣ.

। ಶ್ರೀಕೃಷ್ಣಾರ್ಪಣಮಸ್ತು ।

ಶ್ರೀಃ

॥ ಶ್ರೀಗೋಪಾಲಕೃಷ್ಣಾಯ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಶ್ರೀವ್ಯಾಸರಾಯರ ಕೀರ್ತನೆಗಳು.

೧. ರಾಗ ಕಲ್ಯಾಣಿ, ಅಟತಾಳ.

ಸಿಕ್ಕಿದನೆಲೆ ಜಾಣೆ । ಶ್ರೀವೇಣುಗೋಪಾಲ ಭಕ್ತವತ್ಸಲ ದೇವನೂ ॥ ॥ ಪಲ್ಲ ॥ ಮಕ್ಕಳ ಚೆಂಡಿಕೆ ಮರದ ಕೊನೆಗೆ ಕಟ್ಟಿ । ಘಕ್ಕನೆ ಕೈ ಚಪ್ಪಾಳಿಕ್ಕಿ ಕೂಗುವ ರಂಗ ॥ ಅನುಪಲ್ಲ ॥ ಹೆಣ್ಣುಮಕ್ಕಳು ಬಚ್ಚಲೊಳಗೆ ಯೆಣ್ಣೆ ಹಚ್ಚೇವೆಂದು । ಬಣ್ಣವಸ್ತ್ರವ ಬಿಟ್ಟು ಬರಿಯ ಮೈಯೊಳಗಿರೆ ॥ ಬೆನ್ನಿಗೆ ಬಿಸಿನೀರು ಚೆಲ್ಲಿ ಸೀರೆಯ ಒಯ್ದು । ಉನ್ನತ ವೃಕ್ಷವನೇರದ ಜಾಣಾ ॥ ೧ ॥ ಪಟ್ಟೆಮಂಚದ ಮೇಲೆ । ಪತಿಯಂತೆ ಮಲಗಿರೆ । ಎಷ್ಟು ಸ್ವತಂತ್ರವೆಂದು ಪೇಳಿದರೆನ್ನ ॥ ಉಟ್ಟ ಶೀರೆಯ ಬಿಟ್ಟು ಬಟ್ಟ ಕುಚಕೆ ಕೈಯ । ಯಿಷ್ಟು ಮಾಡಿದ ಬಗೆ ಯೆಷ್ಟೆಂಬೆನೆಲೆ ಗೋಪಿ ॥ ॥ ೨ ॥ ಸಡಗರದಲಿ ಸೋಳಾಸಾಸಿರ ಗೋಪೀರಾ । ಒಡಗೂಡಿ ಕೊಳಲನೂದುತ ಮೊಸರನ್ನ ॥ ಕಡವ ಗೊಲ್ಲತಿಯರ ಕೈಪಿಡಿದಾಡುವ । ಒಡೆಯನೆ ಇವ ನಮ್ಮ ಉಡುಪಿಯ ಶಿರಿಕೃಷ್ಣ ॥ ೩ ॥ ಶ್ರೀಃ ॥

೨. ರಾಗ ಮೋಹನ, ಆದಿತಾಳ.

ಕೊಳಲನೂದುವ ಚದುರನಾರಿ । ನೋಡಮ್ಮಾ ॥ ಪಲ್ಲ ॥ ತಳಿರಂತೆ ತಾಂ ಪೊಳೆವ ಮಧುಕರ ಪಿಡಿದು ॥ ಅನುಪಲ್ಲ ॥ ನಾದದಿಂದ ತುಂಬಿತು

ಗೋವರ್ಧನ ಪರ್ವತವು । ಯಾದವಕುಲ ಘನವ ಸರಿಸಿದವು ಖಗಕು ಲವು ॥ ಶೋಧಿಸಿ ನೋಡಲು ಕೃಷ್ಣನ ಈಗಲೆ । ಸಾಧ್ಯವೇನೆ ವೃಂದಾ ವನದೊಳಗೆ ॥ ೧ ॥ ಮೇವ ಮೇಯುತ ಮರೆತವು ಗೋವುಗಳೆಲ್ಲ । ಸಾವ ಧಾನದಿಂಧರಿದಳು ಯಮುನಾದೇವಿ ॥ ಆವು ಕಾಯುತ ಗೋವ್ಗಳ ಮರೆ ತರು ಯಾ । ದವರಲ್ಲವೆ ವೃಂದಾವನದೊಳು ॥ ೨ ॥ ಸುರರು ಕೇಳಿ ಸುಮುಸುರಿದರಾಕಾಶದಲಿ । ಹರಿದು ಹೋಗಿ ನೋಡೆಲೆ ವೃಂದಾವನ ದಲ್ಲಿ ॥ ಸಾರಿಸಾರಿಗೆ ಕೃಷ್ಣನು ಈಗಲೆ । ತುರುಗಳ ಕಾಯುವ ಕದಂಬ ವನದೊಳು ॥ ೩ ॥ ಶ್ರೀಃ ॥

೩. ರಾಗ ಮುಖಾರಿ, ಆದಿತಾಳ.

ನರನಾದ ಮೇಲೆ ಹರಿನಾಮ ಜಿಹ್ವೆಯೊಳಿರಬೇಕು ॥ ಪಲ್ಲ ॥ ಭೂತ ದಯಾಪರನಾಗಿರಬೇಕು । ಪಾತಕವೆಲ್ಲವ ಕಳೆಯಬೇಕು ॥ ಮಾತು ಮಾತಿಗೆ ಹರಿಯೆನಬೇಕು ॥ ೧ ॥ ಶಾಂತಿಶಮ ದಮ ಹಿಡಿಯಲು ಬೇಕು । ಭ್ರಾಂತಿ ಅವಗುಣ ಕಳೆಯಲು ಬೇಕು । ಸಂತತ ಸನ್ಮಾರ್ಗ ದಲ್ಲಿ ಇರಲು ಬೇಕು ॥ ೨ ॥ ಕಾಮ ಕ್ರೋಧವ ತಾ ಬಿಡಬೇಕು । ಮಮತೆ ಅಹಂಕಾರವ ನೀಗಲು ಬೇಕು । ಸೌಮ್ಯರ ಸಂಗದೊಳಿರಬೇಕು ॥ ೩ ॥ ವೇದಶಾಸ್ತ್ರವನೋದಲು ಬೇಕು । ಬೋಧತತ್ವವ ತಿಳಿಯಲು ಬೇಕು । ಮಾಧವನ ಸ್ಮರಣೆಯ ಮಾಡಲು ಬೇಕು ॥ ೪ ॥ ತಂದೆ ಕೃಷ್ಣನ ದಯ ಪಡೆಯ ಬೇಕು । ಬಂದದುಂಡು ಸುಖಪಡಬೇಕು । ಚಂದಾಗಿ ಜಗ ದೊಳಿರ ಬೇಕು ॥ ೫ ॥ ಶ್ರೀಃ ॥

೪. ರಾಗ ಭೈರವಿ, ಅಟತಾಳ.

ತಡವ್ಯಾಕೆ ಶ್ರೀರಾಮನಾಮ ನುಡಿನುಡಿ ॥ ಪಲ್ಲ ॥ ಅನ್ಯ ದೇವತೆಗಳ ಇನ್ನು ಭಜಿಸದಿರು । ಚನ್ನಾಗಿ ಹರಿಪದ ಪಿಡಿಪಿಡಿ ॥ ೧ ॥ ಮತ್ಸರ ಮುರಿದು ಸುನಿಶ್ಚಲ ಭಕುತಿಯಲಿ । ಅಚ್ಯುತ ಪದ ಪಿಡಿಪಿಡಿ ॥ ೨ ॥ ಕಷ್ಟವ ಕಳೆದು ಮನೋಭೀಷ್ಟವ ಸಲಿಪನು । ಶ್ರೀಕೃಷ್ಣನ ಪಾದವ ಪಿಡಿಪಿಡಿ ॥ ೩ ॥ ಶ್ರೀಃ ॥

೫. ರಾಗ ನಾಟಿ, ಅಟತಾಳ.

ಶರಣು ಶರಣು ॥ ಪಲ್ಲ ॥ ಶರಣು ಮತ್ಸ್ಯಕೂರ್ಮವರಾಹ । ನರಹರಿ ವಾಮನ ಭಾರ್ಗವಾ । ಶರಣು ರಾಘವ ಕೃಷ್ಣ ಬೌದ್ಧ । ಶರಣು ಕಲ್ಕಿ ರೂಪಗೆ ॥ ೧ ॥ ಬಿಡೆ ನಾ ನಿನ್ನ ಕೇಶವ । ನಾರಾಯಣ ಮಾಧವಾ । ಅಂಬುಜಾಕ್ಷ ಗೋವಿಂದ ವಿಷ್ಣು । ಸಂಭ್ರಮದಿ ಮಧುಸೂದನ ॥ ೨ ॥ ಕರುಣದಲಿ ರಕ್ಷಿಸು ತ್ರಿವಿಕ್ರಮ । ಕಲಿತವಾಮನ ಶ್ರೀಧರ । ಪರಮ ಪಾವನ ಹೃಷೀಕೇಶ । ಪದ್ಮನಾಭ ದಾಮೋದರಾ ॥ ೩ ॥ ವಾಸವಾರ್ಚಿತ ಸಂಕರ್ಷಣ । ವಾಸುದೇವ ಪ್ರದ್ಯುಮ್ನನೆ ॥ ಶ್ರೀಶ ಅನಿರುದ್ಧ ಪುರುಷೋತ್ತಮ । ನೀ ಸಲಹುವದಧೋಕ್ಷಜಾ ॥ ೪ ॥ ಕೃತಿಗೆ ಗೋಚರ ನಾರಸಿಂಹನೇ । ಅಚ್ಯುತ ಜನಾರ್ದನ ಉಪೇಂದ್ರನೇ ॥ ಚತುರ್ವಿಂಶತಿ ನಾಮದಲ್ಲಿ । ಚತುರಹರಿ ಶ್ರೀಕೃಷ್ಣನೇ ॥ ೫ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೬. ರಾಗ ಕಾಂಬೋಧಿ, ಅಟತಾಳ.

ತೋರಿರೈ ನೀವೆಲ್ಲರು ತೋರಿರೈ ॥ ಪಲ್ಲ ॥ ನಾರಾಯಣನಲ್ಲದ ಅನ್ಯತ್ರ ದೈವವಾ ॥ ಅನುಪಲ್ಲ ॥ ಮಾರಿ ಮಸಣಿ ಬೊಮ್ಮ ಯಾಗಾ । ವರಾಪಿಲ್ಲದೆ ಗತಿ ಇಲ್ಲವು ॥ ಮೂರುಲೋಕದೊಡೆಯ ಎಂದೆನಿಸುವ ಮು । ರಾರಿಯಲ್ಲದೆ ಅನ್ಯತ್ರ ದೈವವಾ ॥ ೧ ॥ ಸುಡುಗಾಡದಾ ಸುಖದ ಕಟ್ಟೆಯ ಕಾವ । ಒಡಲ ಹೊರೆವ ದೈವಗಳಲ್ಲವೆ ॥ ಮೃಡನೊಡೆಯ ಶ್ರೀರಾಮನೆಂದೆನಿಸುವ ಪಾಲ್ । ಗೊಡೆಯನಲ್ಲದೆ ಅನ್ಯತ್ರ ದೈವವಾ ॥ ॥ ೨ ॥ ಮೃತ್ಯು ಮಾಯಾ ಸುದೇವತೆಗಳು ಯೆಲ್ಲ । ಶ್ರೀಕೃಷ್ಣನ ಭೃತ್ಯ, ಕೆಲಸವ ಮಾಡುವವು ॥ ಸತ್ಯಸದಾನಂದ ಸದಮಲಾತ್ಮಕ ಪರ । ತತ್ವ ಪುರದ ರಾಯ ॥ ೩ ॥ ಶ್ರೀಃ ॥

೭. ರಾಗ ಶಂಕರಾಭರಣ, ಅಟತಾಳ.

ಓಲಗ ಸುಲಭವೊ । ರಂಗಯ್ಯನ । ಓಲಗ ಸುಲಭವೊ ॥ ಪಲ್ಲ ॥ ಓಲಗ ಸುಲಭವೊ ಹುಸಿಯಲ್ಲ ಕರು । ಣಾಲವಾಲನಾದ ಕರಿರಾಜವರದನ ॥ ॥ ಅನುಪಲ್ಲ ॥ ಸಂತೆಗೆ ಮಾಡಿದ ಸಾಷ್ಟಾಂಗ ನಮಸ್ಕಾರ । ದಂತೆ ನಿಷ್ಫಲವನ್ಯಭಜಿಸಲೇಕೆ ॥ ಅಂತರಂಗದಲೊಮ್ಮೆ ಹರಿನೀನೇ ಗತಿ ಯೆಂದು । ಚಿಂತಿಸಿದರ ಕಾಯ್ವ ಶ್ರೀರಾಮಚಂದ್ರನ ॥ ೧ ॥ ದೂರಹೋಗಲು ಬೇಡ ತೊಡೆಯ ಗುದ್ದಲು ಬೇಡ । ನೀರ. ಹೊರಲು ಬೇಡ ನಿಗಡದಿ ಬೀಳಬೇಡ ॥ ನಾರಾಯಣನೆಂಬೊ ನರರ ಯೋಗಕ್ಷೇಮ । ಭಾರ ತನ್ನದು ಯೆಂಬೊ ಪ್ರಹ್ಲಾದವರದನ ॥ ೨ ॥ ತಪ್ಪ ಸಾವಿರಗಳ ತಾಳಿ ರಕ್ಷಿಸುವನು । ಕಪ್ಪುಮೇಘದ ಕಾಂತಿಯೆಂದೆನಿಸುವನ ॥ ಸರ್ಪಶಯನನಾದ ಸರ್ವಲೋಕೇಶನ । ಅಪ್ರಮೇಯ ನಮ್ಮಪ್ಪ ಶ್ರೀಕೃಷ್ಣನ ॥ ೩ ॥ ಶ್ರೀಃ ॥

೮. ರಾಗ ಸಾವೇರಿ, ತ್ರಿಪುಟತಾಳ.

ನಿನಗೆ ನೀನೆ ಕೃಷ್ಣಾ ದಯಮಾಡಿ ಸಲಹೊ ॥ ಪಲ್ಲ ॥ ಯೆನಗೊಂದು ಸಾಧನ ಲೇಸ ಕಾಣಬಾರದು ॥ ಅನುಪಲ್ಲ ॥ ಸ್ನಾನವ ಮಾಡಿ ನಿನ್ನ ಸಂಪದಿಪೆನೆಂದರೆ । ಸ್ನಾನಮಾಡದೆ ಕಪ್ಪೆ ಸರ್ವಕಾಲದಲಿ ॥ ಧ್ಯಾನ ಮಾಡಿ ನಿನ್ನ ಸಂಪದಿಪೆನೆಂದರೆ । ಧ್ಯಾನಮಾಡದೆ ಬಕ ಸರ್ವಕಾಲದಲಿ ॥ ೧ ॥ ಜಪವ ಮಾಡಿ ನಿನ್ನ ಸಂಪದಿಪೆನೆಂದರೆ । ಜಪದಲ್ಲಿ ಮನಸು ಯೆನ್ನಾಧೀನವೆ ॥ ಉಪವಾಸವೆ ನಿನ್ನ ಸಾಧನವೆಂಬೆನೆ । ಉಪವಾಸವಾಗಿರದೆ ಉರಗ ಸರ್ವಕಾಲದಲಿ ॥ ೨ ॥ ಸನ್ಯಾಸವೇ ನಿನ್ನ ಸಾಧನವೆಂಬೆನೆ । ಸನ್ಯಾಸಿಯಿರನೆ ದುರುಳ ರಾವಣನು ॥ ಕನ್ಯಾದಾನವೆ ನಿನ್ನ ಸಾಧನವೆಂಬೆನೆ । ಕನ್ಯಾದಾನ ಮಾಡನೆ ಕಂಸ ಜರಾಸಂಧಗೆ ॥ ೩ ॥ ಜಾತಿಯು ನಿನ್ನ ಸಾಧನವೆಂಬೆನೇ । ದಿತಿ ಕಶ್ಯಪಸುತರು ದೈತ್ಯರಾದರು ॥ ಭೂತಿಯೆ ನಿನ್ನ ಸಾಧನವೆಂಬೆನೆ । ಭೂತಿ ಇರದೆ ದುರುಳ ದುರ್ಯೋಧನಗೆ ॥ ೪ ॥ ಬಂಧುತ್ವದಲಿ ನಿನ್ನ ಬಳಿಗೆ ಸೇರುವೆನೆನೆ ।

ಬಂಧುತ್ವವಿರದೇನೊ ಶಿಶುಪಾಲಗೆ ॥ ಮಂದಮತಿಯು ನಾನು ಮಧುಸೂದನನರಿಯೆ । ನೆಂದೆಂದಿಗು ಯೆನ್ನ ತಂದೆ ಕಾಯೊ ನೀನೆ ॥ ೫ ॥ ಗರುವದಿಂದಲಿ ನಾನು ಮಾಡಿದ ಅಪರಾಧ । ಧರಿಸದೆ ಸಲಹಯ್ಯ ಗೋಪಾಲನೆ ॥ ಶರಣಾಗತರನ್ನು ಪೊರೆವೆನೆಂಬೊ ಬಿರುದು । ಧರಿಸಿ ಮೆರೆವರಿನೊ ಪರಮಾತ್ಮ ಶ್ರೀಕೃಷ್ಣ ॥ ೬ ॥ ಶ್ರೀ ॥

(ಒಂದು ನುಡಿ ಕಡಿಮೆ ತೋರುತ್ತದೆ)

೯. ರಾಗ ಶಂಕರಾಭರಣ, ಆದಿತಾಳ.

ದಾರಿಯ ತೋರೊ ಗೋಪಾಲ ॥ ಪಲ್ಲ ॥ ವಾರಿಜನಾಭ ಶ್ರೀವೈಕುಂಠಲೋಲ ॥ ಅನುಪಲ್ಲ ॥ ಸಿಕ್ಕಿದೆ ಭವ ಕಡಲೊಳಗೆ । ಲೆಕ್ಕವಿಲ್ಲದೆ ಜಂತುಗಳಿಗೆ ॥ ದಿಕ್ಕೊಬ್ಬರು ಇಲ್ಲ ಯೆನಗೆ । ಕಕ್ಕಸವ ಕಾಯ್ದು ದಿವ್ಯ ಪಾದದೊಳಗೆ ॥ ೧ ॥ ಗಜ ರಕ್ಷಕ ನೀನೆಂದು । ಅಜರುದ್ರಾದಿಗಳೆಂದು ॥ ನಿಜವಾಗಿ ಪೊಗಳುವರೆಂದು । ಸುಜನರ ನೋಡಿ ಕೇಳದೆ ನಾನೆಂದು ॥ ೨ ॥ ವರದತುರಂಗವದನ ಬಾರೈ । ಕರದೆ ನಿನ್ನ ದಾರಿಯ ದೋರೈ ॥ ಪರಮ ಭಕ್ತರೊಳಗೆ ಇನ್ನಾರೈ । ಪರಮಪಾವನ ಕೃಷ್ಣ ನೀನಲ್ಲದೆ ಇನ್ನಾರೈ ॥ ೩ ॥

೧೦. ರಾಗ ಸಾವೇರಿ, ತ್ರಿಪುಟತಾಳ.

ನಿನಗಾರು ಸರಿಯಿಲ್ಲವೆನಗನ್ಯ ಗತಿಯಿಲ್ಲ ॥ ಪಲ್ಲ ॥ ನಿನಗೆ ಯೆನಗೆ ನ್ಯಾಯ ಪೇಳುವರಿಲ್ಲ ॥ ಅನುಪಲ್ಲ ॥ ಒಂದು ಗೂಡಿನೊಳು ಒಂದುಕ್ಷಣ ಅಗಲದೆ । ಯೆಂದೆಂದು ನಿನ್ನ ಪಾದ ಪೊಂದಿರಲಾಗಿ ॥ ಬಂದ ವಿಷಯಂಗಳಿಗೆ ಯೆನ್ನ ಒಪ್ಪಿಸಿಕೊಟ್ಟು । ಅಂಧಗಾರನಂತೆ ನೀ ನೋಡುವದು ಧರ್ಮವೆ ॥ ೧ ॥ ಪರಸತಿಯರ ಕಂಡು ಪರಮ ಪಾಪಿಯೆಂದು । ಪರಿಪರಿ ನರಕಗಳ ನೇಮಿಸುವರೆ ॥ ಪರಸತಿಯರ ಒಲಿಮೆ ನಿನಗೆ ಒಪ್ಪಿತು ಸ್ವಾಮಿ । ದೊರೆತನಕೆ ಅಂಜಿ ನಾ ಶರಣೆಂಬೆನಲ್ಲದೆ ॥ ೨ ॥ ನಿನ್ನಾಧೀನದವ ನಿನ್ನ ಪ್ರೇರಣೆಯಿಂದ । ಅನಂತ ವಿವಿಧ ಕರ್ಮವ ಮಾಡಿದೆ ॥

ಎನ್ನಪರಾಧಂಗಳು ಎಣಿಸದೆ ತಂದೆ ನೀ । ಮನ್ನಿಸೊ ಸತತ ಶ್ರೀಕೃಷ್ಣ ಮೂರುತಿಯೆನ್ನ ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೧೧. ರಾಗ ಕಾಂಬೋಧಿ, ಅಟತಾಳ.

ಎನ ಬಿಂಬ ಮೂರುತಿಯ ಪೂಜಿಪೆನು ನಾನು ॥ ಪಲ್ಲ ॥ ಮನಮುಟ್ಟಿ ಅನುದಿನ ಮರೆಯದೆ ಮರೆಯದೆ ॥ ಅನುಪಲ್ಲ ॥ ಗಾತ್ರವೇ ಮಂದಿರ ಹೃದಯವೇ ಮಂಟಪ । ನೇತ್ರವೇ ಮಹದೀಪ ಹಸ್ತ ಚಾಮರವು ॥ ಯಾತ್ರೆಯೇ ಪ್ರದಕ್ಷಿಣೆ ಶಯನವೇ ನಮಸ್ಕಾರ । ಸ್ತೋತ್ರವಾತುಗಳೆಲ್ಲ ಮಂತ್ರಗಳೂ ॥ ೧ ॥ ನುಡಿವ ಶಬ್ದಗಳೆಲ್ಲ ಪುಷ್ಪಗಳಾದವು । ನಡೆವುದೆಲ್ಲವು ಬಹುನಟನೆಗಳು ॥ ಉಡುವ ಹೊದ್ದಿಕೆಯೆಲ್ಲವು ಚಿತ್ರವಾದ ವಸ್ತ್ರ । ತೊಡುವ ಭೂಷಣಗಳು ಶ್ರೀಹರಿಗೆ ಆಭರಣ ॥ ೨ ॥ ಧರಿಸಿದ ಶ್ರೀಗಂಧ ಹೃದಯಕ್ಕೆ ಗಂಧವು । ಶಿರದೊಳೆ ಮುಡಿವ ಪುಷ್ಪವೆ ಮಾಲಿಕೆ ॥ ಸ್ಥಿರವಾಗಿ ನೇಹದಿ ಕೂಡಿದಾ ಬುದ್ಧಿಯು । ಸ್ಮರಿಸಿ ಉಂಡನ್ನವೆ ಹರಿನೈವೇದ್ಯವೂ ॥ ೩ ॥ ಎನ್ನ ಸ್ವರೂಪವೆಂಬ ರನ್ನದ ಕನ್ನಡಿ । ಎನ್ನ ಮನೋವೃತ್ತಿಯೆಂಬುದೆ ಕ್ಷೇತ್ರವು ॥ ನಾನು ನುಡಿವ ಹರಿನಾಮಾಮೃತವೇ ತೀರ್ಥ । ಎನ್ನ ಮಂದಿರ ಮಧ್ಯ ಮಹಸಿಂಹಾಸನಾ ॥ ೪ ॥ ಅನ್ಯಸಾಧನವೇಕೆ ಅನ್ಯಪ್ರತಿಮೆಯೇಕೆ । ಅನ್ಯವಾದ ಮಂತ್ರತಂತ್ರಗಳೇಕೆ ॥ ಎನ್ನಲ್ಲಿ ಭರಿತ ಸಾಧನಗಳು ಇರಲಾಗಿ । ಚೆನ್ನಾಗಿ ಶ್ರೀಕೃಷ್ಣಸ್ವಾಮಿಗೆ ಪೂಜಿಪೆ ॥ ೫ ॥ ಶ್ರೀಃ ॥

೧೨. ರಾಗ ಮೋಹನ, ಅಟತಾಳ.

ಜನುಮ ಜನುಮದಲ್ಲಿ ಕೊಡುಕಂಡ್ಯ ಹರಿಯೆ ॥ ಪಲ್ಲ ॥ ಅನಿಮಿತ್ತ ಬಂಧು । ಕೃಷ್ಣ ಯೆನಗೆ ನೀನು ॥ ಅನುಪಲ್ಲ ॥ ಮೆರೆವ ಊರ್ಧ್ವ ಪುಂಡ್ರ ಯೆರಡಾರು ನಾಮವು । ಕೊರಳಲ್ಲಿ ತುಳಸಿ ವನಮಾಲೆಯು ॥

ಹೊಳೆವ ಸುದರ್ಶನ ಎಡದಲ್ಲಿ ಶಂಖವು । ಮೆರವುತ ಹಿಗ್ಗುವ ವೈಷ್ಣವ ಜನ್ಮವ ॥ ೧ ॥ ತಾರತಮ್ಯ ಪಂಚಭೇದದಿಂದಲಿ । ತೋರುವ ಜಗತು ಸತ್ಯವೆಂದೂ ॥ ಮಾರಾರಿಮುಖ ಸುರರು ನಿನ್ನ ಚರಣವ । ಸೇರಿದವರು ನಿತ್ಯವೆಂಬೊ ಸನ್ಮತಿಯನು ॥ ೨ ॥ ಸಕಲ ಬುಧರೋತ್ತಮರಲ್ಲಿ ನಮ್ರತೆಯು । ಸುಖತೀರ್ಥರಲ್ಲಿ ಗುರುಭಕುತಿಯು ॥ ಸಕಲ ಸುರರೊಡೆಯ ಶ್ರೀಕೃಷ್ಣ ನಿನ್ನಲ್ಲಿ । ಅಕಳಂಕವಾದ ನವವಿಧ ಭಕುತಿಯು ॥ ೩ ॥

೧೩. ರಾಗ ಕಾಂಬೋಧಿ, ಅಟತಾಳ.

ಬಗೆಯದಿರು ಬಗೆಯದಿರು ಎಲೊ ಮಾನವಾ ॥ ಪಲ್ಲ ॥ ಧಿಗಿಧಿಗಿಧಿಗಿಯೆನುವೆ ನಿನಗೇಕೊ ಗರುವಾ ॥ ಅನುಪಲ್ಲ ॥ ವಿರತಿಯಲಿ ಕುಮಾರನೆ ವಿವೇಕದಲಿ ವಸಿಷ್ಠನೆ । ಶೂರತನದಲಿ ಶಾಂತನವನೇನೊ ನೀನು ॥ ಸ್ವರದಲ್ಲಿ ತುಂಬುರನೆ ನೃತ್ಯದಲಿ ನಾರದನೆ । ಪರಾಶರನೇ ನೀನು ಉಗ್ರ ತಪಸಿನಲ್ಲಿ ॥ ೧ ॥ ಚೆಲುವಿಕೆಯಲಿ ರಾಮನೆ ಕ್ಷಮೆಯಲ್ಲಿ ಹರಿಶ್ಚಂದ್ರನೆ । ಕುಲದಲ್ಲಿ ಋಷಿವಿಶ್ವಾಮಿತ್ರನೇನೊ ॥ ಬಲದಲ್ಲಿ ವಾಲಿಯೆ ಛಲದಲ್ಲಿ ಹಿರಣ್ಯಾಕನೆ । ಬಿಲುವಿದ್ಯೆಯಲಿ ವರಪರಶುರಾಮನೇನೋ ॥ ೨ ॥ ಭೋಗದಲಿ ಶತಮುಖನೆ ತ್ಯಾಗದಲಿ ಕರ್ಣನೆ । ಯೋಗದಲಿ ಶುಕಸನಕ ಜನಕನೇನೋ ॥ ಭಾಗ್ಯದಲಿ ದಶಶಿರನೆ ಭೋಗದಲಿ ಇಂದ್ರನೆ । ದೀರ್ಘದಲಿ ಮೇರುಮಂದರವೆ ನೀನೂ ॥ ೩ ॥ ಭಕ್ತಿಯಲಿ ಭರತನೋ ಭಾವದಲಿ ಲಕ್ಷ್ಮಣನೊ । ಯುಕ್ತಿಯಲಿ ನೀನೀಗ ಸೂತನೇನೊ ॥ ಶಕ್ತಿಯಲಿ ಕಾಲನೆ ಆಹಾರದಲಗಸ್ತ್ಯನೆ । ಮುಕ್ತಿಯಲಿ ಖಟ್ವಂಗರಾಯನೇನೊ ॥ ೪ ॥ ಶಾಪದಲಿ ಬ್ರಹ್ಮನೆ ತಾಪದಲಿ ಸೂರ್ಯನೇ । ಕೋಪದಲಿ ಮಹೇಶನೇನೊ ॥ ತಪದಲ್ಲಿ ಹನುಮನೆ ವ್ರತದಲ್ಲಿ ರುಕ್ಮಾಂಗದನೆ । ಕೃಪೆಯಲ್ಲಿ ಶ್ರೀಕೃಷ್ಣನೇನೊ ನೀನೂ ॥ ೫ ॥ ಶ್ರೀಃ ॥

೧೪. ರಾಗ ಮೋಹನ, ಆದಿತಾಳ.

ತೋರೇ ಬೇಗನೆ ತೋಯಜನಯನೆ ಮದವಾರಣಗಮನೆ ॥ ಪಲ್ಲ ॥ ಮಾರನ ತಾಪವ ಸೈರಿಸಲಾರೆನೆ । ನೀರೆ ನಿನಗೆ ಮುತ್ತಿನ ಹಾರ

ಕೊಡುವೆನೆ ॥ ಅನುಪಲ್ಲ ॥ ನೀರೊಳು ಮುಣುಮುಣುಗಾಡುತ ಬಂದು। ಮಥಿಸಿದ ದಯಾಸಿಂಧು ॥ ಧಾರುಣಿ ಚಿಮ್ಮಿ ಮೇಲಕೆ ತಂದು। ದನುಜನ ಕೊಂದು ॥ ಮೂರು ಪಾದವ ಬೇಡುತ ಬಂದ। ಮುನಿಕುಲ ದಯಾಸಿಂಧು ॥ ನಾರಿ ಬಿಡದೆ ಪರನಾರಿಯರಾಳುವ। ತೋರ ಮಣಿಯು ಹಯವೇರಿ ಮೆರೆದನಾ ॥ ೧ ॥ ಕತ್ತಲೆಯೊಡನೆ ಕಾದಿದ ಧೀರ ನೆಗಹಿದ ಪರಿವಾರ ॥ ಕಿತ್ತು ಮಣ್ಣಾಗಿದು ಮೆದ್ದನು ಬೇರ। ಕುಜನ ಕುಠಾರ ॥ ಒತ್ತಿದ್ದ ಬಲಿಯು ಕಾಯಿದನು ಶೂರದಾನವ ಸಂಹಾರ ॥ ಹತ್ತು ಶಿರವ ಕತ್ತರಿಸಿ ಗೋಕುಲದೊಳು। ಬತ್ತಲೆ ರಾಹುತನಾಗಿ ಮೆರೆದನಾ ॥ ೨ ॥ ನಿಗಮ ಕದ್ದವನ ನೀಗಿದ ದಿಟ್ಟ। ನೆಗಹಿದ ಘನಬೆಟ್ಟ ॥ ಮಿಗಿಲೊಮ್ಮೆ ಸ್ವಹಸ್ತತಳದಲಿಟ್ಟ। ಘುಡಿಘುಡಿಸುವ ಸಿಟ್ಟ ॥ ಜಗವೆಲ್ಲ ನೋಡಿ ಯೆರಡಡಿ ಇಟ್ಟ। ಕೊಡಲಿಯ ಪೆಟ್ಟ ॥ ಮೃಗವ ಕೆಡಹಿ ಕುಂತಿಮಗನ ಸಾರಥಿಯಾಗಿ। ಜಗವ ಮೋಹಿಪ ಹಯವದನ ಶ್ರೀಕೃಷ್ಣ ॥ ೩ ॥

೧೫. ರಾಗ ಕಲ್ಯಾಣಿ, ಆದಿತಾಳ.

ಮನ್ನಿಸೆನ್ನ ಮನ್ಮಥ ಜನಕ ಮಧುಸೂದನ। ಮಂದರೋದ್ಧರ ॥ ॥ ಪಲ್ಲ ॥ ನಿನ್ನ ನಂಬಿದೆ ನಿಶ್ಚಯದಿ ನಿರಂತರದಿ। ಇಹಪರದಲಿ ಕಾಯೋ ॥ ॥ ಅನುಪಲ್ಲ ॥ ಶ್ರೀರಂಗ ಖಗತುರಂಗ ಜಗದಂತರಂಗ। ವಿಧಿ ಕುರಂಗಧರನಮಿತ್ರ। ಸಾರಂಗ ಪರಿಪಾಲ ಸುಗುಣಜಾಲ ಲಕುಮಿಲೋಲಕೃ। ಪಾರಸತರಂಗಿತಾಪಾಂಗ। ದುರಿತ ಭಂಗಾ ಧೃತರಥಾಂಗ ಶುಭಾಂಗ ॥ ೧ ॥ ಕಾರುಣ್ಯನಿಧಿ ಹಿರಣ್ಯವತ್ಸಲ ಲೋಕ। ಶರಣ್ಯ ದೇವ ವರೇಣ್ಯ ಘನಶ್ಯಾಮಾ ॥ ಚರಣಕಮಲಕ್ಕೆ ಶರಣುಹೊಕ್ಕೆ ತಾಮಸವೇಕೆ ಸಲಹೊ ಶ್ರೀ। ವರೇಣ್ಯ ಯದುವೀರ ದುರಿತದೂರಾ ವೇದಸಾರ। ಗಂಭೀರಾ ॥ ೨ ॥ ಸನಂದನಾದಿ ಮುನೀಂದ್ರ ಪ್ರಿಯ ಸಚ್ಚಿ। ದಾನಂದ ನಂದಗೋಪತನಯ। ಏನೆಂದು ಪೇಳಲಯ್ಯ ನಿನ್ನ ಮಾಯಾ ॥ ಮರೆಯಲರಿಯ ಯುಧಿಷ್ಠಿರ। ಧನಂಜಯ ಸಹಾಯ ಕೃಷ್ಣರಾಯ ಸುಹೃದಗೇಯ ಸುಜೇಯ ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೧೬. ರಾಗ ನಾಟಿ, ಅಟತಾಳ.

ಎಂತು ಪೊಗಳುವೆ ನಿಮ್ಮ ಯತಿಕುಲಶಿರೋರನ್ನ ॥ ಪಲ್ಲ ॥ ಶಾಂತ ಮಧ್ವಾಚಾರ್ಯ ಶರಣು ಮುನಿವರ್ಯ ॥ ಅನುಪಲ್ಲ ॥ ಪ್ರಥಮಾವತಾರದಲಿ ಪ್ರಥಿತ ರಾಮನ ಭಜಿಸಿ । ಅತಿಸಂಭ್ರಮದಿಂದ ಶರಧಿಯನು ಪ್ಲವಿಸಿ ॥ ಪೃಥ್ವಿಜೆಗಂಕಿತವಿತ್ತು ಪುರದೊಟವನು ಕಿತ್ತು ಪ್ರತಿಯಾರೊ ನಿನಗೆ । ಅಪ್ರತಿಪರಾಕ್ರಮನೆ ॥ ೧ ॥ ದ್ವಿತೀಯಾವತಾರದಲಿ ದೇವಕಿಜನ ಕಂಡೆ । ಸತಿಗೆ ಕಾಮಿಸಿದವನ ಸಾಹಸದಿ ಸದೆದೆ ॥ ಮತಿಗೆಟ್ಟ ಮಾಗಧನ ಕಾಳಗದಿ ಭೇದಿಸಿದೆ । ಮಿತಿಯ ಕಾಣೆನೊ ನಿನಗೆ ಮೂಲೋಕದೊಳಗೆ ॥ ೨ ॥ ತೃತೀಯಾವತಾರದಲಿ ತ್ರಿಜಗವು ನುತಿಸುವ ತೆರವಿ । ಅತುಳ ತಪದಿಂದ ಪರಮ ಮಹಿಮನ ಭಜಿಸಿ ॥ ಕ್ಷಿತಿಗಧಿಕ ಉಡುಪಿಯಲಿ ಶ್ರೀಕೃಷ್ಣನ ನಿಲ್ಲಿಸಿ । ಪ್ರತಿಮತವ ಮುರಿದೆ ಪೂರ್ಣಪ್ರಜ್ಞತೆಯ ಮೆರೆದೆ ॥ ೩ ॥ ಶ್ರೀ ॥

೧೭. ರಾಗ ಪೂರ್ವಿ, ಆದಿತಾಳ.

ಮಹಿಮೆ ಸಾಲದೆ । ಇಷ್ಟು । ಮಹಿಮೆ ಸಾಲದೆ ॥ ಶ್ರೀಪಾದರಾಯರ ಮಹಿಮೆ ಸಾಲದೆ ॥ ಪಲ್ಲ ॥ ಅಹಿಶಯನನ ಒಲಿಮೆಯಿಂದ । ಮಹಿಯೊಳೊಮ್ಮೆ ಶ್ರೀಪಾದರಾಯರ ॥ ಅನುಪಲ್ಲ ॥ ಮುತ್ತಿನ ಕವಚ ಮೇಲ್ಕುರಾಯಿ । ರತ್ನ ಕೆತ್ತಿದ ಕರ್ಣಕುಂಡಲಾ ॥ ಕಸ್ತುರಿತಿಲಕ ಶ್ರೀಗಂಧ ಲೇಪನ । ವಿಸ್ತಾರದಿಂದ ಮೆರೆದು ಬರುವ ॥ ೧ ॥ ವಿಪ್ರಗೆ ಹತ್ಯದೋಷ ಬರಲು । ಕ್ಷಿಪ್ರಶಂಖೋದಕವ ತಳಿಯೆ ॥ ಅಪ್ರಬುದ್ಧರು ದೂಷಿಸೆ ಕೇರೆಣ್ಣೆ । ಕಪ್ಪುವಸನ ಶುಭ್ರಮಾಡಿದ ॥ ೨ ॥ ಹರಿಗೆ ಸಮರ್ಪಿಸಿದ ನಾನಾ । ಪರಿಯ ಶಾಕಗಳನ್ನು ಭುಂಜಿಸೆ ॥ ನರರು ನಗಲು ಶ್ರೀಕೃಷ್ಣನ । ಕರುಣದಿಂದ ಪಾಸಿಯ ತೆಗದ ॥ ೩ ॥ ಶ್ರೀ ॥

೧೮. ರಾಗ ನಾಟಿ, ಅಟತಾಳ.

ವಾದಿಗಜಮಸ್ತಕಾಂಕುಶ ಸುಜನ ಬುಧಗೇಯ । ಮೇದಿನೀಸುರವಂದ್ಯ ಶ್ರೀಪಾದರಾಯ ॥ ಪಲ್ಲ ॥ ಸಕಲಶಾಸ್ತ್ರ ಕಲಾಪ ಸನ್ಯಾಸಕುಲ

ದೀಪ । ಸಕಲ ಸತ್ಯಸ್ಥಾಪ ಸುಜ್ಞಾನಲೇಪ ॥ ಸಕಲ ಪಾವನ ರೂಪ ಅರಿಕುಲಜನವುತಲೇಪ । ಸಕಲವರ್ಜಿತ ಪಾಪ ಕೀರ್ತಿ ಪ್ರತಾಪ ॥ ೧ ॥ ಹರಿಪದಾಂಬುಜ ಭೃಂಗ ಪರಮತಾ ವಿಹಂಗ । ಪರಮ ಸುಗುಣಾಂತ ರಂಗ ಪರಹಿತೋತ್ತುಂಗ ॥ ಪರಮ ಸುಕೃತಾಸಂಗ ಶ್ರುತಿ ತಿಮಿರಪ ತಂಗ । ಶರಣು ಶುಭಚರಿತಾಂಗ ಷಟ್ಶಾಸ್ತ್ರಸಂಗ ॥ ೨ ॥ ಸಿರಿಕೃಷ್ಣ ದಿವ್ಯ ಪಾದಾಬ್ಜಾತುಲಲೋಲ । ವರ ಹೇಮವರ್ಣ ಮುನಿಪತಿಯ ಸುಕುಮಾರ ॥ ಗುರುತಿಲಕ ಶ್ರೀಪಾದರಾಯ ಅವಿತೋದ್ಧಾರ । ಕರುಣ ನಿಧಿ ಸುರಧೇನು ಭಕ್ತಮಂದಾರ ॥ ೩ ॥ ಶ್ರೀ ॥

೧೯. ರಾಗ ನಾಟಿ, ಅಟತಾಳ.

ಜಯ ಜಯ ಜಯರಾಯಾ ॥ ಪಲ್ಲ ॥ ದಯದಿಂದ ಪಾಲಿಸೊ ಮಹ ರಾಯ ॥ ಅನುಪಲ್ಲ ॥ ಪ್ರತಿ ಜನ್ಮದಿ ತ್ವಚ್ಚರಣದಲಿ ಸ । ದ್ರತಿಯನಿತ್ತು ಕಾಯೊ ಕರುಣದಲಿ ॥ ಅತಿ ಬಲದಿಂ ಹೃದ್ಗತ ತಮವಳಿದು । ನ್ನತಿ ಯನು ಕೊಡು ಸನ್ನುತ ಬರದಿ ॥ ೧ ॥ ಅಚ್ಯುತ ಪದಾಂಬುಜ ಭೃಂಗ ನಿ । ನ್ನರ್ಚನೆಯನು ಕೊಡು ಕಮಲಾಂಗ ಗುರು ॥ ತ್ವಚ್ಚರಿತೆಯ ತೋರೊ ಗುಣಸಾಂದ್ರಾ । ಪ್ರಚ್ಯುತದೂಷಣ ಸಚ್ಚಿತಭೂಷಣ ಮೆಚ್ಚಿಪೆ ನಿನ್ನನು ಮುನಿತುಂಗ ॥ ೨ ॥ ಬೃಂದಾರಕ ವೃಂದಾರಾಧ್ಯ ಅಘ । ಬೃಂದ ವಿಧುರ ಕುಜನಾಭೇದ್ಯ ಆ ॥ ನಂದತೀರ್ಥರ ಮತಜನಬೋಧ್ಯ । ಸುಂದರಕಾಂಡದಿಂದಿಹ ಕೃಷ್ಣನ ವಂದಿಪ ಸದ್ಗುರು ನಿರವದ್ಯ ॥ ೩ ॥

೨೦. ರಾಗ ತೋಡಿ, ಆದಿತಾಳ.

ಧೀರನ ನೋಡಿರೈ । ಕರುಣಾ । ಪಾರನ ನೋಡಿರೈ ॥ ಪಲ್ಲ ॥ ವಾರಿಜವದನ ಸವಿಾರಜ ಕಪಿನೃಪ ದ್ವಿಜನಾಭಾವಿಅಜನಾ ॥ ಅನುಪಲ್ಲ ॥ ಕಣಿಕಾಲಂ ದುಗೆ ಒಪ್ಪುವಸರ ಕಂಠಮಣಿಯಾ । ವಜ್ರದ ಕಣಿಯಾ । ಮಣಿಯದ ಬಹಳ ಕಠಿಣ ದಿತಿಜರನೆಲ್ಲ ಹಣಿಯು । ಬೇಕೆಂಬ ಧಣಿಯಾ । ಪ್ರಣು ತಿಸಿ ನಾರಾಯಣ ಪದ ಭಕ್ತಾಗ್ರಣಿಯು । ಚಿಂತಾಮಣಿಯು । ತೃಣಕೃತ

ಮರಪತಿ ಪೀಠೋಪಮಾಧವ ಫಣಿಯು । ಕಪಿಶಿರೋಮಣಿಯು ॥ ೧ ॥ ಮಂದ ಸ್ಮಿತಯುತ ಕುಂದಕುಡ್ಮಲ ಸಮರದನಾ । ಪೂರ್ಣಚಂದ್ರ ವದನಾ । ಇಂದುಧರಾದಿ ಸುರವೃಂದ ವಂದಿತ ಪದಯುಗನಾ । ಹಸ್ತದ ನಗನಾ ॥ ಬಂದೀಕೃತಮರ ಸುಂದರಿ ಸಮುದಯ ಸದನಾ । ಜಿತನಿಕಮದನಾ ॥ ಮಂದಮತಿ ಜರಾಸಂಧನಂಗವ ಸೀಳಿದನಾ । ಬಹು ಬಲ್ಲಿದನಾ ॥ ೨ ॥ ಮುದ್ದು ಮುಖವ ನೋಡಿ ತಿದ್ದಿಮಾಡಿದ ವೈಸಿರಿಯಾ ಇನ್ನೊಮ್ಮೆ ಧೊರಿಯಾ । ಒದ್ದಕ್ಷ ಕುವರನಾ ಗುದ್ದಿ ಬಿಸುಟ ಹೊಂತಕಾರಿಯಾ । ಭಾರತಿ ಧೊರಿಯಾ ॥ ಶುದ್ಧಾನಂದ ಸಮುದ್ರ ಶ್ರೀಕೃಷ್ಣಗೆ ಕಿರಿಯ । ಮಿಕ್ಕ ಜನಸ್ಥರಿಯ । ಅದ್ವೈತಶಾಸ್ತ್ರದ ಸದ್ದಡಗಿಸಿದ ಆರ್ಯ । ನಮ್ಮ ಮಧ್ವಾಚಾರ್ಯ ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೨೧. ರಾಗ ಮೋಹನ, ಅಟತಾಳ.

ಪತ್ರವ ಕಳುಹಿದಳಾ ರುಕ್ಮಿಣಿದೇವಿ । ಪತ್ರವ ಕಳುಹಿದಳು ॥ ಪಲ್ಲ ॥ ಪತ್ರವ ನೋಡಿ ಗೌರಿಯಾತ್ರಾ ಕಾಲದಿ ಕೃಷ್ಣ । ಗಾತ್ರಪವಿತ್ರ ಮಂಗಳ ಸೂತ್ರ ಕಟ್ಟೆಂದು ॥ ಅನುಪಲ್ಲ ॥ ನಮ್ಮಣ್ಣ ನಮ್ಮ ತಂದೆಯಾ ಮಾತು ಕೇಳದೆ । ನಿಮ್ಮ ದೂಷಿಸಿ ನೀಚಗೆ ॥ ನಮ್ಮನು ಇತ್ತು ಮೂರೇಳು ಕುಲಗಳನೂ । ಧುಮ್ಮನೆ ನರಕದೊಳ್ ಮುಣುಗಿಸುತ್ತಾನೆಂದು ॥ ೧ ॥ ಸುಣ್ಣಜಾಜಿಗಳಿಂದ ಗ್ರಾಮಗ್ರಾಮಗಳ ಪೂಸಿ । ರನ್ನದ ತೋರಣಗಳ ಕಟ್ಟಿ ॥ ಪುಣ್ಯಾವಾಚನೆ ಮಾಡಿಸಿ ವಿಪ್ರರಿಂದ । ಪೂರ್ಣಫಲ ಮಂಟಪ ಸ್ಥಾಪಾಯಿತೆಂದು ॥ ೨ ॥ ನೀ ಬಾರದಿದ್ದರೆ ಹಬ್ಬ ಸುರಾಯಿತು । ತಬ್ಬಿಬ್ಬಾಗೋದು ಕುಲಕೆಲ್ಲ ॥ ಅಬ್ಬರದಿಂದ ಗರುಡಗಮನ ಬಂದು । ತಬ್ಬಿಕೊಂಡೊಯ್ಯೊ ಶ್ರೀಕೃಷ್ಣ ಬೇಗಾ ॥ ೩ ॥ ಶ್ರೀಃ ॥

೨೨. ರಾಗ ಪೂರ್ವಿ, ಅಟತಾಳ.

ದೂರಕೆ ದೂರನೆಂದು ಹೊರಸಾರಲು ಬೇಡಿ ॥ ಪಲ್ಲ ॥ ಸಾರರ ಸಾರಿ ನಮ್ಮ ಕೃಷ್ಣನ ಸಾರಿರ್ಪೆಯ ॥ ಅನುಪಲ್ಲ ॥ ಅನಂತ ರೂಪದೊಳು ಒಂದು

ರೂಪವಾ । ಅನಂತ ಗುಣದೊಳು ಒಂದು ಗುಣವಾ ॥ ಅನಂತ ನಾಮ ದೊಳೊಂದೆ ನಾಮವ । ಮನಸಿಲಿ ನೆನವರೆ ಬೆನ್ನಹತ್ತಿ ಬಿಡನಯ್ಯ ॥ ॥ ೧ ॥ ಅನಂತ ಜೀವರೊಳಾವನಾದರು ಒಮ್ಮೆ । ಅನಂತ ಜನ್ಮದೊ ಳೊಂದೆ ಜನ್ಮವಾ ॥ ಅನಂತ ಕ್ಷಣದೊಳೊಂದೆ ಕ್ಷಣವಾ । ಕನಸಿಲಿ ನೆನ ದರೆ ಋಣಿಯಾಗಿಪ್ಪನಯ್ಯ ॥ ೨ ॥ ಒಂದೆ ಹೂವು ವೊಂದೆಫಲ ವೊಂದೆ ಬಿಂದುಜಲ । ಒಂದೆ ತುಳಸಿದಳ ವೊಂದೆ ಪದಾನೆ ॥ ಒಂದೆ ಪ್ರದಕ್ಷಿಣೆ ಅವಗರ್ಪಿಸಿದರೆ । ಎಂದೆಂದು ಕುಂದದ ಆನಂದ ನೀವನಯ್ಯ ॥ ೩ ॥ ಹರಿಚಿಹ್ನಾಂಕಿತ ಹರಿದಿನ ಉಪವಾಸ । ಹರಿಯೂರ್ಧ್ವಪುಂಡ್ರ ತುಳಸಿ ಮಾಲಿಕೆ ॥ ಹರಿಉತ್ಸವ ಸೇವೆ ಹರಿದಾಸರ ಸಂಗ । ದುರಿತ ಅಬ್ಧಿಗೆ ಕುಂಭಸಂಭವನಲ್ಲವೆ ಕೃಷ್ಣ ॥ ೪ ॥ ಹರಿಪಾದ ತೀರ್ಥ ಹರಿನೈವೇದ್ಯ । ಹರಿಆರತಿ ಧೂಪ ಶ್ರೀಪ್ಸಾಂಗಾರ ॥ ಹರಿನಿರ್ಮಾಲ್ಯ ಪ್ರತ್ಯೇಕ ಶಂಖೋ ದಕ । ದುರಿತರಾಶಿಗಳ ಸೋಲಿಸಿ ಸುಡುವದಯ್ಯಾ ॥ ೫ ॥ ಒಮ್ಮನೆ ನಡೆ ದಡೆ ಒಮ್ಮನೆ ಕರೆದಡೆ । ವೊಮ್ಮೆ ಪಾಡಿದಡೆ ವೊಮ್ಮೆ ಪೊಗಳಿದಡೆ । ಒಮ್ಮೆ ನೋಡಿದಡೆ ಒಮ್ಮೆ ನೆನಸಿದಡೆ । ಎಂದೆಂದು ಕುಂದದ ಆನಂದ ನೀವನಯ್ಯ ॥ ೬ ॥ ತನ್ನಲಿಪ್ಪನಾಗಿ ದೂರನೆಂತೆನಬೇಡ । ಹೊನ್ನು ಹಣವು ಬೇಡ ಶ್ರೀಲಕ್ಷ್ಮೀಪತಿಗೆ ॥ ಅನ್ಯವೇತಕೆ ಪೂರ್ಣಾನಂದಗೆ । ನಿನ್ನವನೆಂದರೆ ತನ್ನನೀವ ಕೃಷ್ಣ ॥ ೭ ॥ ಶ್ರೀ ॥

೨೩. ರಾಗ ಸಾವೇರಿ, ಅಟತಾಳ.

ಹರಿದಾಸರ ಸಂಗಕೆ ಸರಿಯುಂಟೆ ॥ ಪಲ್ಲ ॥ ನಿಮ್ಮ । ಗುರು ಕರುಣಕೆ ಇನ್ನು ಸಾಟಿಯುಂಟೆ ॥ ಯೆಲೊ ದೇವಾ ॥ ಅನುಪಲ್ಲ ॥ ದಾವನಲತಪಿಸೆ ಕಾಡಾನೆಯು । ದೇವ ಗಂಗೆಯ ತಂದು ಹೊಗಿಸುವದುಂಟೆ ॥ ಆವಾಗ ಸುಡುವ ಷಡ್ವರ್ಗ ರಾಶಿಗಳನು । ಶ್ರೀವರ ಕರುಣಾಮೃತದಿಂದ ಕೊಯಿ ಸುವಾ ॥ ೧ ॥ ಬಂದಾ ಬೇಸಿಗೆಯಲ್ಲಿ ನೊಂದ ಚಕೋರನ್ನ । ಚಂದ್ರ ಬಿಂಬಕೆ ತಂದು ಹೊಗಿಸುವದುಂಟೆ ॥ ಬಂಧುರ ಮಮತೆಯ ಬಿಡಿಸೆನ್ನ ಮನದಾ । ನಂದಾಬ್ಧಿಯೊಳಗೋಲಾಡುತಲಿಪ್ಪ ॥ ೨ ॥ ಕುರುಡಗೆ

ದಿವ್ಯ ಅಂಜನ ಹಚ್ಚಿ ಕಣ್ಣಿತ್ತು । ತರತರ ಉಂಬಾ ನಿಧಿಯನೀವಂತ ॥ ಪರಮ ಮೂರ್ಖನಾದ ಎನಗೆ ಜ್ಞಾನವನಿತ್ತು । ನರಹರಿಯ ಸನ್ನಿಧಿಯ ಲ್ಲಿರುವ ದಾರಿಯ ತೋರೊ ॥ ೩ ॥ ಬಲಿದ ಹರಿಯ ಎಳೆಹುಲಿಯ ಮರಿಯ ತಾ । ನಲವಿನಿಂದಲಿ ತಾಯಿ ನಲಿಸುವಂತೆ ॥ ಬಾಲ ಇಂದ್ರಿಗಳೆಂಬ ಶೆರೆಯ ಬಿಡಿಸಿ ಸಿರಿ । ಹರಿಯ ಸನ್ನಿಧಿಗೆ ದಾರಿಯ ತೋರುವರಾ ॥ ೪ ॥ ದಡೆಯ ಕಾಣದೆ ಮಹನದಿಯೊಳು ಹೋಹನ । ಪಿಡಿದೆತ್ತಿ ತಡಿಯ ಸೇರಿಸುವದುಂಟೆ ॥ ಬಿಡದೆ ಭವಾಬ್ಧಿಯೊಳು ಮುಣುಗಿ ತೆರನಾ । ತಡೆಯದೆ ಕೃಷ್ಣನ್ನ ಮೇಲಡಿಯ ಸೇರಿಸುವರಾ ॥ ೫ ॥

೨೪. ರಾಗ ಕೇದಾರಗೌಳ, ಅಟತಾಳ.

ಆವಾವ ಬಗೆಯಲ್ಲಿ ರಕ್ಷಿಪೆಯಾ ॥ ಪಲ್ಲ ॥ ದೇವಾದಿದೇವ ಶ್ರೀಕೃಷ್ಣ ಸ್ವಾಮಿಯನ ॥ ಪಲ್ಲ ॥ ಹಿಂದಿನ ಕಾಲವು ವ್ಯರ್ಥವಾಗಿ ಕಳೆದೆನೊ । ಮುಂದಿನ ಗತಿ ಚಿಂತೆ ಲೇಶವಿಲ್ಲ ॥ ಕುಂದಿತು ದೇಹದ ಬಲವೆಲ್ಲ । ಸಿರಿ ಕೃಷ್ಣ । ಮಂದವಾಯಿತು ಇಂದ್ರಿಯ ಗತಿಗಳೆಲ್ಲ ॥ ೧ ॥ ಆಶೆಯೆಂಬುವದು ಬ್ರಹ್ಮಾಂಡ ಮುಟ್ಟುತಲಿದೆ । ಕಾಸು ಹೋದಡೆ ಕ್ಲೇಶವಾಗುತಿದೆ ॥ ಮೋಸಮಾಡಿ ಮೃತ್ಯು ಬಾಹೋದು ನಾನರಿಯೆ । ವಾಸುದೇವ ರಂಗ ದಯದಿಂದ ಪಾಲಿಸೊ ॥ ೨ ॥ ಜನರು ದೇಹವ ಬಿಟ್ಟು ಹೋಹದ ನಾ ಕಂಡು । ಎನದೇಹ ಸ್ಥಿರವೆಂಬೊದೆ ತಿಳಿದು ॥ ದಾನ ಧರ್ಮ ಬಿಟ್ಟು ಹರಿಯ ಧ್ಯಾನವ ಮರೆದು । ಹೀನ ವಿಷಯಂಗಳಿಗೆ ಎರಗುವೆ ಸಿರಿ ಕೃಷ್ಣ ॥ ೩ ॥ ಶ್ರೀಃ ॥

೨೫. ರಾಗ ರೇಗುಪ್ತಿ, ಆದಿತಾಳ.

ನಿನ್ನಾಜ್ಞಾದವನು ನಾ ಎನ್ನನೊಪ್ಪಿಸದೆ । ಬಿನ್ನಹ ಚಿತ್ತೈಸಿ ಎನ್ನ ಪಾಲಿಸೊ ಕೃಷ್ಣ ॥ ಪಲ್ಲ ॥ ಏಳು ಸುತ್ತಿನ ಕೋಟೆಯ ಯಮ ನಾಳು ಮುತ್ತಿಕೊಂಡು । ಹಾಳು ಮಾಡ್ಯಾರೆಂದು ಹೇಳುತಿರೆ ॥ ಆಳು ಸಮಗ್ರ ಅಪಾರ ಬಲಮಾಡಿ । ಕೊಳ್ಳೆ ಹೋಗದ ಮುನ್ನ ಕೊಟ್ಟು

ರಕ್ಷಿಸಬೇಕು ॥ ೧ ॥ ಮೂರು ಆರರ ಬಾಧೆ ಆರು ಎಂಟರ ಬಾಧೆ। ಕ್ರೂರರೈವರ ಬಾಧೆ ಹೋರುತಿವೆ ॥ ಆರಿಂದ ನಿರುವಾಹ ಆಗಾದು ಈ ನರನು । ವಿಾರಿ ಇರುವನೊಬ್ಬ ಧೀರನ್ನ ಬಲವಾಡಿ ॥ ೨ ॥ ಲಕ್ಷಎಂಭತ್ತನಾಲ್ಕು ರಾಶಿಯೊಳು ನಾನು । ಸೂಕ್ಷ್ಮದ ಕೋಟಿಂದುಪೇಕ್ಷಿಸದೆ ॥ ಪಕ್ಷಿವಾಹನ ನೀನು ಪ್ರತ್ಯಕ್ಷ ನೀತಾರೇ । ಅಕ್ಷಯ ಬಲವೆನಗೆ ಶ್ರೀಕೃಷ್ಣಯ್ಯ ರಕ್ಷಿಸೊ ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೨೬. ರಾಗ ಕಲ್ಯಾಣಿ, ಝಂಪೆತಾಳ.

ಯಾಕೆ ವೃಂದಾವನ ಯಾಕೆ ಗೋಕುಲ ನಮಗೆ। ಯಾಕೆ ಬಂದೆಲೊ ಉದ್ಧವಾ ॥ ಪಲ್ಲ ॥ ಯಾಕೆ ಸ್ನೇಹದ ಮಾತನೇಕಮಹಿಮನು ತಾನು ಆ ಕುಬ್ಜೆಯನು ಕೂಡಿದ । ರಂಗ ॥ ಅನುಪಲ್ಲ ॥ ಬೆಲೆ ಇಲ್ಲ ವೈಯ್ಯನಾ ಬ್ಯಾಟೆ ನಗೆನುಡಿ ನೋಟ ಇಲ್ಲದಂತಾಯಿತಲ್ಲ । ತಲ್ಲಣಿಸುತಿದ್ದೇವೆ ತಾಪ ಮೈಯೊಳಘೆಚ್ಚಿ ತನುವು ಪರವಶವಾಯಿತು ॥ ಎಲ್ಲರನು ಅಗಲಿಸಿದ ಖುಲ್ಲ ಅಕ್ರೂರ ನಮ್ಮ ವಲ್ಲಭನ ಕರದೊಯ್ದರೆ । ಮಲ್ಲರನು ಮರ್ದಿಸಿದ । ಮಾವಕಂಸನ ಕೊಂದ ಸಿರಿವಲ್ಲಭನ ತೋರಿಸೆಯ್ಯ ॥ ೧ ॥ ಆರು ದಿನವು ಆದರಿಸಿ ಅಧರ ಅಮೃತವನಿತ್ತು ಆನಂದವನು ತೋರುವ। ಮನಸು ಮರ್ಮವ ತಿಳಿಯೆ ಕಿನಸು ದೇಹದ ಕೂಟ। ಮಧುರ ಮಾತಿಲಿ ದಣಿಸುವ । ರಂಗನು ॥ ತನುಮನ ತನ್ನಧೀನದಲ್ಲಿ ದೇವ ಮುನಿವಂದ್ಯ ತಾನೆ ಬಲ್ಲ। ವನಜಾಕ್ಷ ವಾಸುದೇವನ ತಂದು ತೋರಿಯುವನ ಕೂಡಿಸಯ್ಯ ನೀನೆ ಉದ್ಧವಾ ॥ ೨ ॥ ಕರುಣಾಬ್ಧಿಯೆಂಬರಾ ಕಪಟ ನಾಟಕದವಾ । ಸರಸ ವಿರಸ ಮಾಡಿದ । ಸ್ಮರಿಸಿದವರ ಕಾಯ್ವ ಬಿರಿದುಳ್ಳ ಶಿರಿಕೃಷ್ಣ । ಮರತನೇತಕೆ ರಂಗನೂ ॥ ವರ ವಾಸುದೇವನ ಪದ ಭಕುತಿಯೆ ಸಾಕು । ಸುರವಂದ್ಯ ತಾನೆ ಬಲ್ಲ । ನೆರೆನಂಬಿದರನ್ನೇರ ಮರತನೇ ಮುದ್ದು ರಂಗಗೆ ನೆನಹೆ ಇಲ್ಲ ॥ ೩ ॥ ಶ್ರೀಃ ॥

೨೭. ರಾಗ ಸೌರಾಷ್ಟ್ರ, ತ್ರಿಪುಟತಾಳ.

ಛೀಛೀ ಮನವೆ । ನಾಚದ ತನುವೆ ॥ ಪಲ್ಲ ॥ ನೀಚವೃತ್ತಿಯು ಬಿಟ್ಟು ನೆನೆಯೊ ಶ್ರೀಹರಿಯು ॥ ಅನುಪಲ್ಲ ॥ ಕಿವಿಗೊಟ್ಟು ಘಂಟಾನಾದಕ್ಕೆ ಹುಲ್ಲೆಯು ನಿವಹ । ಬಲೆಗೆ ಸಿಲುಕಿದನರಿಯಾ ॥ ನವ ಯೌವನೆಯರ ಕೋಕಿಲಾಲಾಪದ । ಸವಿಗೆಳಸದೆ ಅಚ್ಯುತನ ಕಥೆಯು ಕೇಳಾ ॥ ೧ ॥ ಹಣ್ಣೆಂದು ಭ್ರಮಿಸಿ ಪತಂಗ ದೀಪದಿ ಬಿದ್ದು । ಉಣ್ಣದುರಿವುದ ಕಂಡು ಕಂಡರಿಯಾ ॥ ಬಣ್ಣದ ಬಾಲೆಯರ ರೂಪಿಗೆ ಮರುಳಾಗಿ । ಮಣ್ಣ ತಿನ್ನದೆ ಮಾಧವನನ್ನು ಸ್ಮರಿಸಾ ॥ ೨ ॥ ಗಾಣದ ತುದಿಯ ಮಾಂಸವ ಮತ್ಸ । ಪ್ರಾಣಬಿಡುವ ಅಂಗನೆಯರಧರವ ॥ ಮಾಣದೆ ಬಯಸಿ ಕೂಡುವಂತೆ ಕೆಡದೆ ಶ್ರೀ । ಮನ್ನಾರಾಯಣ ನಾಮಾಮೃತ ಉಂಡು ಸುಖಿಸೋ ॥ ೩ ॥ ಅಳಿಯ ದುಃಖರಿಯಾ ಕರಿಯು ಸ್ಪರ್ಶನಕಾಗಿ । ಗುಳಿಯು ಬಿಟ್ಟುದ ನೀ ಕಂಡು ಕಂಡರಿಯಾ ॥ ಲಲನೆಯಾಲಿಂಗನ ಕೆಳಸದೆ ಶ್ರೀ । ಲಲನೇಶನಂಘ್ರಿಯನಪ್ಪಿಕೊ ಮನವೇ ॥ ೪ ॥ ಅಳಿಪರಿಮಳಕಾಗಿ ನಳಿನದೊಳಗೆ ಸಿಲುಕಿ । ಉಳುವಂಗನೇರ ಸಂಗವ ಬಯಸಿ ॥ ಅಲಸದೆ ವರದ ಶ್ರೀಕೃಷ್ಣನಂಘ್ರಿಯೊಳಿಪ್ಪ । ತುಳಸಿಯ ನಾಘ್ರಾಣಿಸು ಕಂಡ್ಯ ಮನವೇ ॥ ೫ ॥ ಶ್ರೀಃ ॥

೨೮. ರಾಗ ಕೇದಾಗೌಳ, ಅಟತಾಳ.

ಸಂಸಾರವೆಂಬ ಮಾರಿಗೆ ಸಿಲುಕಿದೆ ॥ ಪಲ್ಲ ॥ ಕಂಸಾರಿ ಕರುಣದಿಂದೆನ್ನ ನೋಡಯ್ಯ ॥ ಅನುಪಲ್ಲ ॥ ಬಲಿಗಾಯತವಾದ ಕುರಿ ಮೆಲುವಂತೆ ಹೆಡೆ । ತಲೆ ಮೃತ್ಯುವನರಿಯದೆ ಮತ್ತನಾಗಿಪ್ಪೆ ॥ ೧ ॥ ಕಂಡು ಕಂಡು ಪತಂಗವು ಕಿಚ್ಚಿನೊಳು ಬೀಳುವಂತೆ ॥ ಕಂಡಕಂಡ ಹೇಯ ವಿಷಯಂಗಳಿಗೆರಗುವೆನಯ್ಯ ॥ ೨ ॥ ಪತಿಯಿರಲು ಸತಿಗನ್ಯಾದರಿಸುವಂತೆ ಕಂಡ ಕಂಡ ॥ ಗತಿನೀನಿರಲು ಅನ್ಯವೆ ಗತಿಯೆಂಬೆನೆಯ್ಯ ॥ ೩ ॥ ಒಂದು ಮೊಲಕೆ ಆರು ಹುಲಿ ಬಂದೆಡರುವಂತೆ ॥ ಬಂದೆಳವುತಲಿದೆ ಅರಿಷಡುವರ್ಗವು ॥ ೪ ॥ ಜಲಕ್ಕಾಗಿ ಕೋಡಗ ಪಾಟುಬಡುವಂತೆ ।

ಭೂಲೋಗರಿಗಾಗಿ ನಾ ತೊಳಲಿ ಬಳಲುವೆ ॥ ೫ ॥ ಶುಕನ ಓದುಗಳಂತೆ ಯೆನ್ನ ಓದುಗಳಯ್ಯ ॥ ಅಕಟಕಟವೆನಗೆ ಬಂಧವಾಯಿತು ನೋಡೊ ॥ ॥ ೬ ॥ ಮಿಂದು ನಿಂದಾನೆ ಹುಡಿಯ ಹೊಯ್ದುಕೊಂಬುವಂತೆ ॥ ಮಂದ ಮತಿಯಾದೆನೆಯ್ಯ ತಂದೆ ಕರುಣಿಸೊ ಕೃಷ್ಣ ॥ ೭ ॥ ಶ್ರೀಃ ॥

೨೯. ರಾಗ ಸೌರಾಷ್ಟ್ರ, ಅಟತಾಳ.

ಲಾಭಸಾಲದೆ । ಇಂಥ । ಲಾಭಸಾಲದೆ ॥ ಪಲ್ಲ ॥ ಲಾಭವಿದೆ ಮಿಕ್ಕದೊಂದು ಲಾಭವು ಲೆಖ್ಖವು ಹೇಳಾ ॥ ಅನುಪಲ್ಲ ॥ ನರಹರಿದಾಸರ ಚರಣ ಸೇವೆಯು ಎಂಬ । ಹರಿಚಂದನಕೆ ಸಾಕಿದ ಮಾರನಂತಿಪ್ಪದೊಂದು ॥ ೧ ॥ ಹರಿಚರಿತಾಮೃತ ಸವಿಗೆ ಕಿವಿ ಮೆಚ್ಚಿ ॥ ಪರಿಮಳಕೆರಗುವ ಮರಿದುಂಬಿಯಂತಿಪ್ಪ ॥ ೨ ॥ ಜಲಜನಾಭನ ಚೆಲುವಿನ ಜಲನಿಧಿ ॥ ಯೊಳಗೆ ಎನ್ನ ಕಂಗಳು ಮೀನಂತೆ ಲೋಲಾಡುವ ॥ ೩ ॥ ನಳಿನಾಕ್ಷನ ಮೂರ್ತಿಗೆ ಮನಮೆಚ್ಚಿ ಮರಿಯದೆ । ಎಳೆಗರು ತನ್ನ ತಾಯ ಹಲುಬುವ ಪರಿಯಿಪ್ಪ ॥ ೪ ॥ ಶ್ರೀಕೃಷ್ಣಭಕುತಿ ಸುಧೆಸವಿಗೆ ಮುಕ್ತಿಯು । ಸರಿಯಲ್ಲ ಸಾರವೆಂದು ಹರಿಗೆ ಮರುಳಾಗಿಪ್ಪ ॥ ೫ ॥

೩೦. ರಾಗ ಆನಂದಭೈರವಿ, ಆದಿತಾಳ.

ಇದಿಯರ್ಾರೊ । ಗುರುವೆ । ನಿಮಗೆ ಸಮಯರ್ಾರೊ ॥ ಪಲ್ಲ ॥ ಮದನಗೋಪಾಲನ ಪ್ರಿಯ ಜಯರಾಯಾ ॥ ಅನುಪಲ್ಲ ॥ ವ್ಯಾಸಮಂತ್ರಗಳೆಂಬ ಮಂದರವನು ವೇದ । ರಾಸಿಗಳೆಂಬ ಕ್ಷೀರವಾರಿಧಿಯೊಳಟ್ಟಿ ॥ ಶ್ರೀಸರ್ವಜ್ಞರ ವಾಕ್ಯಪಾಶದಿ ಕಟ್ಟಿ । ಭಾಸುರ ನ್ಯಾಯ ಸುಧಪಡದ್ಯೋಯತೀಂದ್ರ ॥ ೧ ॥ ಕುಟಿಲ ಮತಗಳೆಂಬೊ ಪಟು ಅಂಧಕಾರಕ್ಕೆ । ಪಟುತರತತ್ವ ಪ್ರಕಾಶಿಕೆಯೆಂಬ ॥ ಚಟುಲಾತಪದಿಂದ ಖಂಡಿಸಿ ತೇಜೋ । ತ್ಕಟದಿ ಮೆರೆದ ಬುಧಕಟಕಾಬ್ಜ ಮಿತ್ರ ॥ ೨ ॥ ವೇದಶಾಸ್ತ್ರಗಳೆಂಬ ಶೃಂಗಗಳಿಂದ । ಸು । ಧಾದಿ ಗ್ರಂಥಗಳೆಂಬ ಸ್ತನಗಳಿಂದೊಪ್ಪುವ ತತ್ವ ॥ ಬೋಧಿನಿಯೆಂಬ ದುಗ್ಧಶಿಷ್ಯವತ್ಸಗಳಿಗೆ । ಆದರದಿಂದ ಇತ್ತ ಯತಿ

ಸುರಧೇನು ॥ ೩ ॥ ವನಜನಾಭನ ಗುಣಗಳು ಸರ್ವಜ್ಞ । ಮುನಿಕೃತ ಗ್ರಂಥ ಅವನಿಯೊಳಡಗಿರೆ॥ ಸ। ಜ್ಜನರಿಗೆ ಟೀಕಾಜನರಿಂದ ತೋರಿಸಿ। ಘನ ಸುಖ ಸಾಧನ ಮಾಡಿದ ಧೀರಾ ॥ ೪ ॥ ಕಡು ಗರ್ಜಿಸುವ ಕೇಸರಿಯಂತೆ ವಿಮ್ಮ್ರವಾದ । ಗಡಣೆಯ ಕೇಳುತ ನುಡಿಯೊಂದಾಡಲು ॥ ಗಡಗಡ ನಡು ಗುವ ಮಾಯಿಗೋಮಾಯುಗಳು । ಅಡವಿಯೊಳಡಗಿರೆ ನಿನ್ನ ಭೀತಿ ಯಲಿ ॥ ೫ ॥ ಅಮಿತ ದ್ವಿಜಾವಳಿ ಕುಮುದಗಳರಳಿಸಿ । ವಿಮತರ ಮುಖ ಕಮಲಂಗಳ ಬಾಡಿಸಿ ॥ ಸ್ವಮತರ ಹೃತ್ಸಂತಾಪಗಳೋಡಿಸಿ । ವಿಮಲ ಸುಕೀರ್ತಿಯ ಪಡದಿಯೋ ಚಂದ್ರಾ ॥ ೬ ॥ ಅರ್ಥಿಮಂದಾರ ವೇದಾರ್ಥ ವಿಚಾರ ಸ । ಮರ್ಥ ಶ್ರೀಕೃಷ್ಣ ಪಾದಾಂಬುಜಲೋಲ ॥ ಪ್ರತ್ಯ ರ್ಥಿಮತ್ತೇಭ ಕಂಠೀರವಾಕ್ಷ್ಮೋಭ್ಯ । ತೀರ್ಥಕರಜ ಜಯತೀರ್ಥಯ ತೀಂದ್ರ ॥ ೭ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೩೧. ರಾಗ ಕಾಂಬೋದಿ, ಅಟತಾಳ.

ಏನೆಂಬೆ ನಿನ್ನ ಕರುಣಪಡೆವ ಪರಿಯಾ ॥ ಪಲ್ಲ ॥ ಶ್ರೀಮ । ದಾನಂದ ತೀರ್ಥಾರ್ಯ ಹರಿಕಾರ್ಯ ಧುರ್ಯ ॥ ಅನುಪಲ್ಲ ॥ ವಾರಿಧಿಯ ಗೋಷ್ಪಾದ ನೀರಂತೆ ದಾಟಿ ಅಂದು । ಮಾರುಮಲತಾಕ್ಷನ ಮುರಿದು ಮೆರದೆ ॥ ಸಾರಿ ಬಹ ರಕ್ಕಸರ ಗೆಲಿದು ನೀ ನಿಂದು । ಮೇರೆಯಿಲ್ಲದೆ ಭವಾಂಬುಧಿಯ ದಾಟಿಸಿದೆ ॥ ೧ ॥ ದಾನವನ ಅಶೋಕವನವ ಕಿತ್ತಾಡಿ । ಶ್ರೀನಾಥನೆನುತ ಲಂಕೆಯನುರುಪಿದೆ ॥ ದಾನವರಶೋಕವನಗಳ ಬೇರ ಕಿತ್ತುತಂದು । ದಾನವಾರಿಯ ಪುರವ ಪೂರೈಸಿದೆ ॥ ೨ ॥ ಬೇಗ ಸಂಜೀ ವನವ ತಂದು ನೀ ತೋರಟೆ । ನಾಗಪಾಶದಿ ನೊಂದ ಕಪಿಕಟಕವ ॥ ಈಗ ಶ್ರೀಹರಿ ಭಕುತಿ ಸುಧೆಯನೆರೆದು ಸಲಹಿದೆ । ರಾಗದಿಂ ಭವಪಾಶ ಬದ್ಧಜನರುಗಳ ॥ ೩ ॥ ಮೂಲ ರಾಮಾಯಣವ ಪಾಡಿಪಾಡಿ ಅಂದು । ಓಲಾಡಿ ಹರಿಭಕ್ತಿ ಸಾಗರದೊಳು ॥ ಈ ಲೋಕದೊಳಗೆಲ್ಲ ಅದರ ಸಾರವ ಬೀರಿ । ತೇಲಿಸಿದೆ ಭವಾಬ್ಧಿ ಮಗ್ನಜನರುಗಳ ॥ ೪ ॥ ಹೆತ್ತ

ದಿಕ್ಕನು ಗೆಲಿದು ರಾಜಸೂಯದಿ ಹರಿಯ । ಚಿತ್ತ ಬರಲಗ್ರಪೂಜೆಯ ಮಾಡಿದ ॥ ಹತ್ತಿರದ ಮತ್ತೊಂದು ದುರ್ಭಾಷ್ಯಗಳ ಜರಿದು । ವಿಸ್ತರಿಸಿದ್ಯೋ ಭಾಷ್ಯದಗ್ರಪೂಜೆಯನೂ ॥ ೫ ॥ ದ್ರೌಪದಿಯ ಸಂತವಿಟನೆಂದು ಮುಡಿಪಿಡಿದ । ಪಾಪಿ ದುಶ್ಶಾಸನನ ಬಸುರ ಬಗೆದೆ ॥ ಪಾಪಿ ಜನರೆಳದೊಯ್ಯೆ ವೇದಾಂತ ದೇವಿಯರ । ಶ್ರೀಪತಿಯ ಸೇರಿಸಿದ ಭಾವವರಿತೆಂದೂ ॥ ೬ ॥ ಅಂದು ಕಲಿಯಂಶ ದುರ್ಯೋಧನನ ಸಂದುಗಳ । ಕುಂದದೆ ಮುರಿದೆ ಗದೆಯಿಂದ ನೀನು ॥ ಇಂದು ಕಲಿಯನೇಕಶಾಸ್ತ್ರಶಸ್ತ್ರಗಳಿಂದ । ಕೊಂದೆಳದೆ ಹರಿಯ ಮಂಡಲದೊಳು ನೀನು ॥ ೭ ॥ ಶ್ರುತಿಪಂಕಜಗಳರಳೆ ಅಜ್ಞಾನ ತತಿಯೋಡೆ । ಗತಿಯಡಗೆ ಮಿಥ್ಯಾವಾದಿ ಚೋರರ॥ಕು । ಮತಗಳು ಮುರಿಯೆ ಸನ್ಮಾರ್ಗ ಕಾಣಿಸಲು । ವಿತತವಾಯಿತು ನಿನ್ನ ಪ್ರಭೆಸೂರ್ಯನಂತೆ ॥ ೮ ॥ ಜ್ಞಾನಚಂದ್ರಿಕೆ ಹೊಳೆಯೆ ಭಕ್ತವಾರಿಧಿಯುಕ್ಕೆ । ದಾನವಚಕೋರನಲಿಯೆ ವಿಷ್ಣುಮಾರ್ಗ ದೊರಿಯೆ ॥ ಮಾನವರ ಭಯವೋಡೆ ತಾಪತ್ರಯಗಳಡಗೆ । ನೀನುದಿಸಿದೆ ತೀರ್ಥೇಂದು ಕೃಷ್ಣನೊಪ್ಪೆ ॥ ೯ ॥ ಶ್ರೀಃ ॥

೩೨. ರಾಗ ಕೇದಾರಗೌಳ, ಅಟತಾಳ.

ಎಂದೆಂದೆನ್ನ ಮನದಿಂದ ಅಗಲದಿರೊ ॥ ಪಲ್ಲ ॥ ನಂದನಂದನನೆ ಆನಂದ ಮೂರುತಿಯೆ ॥ ಅನುಪಲ್ಲ ॥ ಬಹುಕಾಲ ನಿನ್ನ ಶ್ರವಣವೆಂಬ ಪೊನ್ನೋರೆಯ । ಬಹುಮಾನದಿಂದ ಯೆನ್ನ ಕಿವಿಯಲಿಟ್ಟು ॥ ಮಹಿತ ಮಂಗಳ ಸೂತ್ರವೆಂಬ ದಾಸ್ಯವನಿತ್ತು । ಮಹದಾನಂದದಲಿ ಯೆನಗೆ ಕಟ್ಟಿದ್ಯಾಗಿ ॥ ೧ ॥ ಸುಲಲಿತ ಸೌವರಣ ವೊದಲಾದ ಭೂಷಣವಿತ್ತು । ಬೆಳಸಿದೆ ಬನವಾಸಖೇದದಿಂದ ನೀನು ॥ ಬೆಲೆಯಿಲ್ಲದ ಸುಜ್ಞಾನವೆಂಬಾ ನಿಧಿಯೊಳಿಟ್ಟು । ಜಲಜಾಕ್ಷ ಒಲಿಸೆನ್ನ ಸೆರಗಪಿಡಿದೆಳೆದೆಯಾಗಿ ॥ ೨ ॥ ಎಲ್ಲಿ ನೀನೆಲಸಿದಲ್ಲೆನಗೇನು ಇನಿತಿಲ್ಲ । ಬಲ್ಲೆ ನೀ ವಿಶ್ವವ್ಯಾಪಕನೆಂಬುದನೂ ॥ ಸಲ್ಲದು ಮುನಿಸೆನ್ನೊಳು ಕೃಷ್ಣ ನಿನಗೆ ಇಂ । ತಲ್ಲದಿದ್ದರೆ ಕರ ಹಿಡಿದೆಳೆದೆಯಾಗಿ ॥ ೩ ॥ ಶ್ರೀಃ ॥

೩೩. ರಾಗ ರೇಗುಪ್ತಿ, ಅಟತಾಳ.

ಕಾಣದೆ ನಿಲ್ಲಲಾರೆ। ಕಮನೀಯ ಮೂರುತಿಯ। ಪ್ರಾಣೇಶನನು ತೋರೆ ಗಿಣಿಯೆ ॥ ಪಲ್ಲ ॥ ಮಾಣಿಕ್ಯ ಪದಕವನು। ಮನ್ನಿಸೆ ನಿನಗೀವೆ। ಜಾಣ ಕೃಷ್ಣನ ತೋರೆ ಗಿಣಿಯೆ ॥ ಅನುಪಲ್ಲ ॥ ಮಕರ ಕುಂಡಲ ಧರನ। ಮಕರ ಧ್ವಜ ಪಿತನ। ಮಕುಟ ಭೂಷಣನ ತೋರೆ ಗಿಣಿಯೆ ॥ ಮಕರಾಕ್ಷ ಸಂಹರನ। ಮಕರಾರಿ ರಕ್ಷಕನ। ಮಕರಿ ಶಿಕ್ಷಕನ ತೋರೆ ಗಿಣಿಯೆ ॥ ೧ ॥ ಇಂದುಕುಲ ಪಾವನನ। ಇಂದುರವಿ ಲೋಚನನ। ಇಂದು ನೀ ಕರತಾರೆ ಗಿಣಿಯೆ ॥ ಇಂದು ಶೇಖರನುತನ। ಇಂದಿರಾ ರಮಣನ। ತಂದು ತೋರೆ ಮುದ್ದು ಗಿಣಿಯೆ ॥ ೨ ॥ ಒಂದು ನಿಮಿಷವು ಒಂದು। ಯುಗವಾಗಿ ತೋರುತಿದೆ। ಸೌಂದರ್ಯವತಿ ತೋರೆ ಗಿಣಿಯೆ। ಮಂದಮಾರುತ ಸೋಕೆ। ಮರುಳು ಗೊಂಡೆನೆ ಯೆನ್ನ। ಮಂದಿರಕ್ಕೆ ಕರತಾರೆ ಗಿಣಿಯೆ ॥ ೩ ॥ ಕಾಯಜನ ಬಾಣದಲಿ। ಕಾಯವೆಲ್ಲವು ಬಹು। ಘಾಯವಾದವು ನೋಡು ಗಿಣಿಯೆ। ಮಾಯೆಗಳ ಮಾಡದೆ। ಮಮತೆಯಿಂದಲಿ ಯೆನ್ನ। ನಾಯಕನ ಕರತಾರೆ ಗಿಣಿಯೇ ॥ ೪ ॥ ಪಂಕಜೋದ್ಭವ ಪಿತನ। ಪಂಕಜ ಲೋಚನನ। ಪಂಕಜನಾಭನ ತೋರೆ ಗಿಣಿಯೆ॥ ಪಂಕಜೋದ್ಭವ ಶಿರಿ। ಕೃಷ್ಣನ ಪಾದ ದೊರಕಿತು। ಶಂಕೆಯಿಲ್ಲದೆ ತೋರೆ ಗಿಣಿಯೆ ॥ ೫ ॥ ಶ್ರೀಃ ॥

೩೪. ರಾಗ ಕೇದಾರಗೌಳ, ಅಟತಾಳ.

ಹಲವು ಪರಿಯಲಿ ಶ್ರೀಹರಿಯ ಸೇವಿಸುವ ಗೋ। ಕುಲದ ತರುಣಿಯರ ಪುಣ್ಯವಿನ್ನೆಂತೊ ॥ ಪಲ್ಲ ॥ ಮಲಿನವಳಿದು ಜಲವೆರೆದು ಗಂಧವ ಪೂಸಿ। ಕೆಳಗೆ ಕರ್ಪೂರ ತುಂಬಿ ಕಸ್ತೂರಿಯ॥ ಅಲತಿಗಸಾಧ್ಯ ಕೆಂಪುಳ್ಳ ಅಂಗಕ್ಕೆ ದೇವ। ಮಲಗುವ ಮನೆಯೆಂದು ಹಿತದಿ ಶೃಂಗರಿಪದು ॥ ೧ ॥ ಜ್ಯಾಮುಡಿ ಚಾಮರ ಸುವಸನ ಮೇಲ್ಕಟ್ಟು। ಹಾರವೆ ಕನ್ನಡಿ ಸಾಲುಗಳು ॥ ಊರು ಬಾಳೆಯ ಕಂಬ ಶಿರಗ ಪತಾಕೆಯು। ವಿಾರಿದನಿಲಗಳೆ ಕುರುಜುಗಳಂತಿರೆ ॥ ೨ ॥ ಕರಪಲ್ಲವ ನರಬೀಗು ಸುಮಗಳಾಗೆ ಬೆ।

ಮರು ಮರಂದ ಜಾಲದಂತಿರೆ ॥ ವರಬಾಹುಲತೆಯಲಿ ರಾಮಚಂದ್ರ । ವರಿವಾ ಸಿಲುಕಿ ನೀ ಬಿಂಬಾಧರ ಧರಾವೆನುತ ॥ ೩ ॥ ಅತಿಅತಿ ಮೃದುವಾದ ತನುವೆನ್ನ ಸುಪ್ಪತ್ತಿಗೆ ಉ । ನ್ನತವಾದ ಭುಜವೆರಡು ವೊರಗೂ ॥ ಹಿತವಾದ ಕುಚಯುಗ ಬಟ್ಟುತಿಮಿಗಳೂ ಅ । ಚ್ಯುತಗೆ ತವ್ಮೊಡಲೆ ಶಯ್ಯಾದಂತೊಪ್ಪಿರೆ ॥ ೪ ॥ ಮೊಗವೆಂತೊ ತಿಂಗಳ ತಳಿಗೆ ಯೊಳಗೆ ನಯ । ನಗಳೆಂಬೊ ಬಟ್ಟುವಾರತಿ ನೇಹದಿ ॥ ಸೊಗಸುವ ಕಂಗಳ ಪ್ರಭೆ ದೀಪವೆನಲು । ಖಗವಾಹನ ಕೃಷ್ಣಗೆ ಚಂಚಲನೋಟವಾರತಿಯೆತ್ತಿ ॥ ೫ ॥ ಶ್ರೀಃ ॥

೩೫. ರಾಗ ಮುಖಾರಿ, ಆದಿತಾಳ.

ಕೃಷ್ಣ ಕೃಷ್ಣ ಕೃಷ್ಣಯೆಂದು ಮೂರುಭಾರಿ ನೆನೆಯಿರೋ ಸಂ । ತುಷ್ಟನಾಗಿ ಮುಕುತಿಕೊಟ್ಟು ಪಾತಕ ಭರವಾ ಪೊರೆವಾ ॥ ಪಲ್ಲ ॥ ಕಮಲನಾಭನ ಚಿಹ್ನೆಯನ್ನು ಧರಿಸಿಕೊಂಡು ಮೆರೆಯಿರೊ ॥ ಯಮನ ಭಟರು ಕಂಡು ಅಂಜಿ ಅಡವಿಗೆವೋಡುವರೋ ॥ ೧ ॥ ಸಕಲವೇದಶಾಸ್ತ್ರ ಪಠಿಸಿ ಸಾರವನ್ನು ತಿಳಿವರೇನು ॥ ಮಕರಕುಂಡಲಧರನ ನಾಮಕೆ ಮತ್ತೆ ಸರಿಯಿಲ್ಲವೊ ॥ ೨ ॥ ಜನ್ಮಮುಕ್ತಿ ಮಧ್ವಮತವ ಅನ್ನುಸರಿಸಿ ನಡೆಯಿರೊ ॥ ಒಮ್ಮನದಿ ಸಿರಿಕೃಷ್ಣ ತನ್ನ ಲೋಕವ ಕೊಡುವನು ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೩೬. ರಾಗ ಶಂಕರಾಭರಣ, ಆದಿತಾಳ.

ವೃಂದಾವನವಿ ನೋಡುವ ಬಾರೆ । ಗೋ । ವಿಂದನಾಡುವ ಸಂದಣಿ ಸಾಲದೆ ಸಖಿ ॥ ಪಲ್ಲ ॥ ಮುನಿಗಳ ತರು ಪಕ್ಷಿ ಮೃಗಂಗಳಾಗಿರೆ । ಸನಕಾದಿಗಳು ಗೋವುಗಳಾಗಿರೆ ॥ ಅನಿಮಿಷರೆಲ್ಲರು ಗೋಪಾಲಕರಾಗಿ । ದನುಜಾಂತಕನು ಮನುಜನಂತಾಗಿರೆ ॥ ೧ ॥ ತಳಿತ ತೋರಣದಿಂ ತಂಪಿನ ನೆರಳಿಂ । ಮಳೆಯಾಗಿ ಸುರಿವ ಮಕರಂದ ಜಲದಿಂ ॥ ಫಲ

ಪುಂಜಗಳಿಂ ಶುಕ ಚಾಟುಗಳಿಂ । ನಳಿನನಾಭನನುಪಚರಿಪ ತರುಗಳೆಲ್ಲ ॥ ೨ ॥ ತಳಿತಿರುವ ಸಲೆ ತವುತವು ಜಾತಿಯು । ಉಳಿದಾ ನಲಿದು ಕಣ್ಣುಮುಚ್ಚಿ ತೆರೆಯುತ್ತ ॥ ನಳಿನನಾಭನ ವೇಣುನಾದಕೆ । ಮುಳುಗಿ ಮುನಿಗಳಂತಿಪ್ಪಪಕ್ಷಿ ಜಾತಿಗಳೆಲ್ಲ ॥ ೩ ॥ ಚಿತ್ತಜನ್ಯೆಯುನ ವೇಣುನಾದಕೆ । ಎತ್ತಿದ ಕಿವಿಯಿಂದ ಸವಿಯುತಲಿ ॥ ಮುತ್ತಾದ ಸುಖಜಲ ಕಡಲಾಗಿ ಹರಿಯಲ್ಲಿ । ಚಿತ್ರದಂತಿಪ್ಪವು ತುರುವಿಂಡುಗಳೆಲ್ಲ ॥ ೪ ॥ ರಂಗಪಾದನಖಂಗಳ ಬೆಳಕಿಗೆ । ತುಂಗ ಚಂದ್ರಕಾಂತಶಿಲೆ ಒಸರೆ ಸಲೆ ॥ ಹಿಂಗದೆ ಹರಿದು ಕಾಳಿಂದಿಯ ಕೂಡಲು । ಗಂಗೆ ಯಮುನೆಯ ಸಂಗವಂತಿರೆ ॥ ೫ ॥ ಸರಸಿಜನಾಭನ ನಗೆಮುಖ ಚೆಂದುಟಿ । ವರ ಕೌಸ್ತುಭವೆಂಬೊ ಬಾಲರವಿಯೂ ॥ ಎರಡು ಕಣ್ಣು ಚಕೋರಚಕ್ರವಾಕ । ಇರುಳು ಹಗಲುಯೆಂದು ಹೋರ್ಯಾಡುತಿಪ್ಪವು ॥ ೬ ॥ ಹರಿಯ ಕೊಳಲಧ್ವನಿ ಅತಿಮೋಹನಕರ । ತರು ಮೊಗೆಗಳು ಉಲುಕಿದವಾಗಾ ॥ ನಿರಜರ ದಿವ್ಯ ಸರಸಕರದಿಂ । ತೊರೆಗಳ ಸಲಹಿದ ನೆಪದಿಂದಾ ನಲಿವ ॥ ೭ ॥ ಅಳಿಗಳು ಗಾನದಿಂದೊಲಿದೊಲಿದಾಡುವ । ಹಲವು ವನದ ದೇವತೆಗಳೆಲ್ಲ ॥ ಹೊಳೆವ ಕುಂಡಲರವಿ ತಾಳ ಮೇಳಕೆ । ನಲಿನಲಿದಾಡುವ ವನನೀರುಗಳೆಲ್ಲ ॥ ೮ ॥ ನಳಿನಳಿಸುವ ವನಮಾಲೆಯು ಬಾಷ್ಪ । ಪೊಳೆವ ಪೊಂಬಟ್ಟೆ ಮಿಂಚು ವೇಣುನಾದಾ ॥ ಎಳೆಯ ಗರ್ಜಿತ ಮೇಘಶ್ಯಾಮನಾದ ಕೃಷ್ಣ । ಮಳೆಮೇಘವೆಂದು ಚಾತಕ ನಲಿಯಲೂ ॥ ೯ ॥ ಶ್ರೀಃ ॥

೩೭. ರಾಗ ಝಂಜೋಟಿ, ಆದಿತಾಳ.

ಬಾರೋ ಸೇರೋ ಯೆಲೊ ಜೀವ । ಮಾರನೈಯನ ಬಿಡದೆ ನೀನು ॥ ॥ ಪಲ್ಲ ॥ ಘೋರವಾದ ಸಂಸಾರಕಿನ್ನು ತಾರಕ ಕಮಲಾ ದೇವನು ॥ ॥ ಅನುಪಲ್ಲ ॥ ಸುಲಭರಿಗೆ ಸುಲಭನಿವನೂ । ನಳಿನನಾಭನು ತ್ರಿಜಗದೊಳಗೆ ॥ ಎಳೆಯ ತುಲಸಿ ದಳಗಳನು ನಲಿಯುತಲರ್ಚಿಸಿ । ಒಲುಮೆಯಿಂದ ಮುಕ್ತಿಯನ್ನು ॥ ಒಲಿದು ಕೊಡುವ ದೇವನಿವನು । ಬಲಿಯ

ಸಲಹಿವಂತೆ ಭಕ್ತರ ಸಲಹುವನು ಕಾಣಿರೋ ॥ ೧ ॥ ಕಮಲನಾಭನ ಪಾದಕಮಲಗಳನು ಭಕ್ತಿಯಿಂದ । ಕಮಲಗಳನು ತಂದು ಕರಕಮಲದಲರ್ಚಿಸುವೆ ॥ ಕಮಲಪತಿಯು ತನ್ನ ಹೃತ್ಕಮಲದೊಳಗೆ ಇಟ್ಟುಕೊಂಡು । ಕಮಲಜೆಯನ್ನು ಮುದದಿ ಕಮಲಾಕ್ಷಿಯನ್ನು ಸೇರನೇ ॥ ೨ ॥ ತೊಡೆಯನೇರ ಬಂದ ಮಗನ । ಮಡದಿ ದುಷ್ಟಮಾತ ಕೇಳಿ ॥ ಕಡೆಗೆ ನೂಕಿ ತಂದೆ ತನ್ನ । ಪಡದ ತಾಯಿ ಹೇಳಲು ಯೆ ॥ ನ್ನೊಡೆಯ ಪಾಳ್ಗಡಲಿನಲ್ಲಿಹನು । ತಡವು ಮಾಡದೆ ಪೂಜಿಸುಯೆನಲು ॥ ದೃಢ ಭಕುತಿಯಿಂದ ಧ್ರುವನು ಪೂಜಿಸಿ । ಪಡೆದುದಿಲ್ಲವೆ ರಾಜ್ಯವಾ ॥ ೩ ॥ ಕರಿ ಮಕರಿಗೆ ಸಿಲುಕಿ । ಸಲಹುವರ ಕಾಣೆನೆಂದು ಪುರಿ ॥ ಅರಸು ಕಾಯೊ ಯೆನ್ನ । ಕರುಣದಿಂ ಮೊರೆಯಿಡೆ ॥ ಉರಗ ಮಂಚದಿಂದ ಧುಮುಕಿ । ಗರುಡವಾಹನನಾಗಿ ಬಂದು । ಭರದಿ ಚಕ್ರವಿತ್ತು ಮಕರಿಯ ನರಿದು ಕರಿಯ ಕಾಯ್ದನೆ ॥ ೪ ॥ ದುಷ್ಟ ದುರ್ಯೋಧನನ್ನ ಸೃಷ್ಟಿ ಪಾಂಡವರು ತನ್ನ ॥ ಕಷ್ಟಪಡಿಸೆ ಮನದಲೊಮ್ಮೆ । ವಿಷ್ಣು ಸಲಹೊ ಯೆನಲು । ನಷ್ಟವಾದ ಕುರುಕುಲವನ್ನು । ಕುಟ್ಟಿಬಿಸುಟು ಬೇಗದಿಂದ ಉ । ತ್ಕೃಷ್ಟ ಮನ್ನಾರು ಕೃಷ್ಣನು ಅವನಿಗೆ ಪಟ್ಟಗಟ್ಟಿದಿಲ್ಲವೆ ॥ ೫ ॥

೩೮. ರಾಗ ಕಾಂಬೋದಿ, ಅಟತಾಳ.

ಹರಿದಿನ ಪಾತಕ ಪರಿಹರ ॥ ಪಲ್ಲ ॥ ದುರಿತಾರಿ ಕರುಣಕ್ಕೆ ಕಾರಣ ಮನುಜಾ ॥ ಅನುಪಲ್ಲ ॥ ಗಂಗೆ ಮೊದಲಾದ ತೀರ್ಥಂಗಳೆಣೆಯೆ । ಶ್ರೀ । ರಂಗ ಮೊದಲಾದ ಕ್ಷೇತ್ರವು ಸರಿಯೆ ಉ ॥ ತ್ತುಂಗ ಜಪತಪ ಹೋಮಗಳಿದಿರೆ । ಭು । ಜಂಗಶಾಯಿ ದಿನದೊಂದುಪವಾಸಕ್ಕೆ ॥ ೧ ॥ ಹಿಂದೆ ಮಾಡಿದ ಪಾತಕನಾಶವು । ಇಂದು ಮಾಡುವ ಸುಕೃತಕ್ಕೆ ಬೆಳವು ॥ ಮುಂದಣ ಮುಕುತಿಗೆ ಕಲ್ಪಲತೆಯೂ । ಇಂದಿರೇಶನ ದಿನದಿ ಉಪವಾಸವೂ ॥ ೨ ॥ ರುಕುಮಾಂಗದ ಮೊದಲಾದ ಭಕತರೆಲ್ಲ । ಸಕಲವು ಬಿಟ್ಟು ಏಕಾದಶಿಯ ॥ ಭಕುತಿಯಿಂದಲಿ ಮಾಡಿ ಶ್ರೀಕೃಷ್ಣನ ಮೆಚ್ಚಿಸಿ । ಮುಕುತಿಯ ಸೂರೆಗೊಂಡದನರಿಯಾ ॥ ೩ ॥ ಶ್ರೀ ॥

೩೯. ರಾಗ ಮುಖಾರಿ, ತ್ರಿಪುಟತಾಳ.

ಆರು ನಿನಗಿದಿರೊ ಅಖಿಳ ಧಾರುಣಿಯೊಳಗೆ ॥ ಪಲ್ಲ ॥ ಪರಮ । ಕಾರುಣಿಕ ಗುರುಮಧ್ವ ಚಾರುಚರಿತಾ ॥ ಅನುಪಲ್ಲ ॥ ಆರೊಂದು ವೈರಿಗಳ ತರಿದು ವೈಷ್ಣವರಿಗೆ । ಆರೆರಡು ಊರ್ಧ್ವಪುಂಡ್ರಗಳನೆ ಇತ್ತ ॥ ಆರು ಮೂರರ ಮೇಲೆ ಮೂರಧಿಕ ಕುಮತಗಳ । ಬೇರರಿಸಿ ಕಿತ್ತೊಟ್ಟಿ ಬಿಸುಟ ಧೀರಾ ॥ ೧ ॥ ಆರು ನಾಲ್ಕು ತತ್ವದ ಅಭಿಮಾನಿಗಳೊಡೆಯ । ಮಾರುತಿಯು ಮೂರನೆಯವತಾರನೆನಿಸಿ ॥ ಆರುಐದರ ಮೇಲೆರಡಧಿಕಾ ಲಕ್ಷಣವುಳ್ಳ । ಮೂರುತಿಯೊಳೊಪ್ಪುತಿಹ ಮುನಿವರೇಣ್ಯ ॥ ೨ ॥ ಆರಾರು ಮೇಲೊಂದು ಅಧಿಕ ಲೇಖದಿ ಗ್ರಂಥ । ಸಾರವನು ರಚಿಸಿ ಸಜ್ಜನರಿಗೊಲಿದೂ ॥ ಪಾರಮಾರ್ಥಿಕ ಭೇದ ಪಂಚಕವ ಸ್ಥಾಪಿಸಿ ಉ । ದಾರ ಶ್ರೀಕೃಷ್ಣನ ದಾಸರೊಳು ಮೆರೆದೆ ॥ ೩ ॥ ಶ್ರೀಃ ॥

೪೦. ರಾಗ ಪಂತುವರಾಳಿ, ಝಂಪೆತಾಳ.

ಲಾಭವಹದು ಹರಿಕಥಾಮೃತ ॥ ಪಲ್ಲ ॥ ಪದುಮ । ನಾಭನ ಪದದ ಪಥದಿ ಹವುದು ಸಜ್ಜನ ಗಣಕೆ ಸತ್ಯ ॥ ಅನುಪಲ್ಲ ॥ ಅರಿಷಡ್ವರ್ಗಂಗಳ ಜರಿದು । ಜರಿದು ತಾಪತ್ರಯುವ ಕಳದು ॥ ಮುರಹರನ ಪದದ ಪಥದಿ । ಇರಿಸು ಸಜ್ಜನ ಗಣಕೆ ಸತ್ಯ ॥ ೧ ॥ ಏಳುದಿನವು ಪರೀಕ್ಷಿತನು । ವೇಳೆಯರಿತು ಹರಿಕಥೆಯ ॥ ಕೇಳಿ ಮುಕ್ತನಾದ ಮೇಲೆ । ಕೇಳದ ಕಥೆಯು ಕೇಳಬೇಕು ॥ ೨ ॥ ಎರಡು ಘಳಿಗೆ ಖಟ್ವಂಗರಾಯ । ಕರಣಪುಟದಿ ಕೃಷ್ಣನ ಕಥೆಯ ॥ ಸ್ಮರಿಸಿ ಮುಕ್ತನಾದ ಮೇಲೆ । ನಿರುತ ಕಥೆಯು ಕೇಳಬೇಕು ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೪೧. ರಾಗ ಪಂತುವರಾಳಿ, ಅಟತಾಳ.

ತೊಂಡನ ಕಂಡು ನಾ ಬಿನ್ನೈಸುವೆನು ॥ ಪಲ್ಲ ॥ ವರ । ಪಾಂಡವ ಪ್ರಿಯ ಈತಪ್ಪ ಕಾಯಯ್ಯ ॥ ಅನುಪಲ್ಲ ॥ ಹರಿ ನಿಮ್ಮ ನಾಮವೆಂಬ ಕಾಮ

ಧೇನುವಿಗೆ । ದುರಿತದೊಂದಿಲಿ ಮೇವುಪಟ್ಟರೆ । ಭವಾಂಬುಧಿ ॥ ಅರಸಿ ಕುಡಿವ ನೀರು ಯುರದು ಯೆನ್ನಲ್ಲದೆ । ಭರಿತವಾಗದ ಬೇರೆ ಆರಸಲೇತಕೆ ಹರಿಯೆ ॥ ೧ ॥ ಮುನಿಗಳ ಮನದ ಕೊನೆಯಲ್ಲಿ। ಘನ ಭಕ್ತಿಪಾಶದಿ ಸಿಲುಕಲೇಕೆ ॥ ಯೆನಮನ ಚಂಚಲದುಯ್ಯಾಲೆ ಇರಲು । ನಿನ ಮನ ಬಂದಂತೆ ತೂಗಾಡಲಾಗದೆ ಹರಿ ॥ ೨ ॥ ಕರ್ಣದ ರಂಧ್ರವ ಪೊಕ್ಕು ನಿನ್ನ ವರಪಾವನ । ಯೆನ್ನ ಪಾಪದಿ ಕಳವಳಿಸಲೇಕೆ ॥ ಎನ್ನೊಳಹೊರಗೆ ಪಾಪದ ರಾಶಿ ತುಂಬಿರಲು । ನಿನ್ನ ಮನಬಂದಂತೆ ಸೂರೆಗೊಳ್ಳೊ ಕೃಷ್ಣ ॥ ೩ ॥ ಶ್ರೀಃ ॥

೪೨. ರಾಗ ಮುಖಾರಿ, ಅಟತಾಳ.

ನಿದ್ರೆಬರುತಿದೆ। ಯೆನಗೆ। ನಿದ್ರೆಬರುತಿದೆ॥ ಪಲ್ಲ ॥ ನಿದ್ರೆಬರುತದೆನಗೆ ಅನಿ। ರುದ್ಧನ್ನ ಸೇವೆಗೆ ವಿಘ್ನಬಡಿಸುತ ॥ ಅನುಪಲ್ಲ ॥ ಅಸ್ತಮಾನ ಉದಯವಾಗುವ ತನಕ । ಸ್ವಸ್ಥದಿ ಪಗಡೆ ಪಂಥವನಾಡುತ ॥ ವಿಸ್ತಾರದಿಂದಲಿ ಬೇರೆ ಕುಳಿತಾ । ಪುಸ್ತಕ ಬಿಚ್ಚಲು ಮಸ್ತಕ ಬಾಗುತ ॥ ೧ ॥ ಹರಿಕಥಾಶ್ರವಣ ಮಾಡುವೆನೆನುತ । ಪರಮ ಭಕ್ತಿಯಲಿ ಕುಳ್ಳಿರಲು ॥ ಕರಿಗಣ್ಣಿಂದ ನೋಡುತ । ಕೊರಳ ಸ್ಮರಣೆ ತಪ್ಪಿ ಗುರುಗುರುಯೆನುತಲಿ ॥ ॥ ೨ ॥ ಇಲಿಗೆ ಬೆಕ್ಕು ಸಾಧಿಸುವಂದದಿ। ಹಲವು ಪರಿಯಲಿ ನಿದ್ರೆಯು। ಚಲದಿ ವ್ಯಥೆಯುಪಡಿಸುತಿದೆ। ಉಳುಹೊ ಶ್ರೀಕೃಷ್ಣ ಯೇಕಾದಶಿ ॥ ೩ ॥

೪೩. ರಾಗ ನೀಲಾಂಬರಿ, ಝಂಪೆತಾಳ.

ಎನ್ನ ಮನ ಕಂಡಕಡೆಗೆ। ಎರಗುತಿದೆ। ನಿನ್ನಲ್ಲಿ ಇರಿಸಿ ಕಾಯೊ ॥ ॥ ಪಲ್ಲ ॥ ಚಕ್ಷುರಿಂದ್ರಿಯಗಳಿಂದ । ಚದುರೆಯರ। ನೀಕ್ಷಿಸಿ ನೊಂದೆನಯ್ಯ ॥ ಶಿಕ್ಷಕನು ನೀನೆ ಯೆನಗೆ ಸಿರಿಮೊಗವ । ಸಾಕ್ಷಾತ್ತುವಾಗಿ ತೋರೊ ॥ ೧ ॥ ಘ್ರಾಣೇಂದ್ರಿಯಗಳಿಂದ। ದುರ್ಗಂಧ । ಘ್ರಾಣಿಸಿ ನೊಂದೆನಯ್ಯ ॥ ಪ್ರಾಣೇಶ ನಿನಗರ್ಪಿತ ನಿರ್ಮಾಲ್ಯವಾ। ಘ್ರಾಣಿಸುವಂತೆ ಮಾಡೊ ॥ ೨ ॥ ರಸನೇಂದ್ರಿಯಗಳಿಂದ। ಪದಾರ್ಥ । ಹಸಿವರಿತು

ಉಂಬುವೆನಯ್ಯ ॥ ವಸುಧೇಶ ನಿನಗರ್ಪಿತ ನೈವೇದ್ಯ । ರಸಸವಿಯು ವಂತೆ ಮಾಡೊ ॥ ೩ ॥ ಶ್ರೋತ್ರೇಂದ್ರಿಯಗಳಿಂದ । ಸತತ ದು । ರ್ವಾರ್ತೆಯ ಕೇಳಿ ನೊಂದೆ ॥ ಕೀರ್ತನಿಗೆ ಕರ್ತುಸರ್ವತ್ರ ಹರಿ । ಕಥೆಯು ಕಿವಿಯೊಳಿರಿಸೊ ॥ ೪ ॥ ತ್ವಕ್ಕು ಇಂದ್ರಿಯಗಳಿಂದ । ಕಾಮದಿ । ಸೊಕ್ಕಿ ನಾನೊಂದೆನಯ್ಯ । ಕಾಕುಮಾಡದೆ ಯೆನ್ನನು ಸಲಹಯ್ಯ । ಸಾಕಾರ ಶ್ರೀಕೃಷ್ಣನೆ ॥ ೫ ॥ ಶ್ರೀಃ ॥

೪೪. ರಾಗ ತೋಡಿ, ಅಟತಾಳ.

ಏನು ಸುಕೃತವ ಮಾಡಿದಳೊ ಯಶೋದೆ ॥ ಪಲ್ಲ ॥ ಶ್ರೀನಿಧಿಯಾದ ಕೃಷ್ಣನ ಕರದೆತ್ತಿಕೊಂಬುವಳಂತೆ ॥ ಅನುಪಲ್ಲ ॥ ಗಂಗಾಜನಕನಿಗೆ ಗಡಿಗೆ ನೀರೆರೆವಳಂತೆ । ಮಂಗಳಾಂಗನ ಶೃಂಗರಿಸುವಳಂತೆ ॥ ತುಂಗ ಭೂಧರನನ್ನ ತೊಟ್ಟಿಲೊಳಿಡುವಳಂತೆ । ಕಂಗಳಿಗಗೋಚರನನ್ನ ಕರದಪ್ಪಿಕೊಂಬುವಳಂತೆ ॥ ೧ ॥ ಜಗವನೆತ್ತಿದವನ್ನ ಮಗುವೆಂದೆತ್ತುವಳಂತೆ । ನಿಗಮಗೋಚರನ ನಿಟ್ಟಿಪಳಂತೆ ॥ ಅಗಣಿತ ಸಂಪನ್ನನ ಹಗ್ಗದಿ ಕಟ್ಟುವಳಂತೆ । ಮಿಗೆ ನಿತ್ಯ ತೃಪ್ತನಿಗೆ ಪಾಲನ್ನೆರೆವಳಂತೆ ॥ ೨ ॥ ಬಹುಮುಖನಿಗೆ ಭಾವೆ ಮುದ್ದು ಚೆಪ್ಪವಳಂತೆ । ಅಹಿತಲ್ಪನಿಗೆ ಹಾವು ಕುಳಿದ್ಯೆಂಬೊಳಂತೆ ॥ ಬಹು ದೈತ್ಯಸೂದನೆದೆ ಬಟ್ಟೆಬಟ್ಟೆ ಚುರ್ಕಿರಿವಳಂತೆ । ಮಹಿಮ ನಾರಸಿಂಹಗೆ ಗುಮ್ಮನ ತೋರುವಳಂತೆ ॥ ೩ ॥ ಚತುರ್ಮುಖ ಪಿತನನ್ನ । ಸುತನೆಂದೆತ್ತುವಳಂತೆ । ಶ್ರುತಿವಿನುತಗೆ ಜೋಗುಳ ಪಾಡುವಳಂತೆ ॥ ಶತರವಿ ತೇಜಗಾರತಿಯನೆತ್ತುವಳಂತೆ । ಗತಭೀತನಿಗೆ ಭಾವೆ ರಕ್ಷೆಕಟ್ಟುವಳಂತೆ ॥ ೪ ॥ ಕಡಗೋಲ ನೇಣ ಕೈಯೊಳಗೆ ಪಿಡಿದುಕೊಂಡು । ಪಡುವಲಗಡಲ ದ್ವಾರಕನಿಲಯ ॥ ಬಿಡದೆ ನಿಲಿಸಿದ ಹಯವದನ ಮೋಹನ್ನ ಮುದ್ದು । ಉಡುಪಿಕೃಷ್ಣನ್ನ ಮಡಿಯೊಳೆತ್ತುವಳಂತೆ ॥ ೫ ॥

೪೫. ರಾಗ ಕಲ್ಯಾಣಿ, ಝಂಪೆತಾಳ.

ಸೇರಿದೆನು ಸೇರಿದೆನು ಜಗದೀಶನಾ ॥ ಪಲ್ಲ ॥ ನರಜನ್ಮದ ಭಯವು ಎನಗೆ ಇಲ್ಲ ॥ ಅನುಪಲ್ಲ ॥ ನೇತ್ರಗಳು ಶ್ರೀಕೃಷ್ಣನ ಮೂರ್ತಿ ನೋಡುತಲಿವೆ ।

ಶ್ರೋತ್ರ ಹರಿಕಥಾಶ್ರವಣಮಾಡುತಲಿಹದೊ ॥ ರಾತ್ರಿಹಗಲು ಯೆನ್ನ ಮನಸು ಶ್ರೀರಂಗನಲ್ಲಿ । ಮಾತ್ರವಾಡುತಿದೆನ್ನ ಗಾತ್ರ ಕೃಷ್ಣನ ಮುಂದೆ॥ ॥ ೧ ॥ ಹಸ್ತಗಳು ಮಂಟಪ ಶುದ್ಧಿಯನು ಮಾಡುತಿವೆ । ಹಸ್ತಮಸ್ತಕವು ಹರಿಚರಣಕ್ಕೆರಗುತಿದೆ ಇದಕೊ ॥ ವಿಸ್ತಾರವಾದ ಪ್ರದಕ್ಷಿಣೆಯ ಮಾಡುತಿದೆ । ಕಸ್ತೂರಿಗಂಧ ಮೂಗು ಆಘ್ರಾಣಿಸುತಿದೆ ॥ ೨ ॥ ಹರಿನಾಮ ಸ್ಮರಣೆಯನು ನುಡಿಯುತಿದೆ ಯೆನ ಜಿಹ್ವೆ । ಹರಿಭಕುತಿ ಧೀಮತ್ತೆ ಪಾವನಗಳಿಂದ ॥ ಹರಿಪ್ರೀತಿಯಾಗಿದೆ ನೋಡಿದರೆ ಯೆನ್ನ ದೇಹ । ಶಿರಿಕೃಷ್ಣ ಬಾರೆಯ್ಯ ಯೆನ್ನ ಮಂದಿರಕೆ ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೪೬. ರಾಗ ಪುನ್ನಾಗತೋಡಿ, ತ್ರಿಪುಟತಾಳ.

ರಂಗನೆ ನೋಡುವ ಬಾರೆ ॥ ಪಲ್ಲ ॥ ಹೀಂಗಿರಲಾರೆ ನಿನ್ನಾಣೆ । ಕಂಗಳು ಪಡೆದ ಫಲವಾ । ರಂಗ ಕೊಳಲನೂದುತ ಗೋ । ಪಾಂಗನೇರು ನೆರದುಯೆಲ್ಲಾ । ಸಂಗಡ ಲೋಲಾಡುತಿಪ್ಪದು ॥ ಅನುಪಲ್ಲ ॥ ಏಣಲೋಚನೆ ಕೇಳವ್ವ । ದಾನವಾಂತಕನ ಕೈಯ । ವೇಣು ಮಾಡಿದ ಸುಕೃತ ಫಲವಾ ॥ ಪ್ರಾಣದೊಲ್ಲಭೆಯರೆಲ್ಲ । ಮಾಣದೆ ಸವಿವ ಅಧರ ಪಾನವಾ ತಾ ಸೂರೆಗೊಂಬುದಾ ॥ ತಾನು ನಿಲಿಸಿದ ವೃಕ್ಷಮೂಲಗಳೇನು ಪುಣ್ಯಮಾಡಿದವೋ ॥ ಭೂ । ವನದಾ ಪುಣ್ಯಗಳನೇನೆಂಬೆ । ನಾನು ಮಾಡಿದ ಪೂರ್ವಸಂಚಿತ । ಯೇನು ಒದಗಿತೋ ಕೃಷ್ಣರಾಯನ । ವೇಣುಗೀತಾಮೃತವ ಸವಿಯದೆ ॥ ೧ ॥ ಹುಲಿಯ ಹಿಂಡುಗಳೆಲ್ಲ । ಪುಲ್ಲನಾಭನ ಕೊಳಲಾಧ್ವನಿಯ । ಸೊಲ್ಲನೋಲೈಸುತ ವೇಗದೀ । ಚಲ್ಲಗಂಗಳೆರಂತೆ ಕೃಷ್ಣನಲ್ಲಿ ಚಿತ್ತವೆರಗಿ ಅನ್ಯ । ವಿಲ್ಲದಿಪ್ಪ ಪಡಗರವನೂ ॥ ಪಲ್ಲವಾಧರ ಪಾಣಿಯಿಂದಾ । ಮೆಲ್ಲನೆ ಮಧುರ ಗೀತವಾ । ಕಲ್ಲು ಬೆವರುವಂತೆ ಹಾಡಲು । ಹುಲ್ಲುಮೇವೊ ತುರುಗಳೆಲ್ಲ ತಲ್ಲಣದಿಂದಲಿ ಬಂದಾ । ವಲ್ಲಭೇರ ಮಾರಂತೆ ನೋಡಲು ॥ ೨ ॥ ಅರಗಿಳಿ ಹಂಸಗಳೆಲ್ಲ । ತರುಗಳ ಕೊಂಬೆಗಳನೇರಿ । ಪರಮ ಹರುಷದಿಂದ ಕುಳ್ಳಿರ್ದ ।

ಕೊರಳ ಕಲಕಲಾರವಗಳುಳುಹಿ । ಪರಮ ಪುರುಷನ ಧ್ಯಾನಾದಿಂದಾ । ಕರಗಿ ಕಂಬನಿಗಳನೆ ಸುರಿವುತ್ತ । ಸರಸೀಜಾಕ್ಷನ ವೇಣುಗೀತಾ । ಸ್ವರ ವನಾಲೈಸಿ ಬಾಹ್ಯವಾ । ತೊರೆದು ಯೋಗಿಗಳಂತೆ ಕುಳ್ಳಿರ್ದು । ಪರ ಮಹಂಸರಂತೆ ದಿನವನೂ । ಮರೆವೂ ಕೃಷ್ಣನಪಾದ ಭಕುತಿಯಾ । ಶರಧಿಯೊಳೋಲಾಡೊ ಸುಖವಾ ॥ ೩ ॥ ಶ್ರೀಃ ॥

೪೭. ರಾಗ ಶಂಕರಾಭರಣ, ರೂಪಕತಾಳ.

ರಂಗ ಬಾರ ಬಾಲೆ ಕುರಂಗನಯನೆ ಕೇಳೆ ॥ ಪಲ್ಲ ॥ ಹೀಂಗಿರಲಾರೆನೆ ಹರಿಯಸಂಗ ಬಿಟ್ಟ ಮೇಲೆ ಈ । ತಂಗಾಳಿಯ ಧಾಳೆ ಬೆಳದಿಂಗಳಿನ ಧಾಳೆ । ಗಿಳಿಭೃಂಗದ ಸ್ವರಗಳೆ । ದೇವಾಂಗನೇರ ಗಾಯನಗಳೆ । ಅ । ನಂಗಗಿದು ವೇಳೆ ॥ ಅನುಪಲ್ಲ ॥ ಅನ್ನವುದಕ ತೊರೆದೆ ಬಣ್ಣದೊಸ್ತ್ರವ ಮರೆದೆ । ಬಿನ್ನಣದಿ ಇಡುವಾ ತೊಡುವಾ । ಹೊನ್ನ ವಸ್ತುವ ಜರಿದೆ । ಸಣ್ಣವಳ ಮಾಡಿ । ಆರನ್ನೆಯಳ ಕೂಡಿ । ಯೆನ್ನ ಮೇಲೆ ಕೋಪದಿಂದ ಸಣ್ಣನುಡಿಗಳಾಡಿ । ಕಣ್ಣ ತೆರೆದು ನೋಡಿ । ಕಾಠಿನ್ಯ ರೂಪವ ತಾಳಿ । ಮಣ್ಣ ಕೆದರೀಡಾಡಿ । ದುರು । ಳನ್ನ ಉದರವ ತೋಡಿ । ಬಲಿ । ಯನ್ನು ದಾನವ ಬೇಡಿ । ತಾ । ತನ್ನೊಳು ಕಡದಾಡಿ । ಅ । ರಣ್ಯವಾಸವ ಮಾಡಿ । ಪುರ । ಹೆಣ್ಣುಗಳನೆ ಕೂಡಿ । ಬಲು । ಬಣ್ಣಗೆಟ್ಟೋಡಾಡಿ । ಕಲಿ । ಯನ್ನು ಸಂಹರ ಮಾಡಿ ॥ ೧ ॥ ಯುಗಳಸ್ತನಗಳ ಮೇಲೆ । ಒಳ್ಳೆ । ಮುಗುಳು ಮಲ್ಲಿಗೆ ಮಾಲೆ । ಬಗೆ । ಬಗೆ ಅಲಂಕಾರದಿ । ಸೊಗಸಿಲಿದ್ದ ವೇಳೆ । ಖಗ ವಾಹನ ಬಂದುಯೆನ್ನ । ಬಿಗಿದಪ್ಪುವೆನೆಂದ । ನಗುತ ಮಾತಾನಾಡಳಿ ವಳು ಸುಗುಣೆಯಲ್ಲವೆಂದ । ನಿಗಮ ಚೋರನ ಕೊಂದ । ನಗವ ಬೆನ್ನಿ ಲಿತಂದ । ಜಗವ ಸಲಹುವೆನೆಂದ । ಬಗೆದು ಕಂಬದಿ ಬಂದ । ಚಿಕ್ಕ ಮಗುವಿನಂದದಿ ನಿಂದ । ಯಾತ್ರೆಗಳ ಮಾಡೇನೆಂದ । ಅನ್ನಗಳ ಒಲ್ಲೆ ನೆಂದ । ಬೆಣ್ಣೆಗಳ ಕದ್ದುತಿಂದ । ನಗುತ ಬತ್ತಲೆನಿಂದ ತಾ । ಸಿಗದೆ ಓಡುವೆನೆಂದ ॥ ೨ ॥ ನಾರಿ ಈಗ ನಾನು । ಮುರಾರಿಯ ಕಂಡೆನು । ವಾರಿಜಾಕ್ಷ ಬಾರೆಯೆಂದು । ಶಿರವ ಬಾಗಿದೆನೆ ॥ ಮಾರನಯ್ಯ ಜಾಣೆ

ಯೆನ್ನ । ನೋರೆ ನೋಡಿದನೆ । ಜಾರನಾರಿಯಿವಳೆಂದು ತಾ ಶೇರದೆ ಪೋದನೆ ॥ ನೀರೊಳಗಡಗಿ ತಾನು ಮೋರೆ ಮುಚ್ಚಿದಾನೆ । ಕೋರೆ ತೋರಿದನೆ। ಅ।ಘೋರ ರೂಪಾದನೆ। ಬ್ರಹ್ಮ।ಚಾರಿಯಂತಾದನೆ। ಕ್ಷತ್ರಿ। ಯರ ತರಿದನೆ । ವಾರುಧಿಯ ದಾಟಿದನೆ । ಬಲು। ಜಾರನೆನಿಸಿದನೆ । ನಾರೇರ ವ್ರತವಳಿದನೆ । ಕುದುರೆ। ಯೇರಿದ ಶ್ರೀಕೃಷ್ಣನೆ ॥ ೩ ॥ ಶ್ರೀಃ ॥

೪೮. ರಾಗ ಪುನ್ನಾಗವರಾಳಿ, ಅಟತಾಳ.

ಪುಟ್ಟಿದೆ ಭುವಿಯಲ್ಲಿ ಬಲು ದಿನಗಳು ದೇವ । ಪುಟ್ಟಿಸಬೇಡ ಯೆನ್ನ ॥ ॥ ಪಲ್ಲ ॥ ಪಟ್ಟಾಭಿರಾಮನೆ ಪರಮ ಪುರುಷನೆ । ಘಟ್ಯಾಗಿ ನಿನ್ನ ಪಾದ ಗಳ ನಂಬಿದೆನೊ ದೇವಾ ॥ ಅನುಪಲ್ಲ ॥ ಎಂಭತ್ತನಾಲ್ಕು ಲಕ್ಷಗಳೆಂಬ ಜೀವರ ಯೋನಿಗಳಲಿ ಬಂದೆನಾ । ಕುಂಭಿನಿಯೊಳು ಪುಟ್ಟಿ ಬಹು ಪಾಪಂಗಳ ಮಾಡಿ । ಕುಂಭಿಪಾತಕದಿ ಬೆಂದೆನೊ । ಅಂಬುಜ ಮಿತ್ರನ ಸುತನಾಳುಗಳ ಕೈಯು । ಅಮಿತ ಯಾತನೆಗೊಂಡೆನೊ । ಅಂಬುಜ ನಾಭ । ಅಖಿಳ ಸುರರೊಡೆಯ । ಆರ್ತಾರ್ತಿಹರನೆಂದು ಬೇಡಿದೆ ನಾನು ॥ ೧ ॥ ಜೇನಿನೊಳು ಬಿದ್ದ ನೊಣನಂತೆ । ಸತಿಸುತ ಜನಪ ಬದ್ಧ ನಾದೆನೊ । ಮಿನು ಮಾಂಸದ ಆಸೆಗೆ ಹೋಗಿ । ಸಿಕ್ಕಿದಂತೆ ಮೋಸಹೋ ದೆನೊ । ನಾನು ಬರಿದೆ ಏಣವು ಕಿಂಕಿಣಿ ಧ್ವನಿಗೆ ಮರುಳಾದ ತೆರನಂತೆ। ಇಳೆಯೊಳಗೆ ಪಂಕಾದೆನೊ । ಯೇನೆಂಬೆ ದಾಸನ ಕೋಡಗನಂದದಿ ಯೆಲ್ಲರಿಗಾಗಿ ನಾ । ಕುಣಿದೆ ಜನರ ಮುಂದೆ ॥ ೨ ॥ ಕಾಯ ಪೋಷಣೆ ಗಾಗಿ । ಹೇಯಕರ್ಮಂಗಳ ಕಾಲಕಾಲ ಮಾಡಿದೆನೊ । ಬಾಯಮಾತಿಗಳ ರಕ್ಷಣೆಯ ಮಾಡಿ । ಅವರಿಂದ ಜಾಗರೂಕನಾದೆನೊ । ಭಯರಹಿತ ನಾಗಿ ಗುರುಹಿರಿಯರ । ಪಾದ ಭಜನೆಮಾಡದೆ ಪೋದೆನೊ । ಕಾಯ ಜನಯ್ಯನೆ । ಸಿರಿ ಕೃಷ್ಣದೇವನೆ । ಕಾಯಬೇಕೆನ್ನಪರಾಧಗಳನೆಲ್ಲ ॥ ೩ ॥

೪೯. ರಾಗ ಪೂರ್ವಿ, ಝಂಪೆತಾಳ.

ನೀನೆ ವರಗುರು ಮುಖ್ಯಪ್ರಾಣ । ನಿರಂತರವು ನಂಬಿದೆನು ॥ ಪಲ್ಲ ॥ ನಿಖಿಳ ಗುಣಪೂರ್ಣ ಜಾಣೆ ಕೋಮಲೆ ಭಾರತೀಶ । ಸಕಲ ಪ್ರಾಣಿಗಳ

ಹೃದಯದಲಿ ವಾಸ ಸುರೇಶ ॥ ಅನುಪಲ್ಲ.॥ ವಾತಸುತನಾಗಿ ರಘುನಾಥ ಪ್ರಿಯ । ದೂತ ಬಲು ಯೂಥ ಲಂಕೆಯ ಪೊಕ್ಕು । ಖ್ಯಾತಿಯನೆ ಪಡದಿ । ಸೀತೆಗುಂಗುರವಿತ್ತು ॥ ವೀತಿಹೋತ್ರಗೆ ಪರಮ ಪ್ರೀತನೆನಿಸಿ । ದಾತ ದಿತಿಜಾತರಿಗೆ ಭೀತಿಕರ ॥ ೧ ॥ ಲಂಡಕೀಚಕ ಬಕನ ಮಂಡೆ ಯನೆ ಒಡದು । ಉ । ದ್ದಂಡ ಮಗಧೇಶನ ದಂಡವನು ಶೀಳಿ ॥ ಲಂಡ ಕೌರವರಶಿರ ಚೆಂಡಾಡಿ ಪ್ರಬಲ ರಣ । ಮಂಡಲದಿ ಚಂಡರಿಪು ಬಂಡ ರನು ದಂಡಿಸಿದ ॥ ೨ ॥ ಸಾಂಗದಲಿ ಮಧ್ವಮತದಂಗವನು ಏರ್ಪಡಿಸಿ। ಕಂಗೆಟ್ಟ ಕುಮತ ದುಸ್ಸಂಗವನೆ ಅಳಿದು ॥ ಗಂಗೆಪಿತ ಕೃಷ್ಣ ಪದ ಭೃಂಗ ಮೂರ್ಜಗದೊಳಗೆ । ತುಂಗ ಭವಭಂಗ ದಯಾಪಾಂಗ ಯತಿ ಪುಂಗವನೆ ॥ ೩ ॥ ಶ್ರೀಃ ॥

೫೦. ರಾಗ ಕಾಂಬೋಧಿ, ಆದಿತಾಳ.

ಉಕ್ಕುವ ತುಪ್ಪದಿ ಕಯ್ಯ । ನಿಕ್ಕುವೆನಯ್ಯ ॥ ಪಲ್ಲ ॥ ಚಿತ್ರಧರ ಪರ ಮಾತ್ಮ । ನೊಬ್ಬನಲ್ಲದಿಲ್ಲವೆಂದು ॥ ಅನುಪಲ್ಲ ॥ ಪರಮಾತ್ಮನೆ ಗತಿ ಯೆಂದು ಕರಿಮೊರೆ ಇಡಲು ಕೇಳಿ । ನೆರೆದ ಬೃಂದಾರಕರೆಲ್ಲ । ಪೊರೆದರೆ ಬಂದು ಕರೆದಲೊಪ್ಪುವ ಮುಕ್ತಿಗೆ । ಕನ್ನಡಿಯ ನೋಡಲೇಕೆ । ಭರದಿ ಗಜೇಂದ್ರನ ಕಾಯ್ದ ಹರಿಯೆ ಪರದೈವವೆಂದು ॥ ೧ ॥ ಮತಾಂತರ ದಿಂದದ್ವೈತವೆಂದು । ವಾತವನು ಗುದ್ದಿ ಕೈನೋಯಲೇಕೆ । ಏತತ್ಸ ರ್ವಾಣಿಯೆಂಬೊ ಗೀತಾರ್ಥವ ತಿಳಿದು । ಜ್ಯೋತಿರ್ಮಯನ ಕಿರೀಟಸು ತನಂತರ್ಯಾಮಿ ಯೆಂದು ॥ ೨ ॥ ತಾನೆ ಪರಬ್ರಹ್ಮನೆಂಬೊ । ಮನು ಷ್ಯಾಧಮನು ತನ್ನ । ಜ್ಞಾನಹೀನನಾಗಿ ಲೋಕ । ದಾನವನೆಂಬು ವನು । ಭಾನುಕೋಟಿ ತೇಜೋತ್ತಮ । ಪರತರ ಶ್ರೀಹರಿಯೆಂಬೊ । ಜ್ಞಾನದ ಸೋಪಾನನಿಧಿ ಸಭೆಯಲ್ಲಿ ॥ ೩ ॥ ತಪ್ಪುವಚನಗಳೆಂದು । ತತ್ತ್ರ ರಗೊಂಬುವದೇಕೆ । ತಪ್ಪು ಶಾಸ್ತ್ರಂಗಳೋದಿ ದೇಹದಂಡಿಸಲೇಕೆ ॥ ಕಲ್ಪಕಲ್ಪಾಂತರದಿ ವಟಪತ್ರಶಯನನೆಂದು । ಮುಪ್ಪುಮೊದಲಿಲ್ಲದ ಮುಕುಂದನೆ ಪರದೈವವೆಂದು ॥ ೪ ॥ ಶಕ್ತಿಶೂನ್ಯನೆಂದು । ಸಂಶಯ

ಪಡುವದೇಕೆ ಕೃತ್ಯದಿಂ ನೋಡಲು । ವಿಷ್ಣುವೊಬ್ಬನೆ ಹತ್ತಾರು ಸಾವಿರ ಗೋಪಿಕಾಸ್ತ್ರೀಯರನಾಳ್ದ । ನಿತ್ಯ ಬ್ರಹ್ಮಚಾರಿಯಾದ ಶ್ರೀಕೃಷ್ಣನಲ್ಲದಿಲ್ಲ ವೆಂದು ॥ ೫ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೫೧. ರಾಗ ಸುರುಟಿ, ಅಟತಾಳ.

ರಂಗಯ್ಯ ಮನೆಗೆ ಬಂದರೆ ಅಂತ । ರಂಗದಿ ಗುಡಿಕಟ್ಟಿ ಕುಣಿವೆನೊ ॥ ॥ ಪಲ್ಲ ॥ ಎಳೆತುಲಸಿಯ ವನಮಾಲೆಯು । ಹೊಳೆವ ನೀಲದ ಪೈಥಾಳವು ॥ ಪೊಳೆವ ಪಂಜರದ ಗಿಣಿಯಂತೆ ನಮ್ಮಂ । ಗಳಕೆ ಬಂದ ಭಾಗ್ಯವ ನೋಡೆ ॥ ೧ ॥ ಬಾಡಿದ ಮಾವು ಪಲ್ಲವಿಸಲು ಯೆಲ್ಲಿ । ನೋಡಲು ಜಗವು ಪುಲ್ಲೈಸಲು ॥ ಮಾಡಿದ ಮನದ ಪಾಪಗಳೆಲ್ಲ । ಎತ್ತ । ಲೋಡಿತು ಹರಿಬಂದ ಭರದಿಂದ ॥ ೨ ॥ ಬಿಸಿಲು ಬೆಳದಿಂಗಳಾದವು ತ । ಮಸು ಹೋಗಿ ಉದಯವಾಯಿತು ನೋಡೆ ॥ ವಸುದೇವ ಸುತ ನಮಗೊಲಿದರೆ ಅಲ್ಲಿ । ವಿಷ ಹೋಗಿ ಅಮೃತವಾಯಿತು ನೋಡೆ ॥ ॥ ೩ ॥ ಹಾವು ನೇವಳವಾಯಿತು ಅಲ್ಲಿ । ದಾವಾನಲ ತಂಪಾಯಿತು ॥ ಬೇವು ಸಕ್ಕರೆಯಾಯಿತು ನಮ್ಮ । ದೇವಕಿಸುತ ಬಂದರೆ ನೋಡೆ ॥ ೪ ॥ ಜಾಣೇರರಸ ಕೇಳು ರಂಗನು । ತನ್ನ । ಸೇರಿದವರ ಬೆನ್ನ ಬಿಡನಮ್ಮ ॥ ಏನಾದರು ನಮ್ಮನಗಲನೆ । ನಮ್ಮ । ಮಾನಾಭಿಮಾನಾದೊಡೆಯ ಶ್ರೀಕೃಷ್ಣ ॥ ೫ ॥ ಶ್ರೀಃ ॥

೫೨. ರಾಗ ರೇಗುಪ್ತಿ, ರೂಪಕತಾಳ.

ನಿನ್ನ ಮಗನೇನೆ ಗೋಪಿ ಗೋಪ್ಯಮ್ಮ ॥ ಪಲ್ಲ ॥ ಚನ್ನರ ಚೆಲುವ ಶ್ರೀ ಉಡುಪಿನ ಕೃಷ್ಣರಾಯ ॥ ಅನುಪಲ್ಲ ॥ ಮುಂಗುರುಳು ಮುಂದಲೆಗೆ ಭಂಗಾರದರಳೊಲೆ । ರಂಗುಮಾಣಿಕದ ಹೊಸ ಉಂಗುರವನಿಟ್ಟು ॥ ಪೊಂಗೆಜ್ಜೆ ಕಾಲ್ಗಡಗ ಘುಲು ಘುಲು ಘುಲುಕೆನುತ । ನ । ಮ್ಮಂಗಳದೊಳಾಡುತಿಹ ಈ ಮುದ್ದು ಕೃಷ್ಣಬಾಲಾ ॥ ೧ ॥ ಕಟವಾಯಿ ಬೆಣ್ಣೆ ಕಾಡಿಗಿ

ಕಣ್ಣು ಕಟಿಸೂತ್ರ । ಪಟ್ಟವಾಳಿ ಕೌಪೀನ ಕೊರಳಲ್ಲಿ ಪದಕ ॥ ಸಟೆ ಇಲ್ಲ ಬ್ರಹ್ಮಾಂಡ ಹೃದಯದೊಳಿಂಬಿಟ್ಟ । ವಿಟವಿಟಯೋಡುತಿಹನೀಮುದ್ದು ರಂಗಾ ॥ ೨ ॥ ಹರಿವ ಹಾವನೆ ತಂದು ಹೆಡೆ ಹಿಡಿದು ಸಿಲಿಸುವ । ಕರುವಾಗಿ ಆಕಳ ಮೊಲೆಯ ತಿಂಬ ॥ ಅರಿದಾಗಿ ನೋಡಿದರೆ ಅಂತರಂಗ ಸ್ವಾಮಿ । ಧರೆಯೊಳಂಬುಧಿ ತೀರದುಡುಪಿಯ ಶ್ರೀಕೃಷ್ಣ ॥ ೩ ॥

೫೩. ರಾಗ ಪೂರ್ವಿ, ಆದಿತಾಳ.

ನಿನ್ನ ನೋಡಿ ಧನ್ಯನಾದೆನೊ । ಹೇ ಶ್ರೀನಿವಾಸ ॥ ಪಲ್ಲ ॥ ನಿನ್ನ ನೋಡಿ ಧನ್ಯನಾದೆ । ನೆನ್ನ ಮನದಿ ನಿಂತು ಸುಪ್ರ । ಸನ್ನ ದಯಮಾಡಿ ನೀನು । ಮುನ್ನಿನಂತೆ ಸಲಹಬೇಕು ॥ ಅನುಪಲ್ಲ ॥ ಲಕ್ಷ್ಮೀರಮಣ ಪಕ್ಷಿವಹನ । ಕಕ್ಷ ನಿನ್ನದಲ್ಲೆ ಪಾಂಡು ॥ ಪಕ್ಷ ದೈತ್ಯರ ಶಿಕ್ಷ । ರಕ್ಷಿಸೆನ್ನ ಕಮಲಾಕ್ಷ ॥ ॥ ೧ ॥ ದೇಶದೇಶವನ್ನು ತಿರುಗಿ । ಆಶೆ ಬದ್ಧನಾದೆ ಸ್ವಾಮಿ ॥ ಪಾಶ ನನ್ನದಲ್ಲ ಜಗ । ದೀಶ ಕಾಯೊ ವಾಸುದೇವ ॥ ೨ ॥ ಕಂತುಜನಕ ಕೇಳೊಯೆನ್ನ । ಅಂತರದ ಸೇವೆಯನ್ನು ॥ ಅಂತರವಿಲ್ಲದೆ ಸಲಹಬೇಕು । ಹೊಂತಕಾರಿ ಮುದ್ದು ಕೃಷ್ಣ ॥ ೩ ॥ ಶ್ರೀಃ ॥

೫೪. ರಾಗ ಶಂಕರಾಭರಣ, ಆದಿತಾಳ.

ಹಿಂದೆ ಇಂದು ಮುಂದೆ ಎಂದೆಂದಿಗು । ಬಂಧು ನಮಗೆ ಗೋವಿಂದನೆ ಕಾಣಿರೊ ॥ ಪಲ್ಲ ॥ ತನುಮನ ಕರಣ ಭೋಗಂಗಳ ನಿರ್ಮಿಸಿ । ಅನಿಮಿಷರನ್ನು ಪ್ರೇರಕರ ಮಾಡಿ ॥ ದಿನದಿನದಲಿ ಬಪ್ಪ ಎಡರುಗಳ ತಪ್ಪಿಸಿ । ದನುಜಾರಿ ನಮ್ಮನು ಪೊರೆವ ಕಾರುಣ್ಯಾದಿ ॥ ೧ ॥ ಹೊತ್ತು ಹೊತ್ತಿಗೆ ಬಪ್ಪ ದೋಷ ರಾಶಿಯ ನೋಡಿ । ಮತ್ತೆ ಯಮ ದೂತರು ಎಳವಾಗಲು ॥ ಮತ್ತೆ ಪಾಪಂಗಳು ಸ್ಮರಣೆ ಮುಂದೋಡಿಸಿ । ತೆತ್ತಿಗನಂದದಿ ಪೊರೆವ ಕರುಣದಿ ॥ ೨ ॥ ಭವದ ಬೇಗೆಯಿಂದ ತೆಗದೆತ್ತಿ ತನ್ನಯ । ನವವಿಧ ಭಕುತಿರಸವನುಣಿಸಿ ॥ ಸವಿಯಾದ ಸುಖವಿತ್ತು ಪಕ್ಷದೊಳಿಟ್ಟುತ । ನ್ನವನೆಂದು ಸಲಹುವ ಕರುಣದಿ ಕೃಷ್ಣಯ್ಯ ॥ ೩ ॥ ಶ್ರೀಃ ॥

೫೫. ರಾಗ ಕಾಂಬೋಧಿ, ಝಂಪೆತಾಳ.

ನಾನೆಲ್ಲಿ ಜ್ಞಾನಿಯು ನಾನೆಲ್ಲಿ ಸುಜನಾ । ಹೀನ ವಿಷಯಗಳೆಂಬ ಶ್ವಾನನಂತಿರುವೆ ॥ ಪಲ್ಲ ॥ ಮೂತ್ರದ ಮನೆಗಾಗಿ ಗಾತ್ರಬಳಲಿಸಿ ಮದನ । ಸೂತ್ರ ಬೊಂಬೆಯುಯೆನಿಸಿ ನೇತ್ರದಿಂದ ॥ ಪಾತ್ರದವರ ನೋಡಿ ಸ್ತೋತ್ರಮಾಡುತ ಹಿಗ್ಗಿ । ರಾತ್ರಿಹಗಲು ಕೆಟ್ಟವಾರ್ತೆಯಲ್ಲಿರುವೆ ॥ ೧ ॥ ಧನದಾಶೆ ಘನವಾಗಿ ಅಣುಮಹ ಕಾರ್ಯದೊಳು । ಸೆಣಿಸಿ ದಣಿಯಲು ತೃಣವು ದೊರೆಯದಿರಲು ॥ ಮನೆ ಮನೆ ಬಾಯ್ದೆರೆದು ಶುನನಂತೆ ದಿನಗಳೆವೆ । ಮನುಜ ಪಶುವಿಗೆ ಇನ್ನು ಮುನಿಯೆಂಬೆಯೆಂತೋ ॥ ೨ ॥ ನಾಲಿಗೆಯ ರುಚಿಯಿಂದ ಸಾಲದಾಯಿತು ಬಯಕೆ । ಕಾಲ ಕಾಲಕೆ ನೆನೆಸಿ ಹಾಳಾದರು ॥ ಶೀಲಗಳ ಕಳಕೊಂಡು ಚಾಲುವರಿಯುತ ಪರರ । ಆಲಯದ ಉಚ್ಛಿಷ್ಟ ಮೇಲಾದ ಸವಿಯು ॥ ೩ ॥ ಸ್ನಾನ ಧ್ಯಾನವನರಿಯೆ ಸಾನುರಾಗದಿ ಭಕ್ತಿ । ಖೂನವಿಲ್ಲದ ಡಂಭ ಮೌನಿಯೆನಿಸಿ ॥ ನಾನಾ ವಿಷಯ ಮನದಿ ನಾನೆನೆಸುವೆ ನಿತ್ಯ । ಏನಾದರು ಕಷ್ಟ ಕಾಣದಂತಿರುತಿಪ್ಪೆ ॥ ೪ ॥ ಪತಿತರೊಳು ಎನ್ನಂಥ ಪತಿತರೊಬ್ಬರ ಕಾಣೆ । ಗತಿಯು ನೀನಲ್ಲದೆ ಅನ್ಯರಿಲ್ಲ ॥ ಪತಿತ ಪಾವನನೆಂಬೊ ಬಿರುದುಂಟುಮಾಡುವ । ಕ್ಷಿತಿಪತಿ ಶ್ರೀಕೃಷ್ಣರಾಯ ನೀನಹುದು ॥ ೫ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೫೬. ರಾಗ ಧನಾಸಿ, ಆದಿತಾಳ.

ಗೋವರ್ಧನ ಗಿರಿಧರ ಪಾಹಿ । ಸಿರಿಧರ ಗಿರಿಧರ ಶ್ರೀಧರ ಪಾಹಿ ॥ ॥ ಪಲ್ಲ ॥ ಮಧ್ವತೀರ್ಥವಾಸಾ । ಪದ್ಮಾಲಯಾಧೀಶ ॥ ಹೃದ್ಯಾನನ ಮೂರುತಿ ಪಾಹಿ ॥ ೧ ॥ ತಂತ್ರಸಾರಸ್ಥಿರ । ಮಂತ್ರ ಸುಪೂಜಿತ ॥ ಮಂತ್ರಾಲಯ ಮೂರುತಿ ಪಾಹಿ ॥ ೨ ॥ ರಜತಪೀಠವಾಸಾ ರಾಜಕಿರಿವೇಶಾ । ರಾಜಾನನ ಮೂರುತಿ ಪಾಹಿ ॥ ೩ ॥ ವಕ್ರತುಂಡ ಪಿತ ಶಕ್ರಮುಖಾರ್ಚಿತ ॥ ವಕ್ತ್ರಾನನ ಮೂರುತಿ ಪಾಹಿ ॥ ೪ ॥ ವಾಸುದೇವ ಸರ್ವರ । ಶ್ರೀಷ್ಟದಾಯಕ । ಕಂಸಾಂತಕ ಸಿರಿಕೃಷ್ಣ ಪಾಹಿ ॥ ೫ ॥ ಶ್ರೀಃ ॥

೫೭. ರಾಗ ಸಾವೇರಿ, ಅಟತಾಳ.

ಘಟಿಕಾಚಲ ವಾಸಿಯ ನೋಡಿ । ಶಿಷ್ಟರು ಕೂಡಿ । ಇಷ್ಟವ ಬೇಡಿ ॥ ॥ ಪಲ್ಲ ॥ ಚತುರ್ಭುಜ ಮುಖ್ಯಪ್ರಾಣನೆಂದೆನಿಸೀ । ಚತುರಾಧಿಪತಿ ಯಿತ್ತಧಿಕನಿಸೀ ॥ ಚತುರತನದಿ ನಮ್ಮ ಕಡೆಹಾಯಿಸಿ । ಚತುರ್ವಿಧ ಇಷ್ಟಾರ್ಥವ ಕರೆಸೀ ॥ ೧ ॥ ಅಂದು ಹನುಮಂತನಾದವನೀತಾ । ಬಂದು ರಾಮರ ಸೇವಿಸಿದಾತಾ ॥ ಸಿಂಧುವನುಲ್ಲಂಘಿಸಿದಾತಾ । ಇಂದು ಮುಖಿಗೆ ಉಂಗುರ ಕೊಟ್ಟಾತಾ ॥ ೨ ॥ ದ್ವಾಪರದಲಿ ಭೀಮಸೇನನಾಗಿ । ಪಾಪಿ ಕೀಚಕನ ಕೋಪದಿ ಕೊಂದು ॥ ಶ್ರೀಪತಿ ಕೃಷ್ಣಗೆ ಶರಣೆಂದು । ನಮ್ಮ । ಪಾಪವ ಪರಿಹರಿಸುವ ಬಂದು ॥ ೩ ॥ ತ್ರೇತಾಯುಗದಿ ನೀನವತಾರೀ । ನೆನೆವರ ಹೃದಯದಲಧಿಕಾರೀ ॥ ಪೊಗಳುವರಿಗೆ ಬಹು ಸಾಕಾರೀ । ನಮ್ಮ । ಸುಲಭ ನರಸಿಂಹಗೆ ಅನುಸಾರೀ ॥ ೪ ॥ ಕಲಿಯುಗದಲಿ ಯತಿ ರೂಪನಾಗಿ । ಕುಲಹೀನ ಸಂಕರ ಮತವನೀಗೀ ॥ ಸುಲಭದಿಂದಲಿ ಸನ್ಮತವ ಬಾಗೀ । ನಮ್ಮ । ಭಳಿರೆ ಶ್ರೀಕೃಷ್ಣನ ಬಂಟನಾಗೀ ॥ ೫ ॥

೫೮. ರಾಗ ಪೂರ್ವಿ, ರೂಪಕತಾಳ.

ವಾದಿಗಳೆಲ್ಲರ ಗೆದ್ದ । ವಾದಧೀರನೆ ॥ ಪಲ್ಲ ॥ ವಾದಿರಾಜ ಗುರುರಾಯ । ಸಾಧುಪ್ರಿಯ ಗೇಯಕಾಯ ॥ ಅನುಪಲ್ಲ ॥ ಮುಂದುವರಿದು ಬಂದ ವಾದಿ ಯವೃಂದಗಳನು । ಒಂದು ಮಾತಿನಿಂದ ಅವರ ಮುಂದೆ ಕೆಡಿಸಿ ॥ ಕುಂದಿಸಿ ಕುಂದಿಸಿ ನಂದದಿ ನಲಿವ ॥ ೧ ॥ ಮತ್ತರಾದ ಜನರ್ಗಳೆಲ್ಲ ಸುತ್ತ ಮುತ್ತ ನೋಡುತಿರಲು । ಮತ್ತೆ ಅವರ ನೆತ್ತಿಯ ತೋಣೆದು । ಹತ್ತಿದೆ ಮುತ್ತಿನ ಗದ್ದಿಗೆಯನ್ನು ॥ ೨ ॥ ನಿನಗೆ ಎಣೆಗಾಣೆ ನವದಿನಪತೇಜ ಮಧ್ವಮುನಿಯ । ಮನದ ಒಡೆಯ ಮುದ್ದು ಶ್ರೀಕೃಷ್ಣನ । ನೆನೆದು ನೆನೆದು ತನುವನಲ್ಲವೆ ॥ ೩ ॥ ಶ್ರೀಃ ॥

೫೯. ರಾಗ ಪೂರ್ವಿ, ರೂಪಕತಾಳ.

ವರ್ಣಿಸಲಳವೆ ಗುಣಸಾಂದ್ರನ ॥ ಪಲ್ಲ ॥ ಕರ್ಣಜನಕ ಕೋಟಿತೇಜ ಶ್ರೀಶಭಜಕ ಜಯ ಮುನೀಂದ್ರನ ॥ ಅನುಪಲ್ಲ ॥ ಮಧ್ವಶಾಸ್ತ್ರ ದುಗ್ಧ

ನಿಧಿಯು । ಬುದ್ಧಿಯೆಂಬ ಮಂದರಗಿರಿಯು । ಶುದ್ಧಸೂತ್ರ ನೇತ್ರದಿಂದ । ಬದ್ಧವ ಮಾಡಿ ಪಿಡಿದು ಕಡೆದು । ಶುದ್ಧ ಯುಕುತಿ ಸುಧೆಯತೆಗದನಾ । ಶಿಷ್ಯಜನಕೆ । ಶ್ರದ್ಧೆಯಿಂದ ಅದನು ಎರದನ । ಕ್ರೋಧದಿಂದ । ಕ್ರುದ್ಧವಾದಿ ದೈತ್ಯರ ಗೆಲಿದನ । ಜಯ ಮುನೀಂದ್ರನ ॥ ೧ ॥ ಮಾಸಿಪಿಯರ ಶೀಲರಾದ । ಮಾನವರನು ಜರೆದು ಹರಿಯು । ಧ್ಯಾನದಲ್ಲಿ ನಿಲ್ಲಿಸಿ ಒಲಿಸಿ । ಹಾನಿಯಿಲ್ಲದ ಮುಕುತಿ ಪಡೆದ । ಜ್ಞಾನ ಮತವಜಗಕೆ ಸಾರ್ದನ । ಶಿಷ್ಯಜನಕೆ । ಸಾನುರಾಗದಿ ತತ್ವ ಪೇಳ್ದನ । ಜಯ ಮುನೀಂದ್ರನ ॥ ೨ ॥ ಸರಸದಿಂದ ಮೂರುಯೇಳು । ವಿರಸ ದುಷ್ಟ ಭಾಷ್ಯಗಳನು । ಗೆಲಿದಕ್ಷೋಭ್ಯತೀರ್ಥಯತಿಪ । ಕರ ಸಂಜಾತ ರಮ್ಯಚರಿತ । ಶರಣಜನರ ಪೊರವ ಯತಿಪನ । ಶಿಷ್ಯಜನರ । ದುರುಳ ಮೋಹತಿಮಿರ ದಿನಪನ । ನಮ್ಮ ಪರಮ । ಗುರು ಶ್ರೀಕೃಷ್ಣನ ಪಾದಭಜಕನ । ಜಯ ಮುನೀಂದ್ರನ ॥ ೩ ॥ ಶ್ರೀಃ ॥

೬೦. ರಾಗ ತೋಡಿ, ಆದಿತಾಳ.

ಕಂದನಿಗೆ ಕಾಲಿಲ್ಲವಮ್ಮ । ಪುಟ್ಟಿ । ದಂದಿನಿಂದಿಗೂ ಈ ಕಂದನಿಗೆ । ಅಂಬೆಗಾಲು ಬಿಡನಮ್ಮ ॥ ಪಲ್ಲ ॥ ಮಳೆಹೊಳೆಯು ಕತ್ತಲೊಳು ತರಳ ಮಗ ಬೇರನೊ । ಕಳೆಯುಳ್ಳ ಮುಖಕ್ಕೀಗ ಗ್ರಹ ಸೋಂಕಿತೋ ॥ ಎಳೆಯ ಬೆಳದಿಂಗಳೊಳು ಎತ್ತಣ ದೃಷ್ಟಿತಾಗಿತೋ । ಲಲನೆ ವಿಾಸಲು ಹಾಲು ಮರೆದೆರೆದ ಪರಿಯೊ ॥ ೧ ॥ ಬೆಣ್ಣೆಯ ಮೆಲ್ಲುತ ತಾ ಬಳಲಿ ಬಾಯಾರಿದನೊ । ಉಣ್ಣೆ ಪೂತನಿ ಮೊಲೆಯ ವಿಷಸೋಂಕಿತೊ ॥ ಅಣ್ಣ ಪಾಪಿಯ ಭಯಕೆ ಅಂಜಿ ಕಾಲ್ಕಟ್ಟನೊ । ಹೆಣ್ಣು ದೈತೇಯರೆ ಕಾಲಲ್ಲಿ ಬಂದ ಸರಕೋ ॥ ೨ ॥ ಧುರವಿಜಯ ಕೃಷ್ಣರಾಯಗೆ ನಿಮ್ಮ ಚಿಕ್ಕ । ಹರದೇರಂದಿನ ತೋರ ಬಂದ ಪರಿಯೋ ॥ ಧರೆಗಧಿಕನೆಂದೆನಿಪ ವಿದ್ಯಾನಗರ ಒಳಿತೆಂದು ಉದ್ದ । ಗಿರಿಯಿಂದ ಬಂದ ಮುದ್ದು ಬಾಲಕೃಷ್ಣನಮ್ಮ ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೬೧. ರಾಗ ಕಲ್ಯಾಣಿ, ಅಟತಾಳ.

ಪ್ರಾಣ ನೀನಹುದೊ । ಗುರು ಮುಖ್ಯ । ಪ್ರಾಣ ನೀನಹುದೊ ॥ ॥ ಪಲ್ಲ॥ ರಾಣಿ ಭಾರತಿರಮಣಗೆಣೆಗಾಣೆ ತ್ರಿಭುವನದೊಳಗೆ ಸಕಲ। ಪ್ರಾಣಿಗಳ ಹೃದಯದಲಿ ಮುಖ್ಯಪ್ರಾಣ ನೀನೆಲೆ ಪ್ರಾಣನೆನಿಸಿದ ॥ ಅನುಪಲ್ಲ ॥ ಧೀರ ನೀನಹುದೋ । ವಾಯುಕು। ಮಾರ ನೀನಹುದೊ ॥ ಕೋರಿದರಿಗೆ ಮನೋವ್ರತಗಳ । ಭಾರಿಭಾರಿಗೆ ಕೊಡುವೆನೆನುತಲಿ। ಕ್ಷೀರ ನದಿಯ ತೀರ ನೆಲಸಿದ । ಮಾರುತಾವತಾರ ಹನುಮ ॥ ೧ ॥ ದಿಟ್ಟ ನೀನಹುದೊ । ಬೆಟ್ಟವ ತಂ । ದಿಟ್ಟವ ನೀನಹುದೊ ॥ ಅಟ್ಟಿ ಬಡದು ಆ ಅಕ್ಷಕುಮಾರನ । ಕುಟ್ಟಿ ಬೇಗದಿ ಕೆಡಹಿ ಲಂಕೆಯ । ಸುಟ್ಟು ಸೀತೆಗೆ ಉಂಗುರವನೆ। ಕೊಟ್ಟ ಮೂಜಗ ಜಟ್ಟಿ ಹನುಮಾ ॥ ೨ ॥ ಚಂಡನು ನೀನಹುದೋ । ದುರಿತ ಮಾ । ರ್ತಾಂಡನು ನೀನಹುದೊ ॥ ಅಂದುಗೆ ಕಿರುಘಂಟೆ ಉಡಿಯಲಿ । ಚಂದದಲಿಯೋಲಾಡುತಿರಲಾ । ನಂದದಲಿ ಶ್ರೀಕೃಷ್ಣನಂಘ್ರಿ । ಪುಂಡರೀಕಕೆ ಕೈಮುಗಿದಾ ॥ ೩ ॥ ಶ್ರೀಃ ॥

೬೨. ರಾಗ ಬಿಲಾರಿ, ಅಟತಾಳ.

ಕಡಗೋಲ ತಾರೆನ್ನ ಚಿನ್ನ । ನೊಸ । ರೊಡದರೆ ಬೆಣ್ಣೆಬಾರದು ಮುದ್ದು ರಂಗಾ ॥ ಪಲ್ಲ ॥ ಅಣ್ಣನೊಡಗೊಂಡು ಬಾರೈಯ । ಸವಿ। ಬೆಣ್ಣೆಯ ಮುದ್ದೆ ಮೆಲುವಿರಂತೆ ॥ ಬಣ್ಣಸರವನ್ನು ನಿನ್ನ ಕೊರಳೊಳು ಹಾಕುವೆ । ಚಿಣ್ಣರೊಡನೆ ಆಡಕಳುಹುವೆ ರಂಗಾ ॥ ೧ ॥ ಪುಟ್ಟ ಬಚ್ಚಿಯ ತಂದು ನಿನ್ನ । ಚಿನ್ನದ । ತೊಟ್ಟಿಲ ಕಾಲಿಗೆ ಕಟ್ಟಿಸುವೆ ॥ ಬಟ್ಟಲುತುಂಬಿ ಸಕ್ಕರೆ ನಿನಗೀವೆ । ಕಟ್ಟಾಣಿಮುತ್ತಿನ ಮಣಿಯ ಅರಗಿಣಿಯೆ ॥ ೨ ॥ ಬಡವರ ಭಾಗ್ಯನಿಧಿಯೆ । ಗೋಕುಲದಯ್ಯಯೆ । ನ್ನೊಡೆಯ ಮಾಣಿಕದರಳೆ ॥ ಕಡು ಮುದ್ದು ಉಡುಪಿಯ ಶಿರಿಕೃಷ್ಣಯ್ಯ । ಪೊಂ । ಗೊಡದೊಳು ದುಡುಕುಮಾಡುವರೇನೋ ರಂಗಾ ॥ ೩ ॥ ಶ್ರೀಃ ॥

೬೩. ರಾಗ ಮುಖಾರಿ, ತ್ರಿಪುಟತಾಳ.

ದಾಸರೆಂದರೆ ಪುರಂದರದಾಸರಯ್ಯ ॥ ಪಲ್ಲ ॥ ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವ ॥ ಅನುಪಲ್ಲ ॥ ಗ್ರಾಸಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು । ದಾಸನೆಂದು ತುಳಸಿಮಾಲೆ ಧರಿಸಿ ॥ ಬೇಸರಿಲ್ಲದೆ ಅವರ ಕಾಡಿಬೇಡಿ ಬಳಲಿಸುತ । ಕಾಸುಗಳಿಸುವ ಪುರುಷ ಹರಿದಾಸನೇ ॥ ॥ ೧ ॥ ಡಂಬಕದಿ ಹರಿಸ್ಮರಣೆಮಾಡಿ ಜನರ ಮುಂದೆ । ಸಂಭ್ರಮದಿ ತಾನುಂಬೊ ಊಟಬಯಸಿ ॥ ಅಂಬುಜೋದ್ಭವ ಪಿತನ ಆಗಮಗಳರಿಯದೆ । ತಂಬೂರಿಯ ಮೀಟಿದವ ಹರಿದಾಸನೇ ॥ ೨ ॥ ಯಾಯಾವ ರನೆಮಾಡಿ ವಿಪ್ರರಿಗೆ ವ್ಯಾಪ್ಯಾನ್ನ । ಪ್ರಿಯದಲಿ ತಾನೊಂದು ಕೊಡದ ಲೋಭಿ ॥ ಮಾಯಸಂಸಾರದಲಿ ಮಮತೆ ಹೆಚ್ಚಾಗಿಟ್ಟು । ಗಾಯನವ ಮಾಡಿದವ ಹರಿದಾಸನೇ ॥ ೩ ॥ ಪಾತಕನತಿರನಂತೆ ಪದಗಳ ತಾ ಬೊಗಳಿ । ಕೂಟಜನರಾ ಮನ ಸಂತೋಷಬಡಿಸಿ ॥ ಗೂಟನಾಮಗಳಿಟ್ಟು ಕೊಟ್ಟರಿಯಾ ತಾನೆನುತ । ತಾಟತೂಟಕ ಮಾಡಿದವ ದಾಸನೇ ॥ ೪ ॥ ನೀತಿಯಲ್ಲವನರಿತು ನಿಗಮವೇದ್ಯನ ನಿತ್ಯ । ವಾತಸುತನಲ್ಲಿಹನ ವರ್ಣಿಸುತಲೀ ॥ ಗೀತನರ್ತನದಿಂದ ಕೃಷ್ಣನ ಪೂಜಿಸುವ । ಪೂತಾತ್ಮ ಪುರಂದರಾದಾಸರಿವರಯ್ಯ ॥ ೫ ॥ ಶ್ರೀಃ ॥

೬೪. ರಾಗ ಕೇದಾರಗೌಳ, ಝಂಪೆತಾಳ.

ಶ್ರೀವದನ ಕುಮುದ ಚಂದ್ರ । ಸಚ್ಚಿದಾನಂದಮಯ । ಸೇವಕ ಪ್ರಿಯ ವಿಜಯಕೃಷ್ಣ ॥ ಪಲ್ಲ ॥ ದೇವಕಿನಂದನ ಸನಾತನ ಪರಬ್ರಹ್ಮ । ದೇವಾದಿದೇವ ಶ್ರೀಕೃಷ್ಣ ॥ ಅನುಪಲ್ಲ ॥ ಗೋಕುಲಾರಾಧ್ಯ ಗೋವಿಂದ ನಿತ್ಯಾತ್ಮವರ । ಗೋಕುಲ ಸುಗಂಭೀರ ಕೃಷ್ಣ ॥ ಗೋಕುಲಾನಂದಕರ ಬಾಲ ಭಾಸ್ಕರಕೋಟಿ । ಗೋಕುಲಮಯಾನಂತಕೃಷ್ಣ ॥ ೧ ॥ ಹಂಸವಾಹನ ಜನಕ ಗೌರೀಶನುತ ಪರಮ । ಹಂಸ ನಿರ್ದೋಷ ಶ್ರೀಕೃಷ್ಣ ॥ ಹಂಸ ಸಂಕುಲ ಮನೋಧ್ಯಾನಗಮ್ಯ ಮುಕುಂದ । ಹಂಸಲೋಚನ ರಾಮಕೃಷ್ಣ ॥ ೨ ॥ ನಾಗೇಂದ್ರಶಯನ ದಾಮೋದರ ಹೃಷೀಕೇಶ । ನಾಗೇಂದ್ರ

ವರದ ಶ್ರೀಕೃಷ್ಣ ॥ ನಾಗಾರಿವಾಹನ ನಿರಾಲಸ್ಯ ವಿಷ್ಣುದ್ರುತ । ನಾಗಾದಿ ಪದ್ಮ ಶ್ರೀಕೃಷ್ಣ ॥ ೩ ॥ ಗಾಂಗೇಯಚೇಲ ಭೂಷಿತ ಜಗದ್ಭರಿತ ಜಿತ । ಗಾಂಗೇಯಮಿತ್ರ ಶ್ರೀಕೃಷ್ಣ ॥ ಗಾಂಗೇಯ ನುತಿಪಾತ್ರ ಪರಮ ಪಾವನ ಗಾತ್ರ । ಗಾಂಗೇಯನಾಥ ಶ್ರೀಕೃಷ್ಣ ॥ ೪ ॥ ಉಡುಪಿ ಪುರವಾಸ ಸಜ್ಜನ ಪೋಷ ಪರಮೇಶ । ಉಡುರಾಜವದನ ಶ್ರೀಕೃಷ್ಣ ॥ ಜಡಜಮಾರ್ಗಣ ಕೋಟಿಲಾವಣ್ಯ ಮಧ್ವಪತಿ । ಕಡಗೋಲ ಪಿಡಿದ ಶ್ರೀಕೃಷ್ಣ ॥ ೫ ॥

೬೫. ರಾಗ ಪಂತುವರಾಳಿ, ಅಟತಾಳ.

ಸಾರಿರೋ ಡಂಗುರವ ॥ ಪಲ್ಲ ॥ ನಮ್ಮ । ಭಾರತಿರಮಣ ವಾಯುವೆ ಜಗದ್ಗುರುವೆಂದು ॥ ಅನುಪಲ್ಲ ॥ ಭೋರಿಡುತಲಿಪ್ಪ ಸಮುದ್ರವ ಲಂಘಿಸಿ । ಧಾರುಣಿಸುತೆಯ ದುಃಖವ ಕಳೆದು ॥ ಚೋರರಾವಣನಂದನಾನಳಗಾಹುತಿಯಿತ್ತು । ಶ್ರೀರಾಮಗೆರಗಿದಾತನೆ ಪ್ರಸಿದ್ಧನೆನುತ ॥ ೧ ॥ ಕುಶಲದಿ ಕುಂತಿಗೆ ಮಗನಾಗಿ ಭೀಮನೆ । ನಿಸಿ ಆ ಕೌರವ ಕಪಟದಲಿ ಕೊಟ್ಟ ॥ ವಿಷದ ಕಜ್ಜಾಯವ ತಿಂದು ಜೀರ್ಣಿಸಿಕೊಂಡ । ವಿಷಮ ಬಲಾಢ್ಯ ಮಾರುತಿ ಬದ್ಧವೆಂದು ॥ ೨ ॥ ಕಲಿಯುಗದಲಿ ಮಧ್ಯಗೇಹಾಭಿಧಾನದ । ತೌಳವ ಬ್ರಾಹ್ಮಣನಲಿಯವತರಿಸಿ ॥ ಒಲಿದು ಅಚ್ಯುತಪ್ರೇಕ್ಷಾಚಾರ್ಯರ । ಕೈಲಿ ಆಶ್ರಮವಗೊಂಡ ಪೂರ್ಣಪ್ರಜ್ಞನೆಂದು ॥ ೩ ॥ ಖೂಳ ಸಂಕರ ಕೊಲ್ಲಬೇಕೆಂದು ಕಪಟದಿ । ಕಾಳಾಹಿ ವೇಷದಿ ಬಂದಿರಲು ॥ ಕಾಲಪ್ರಳಯದ ಸಿಡಿಲು ಬಂದೆರಗಿದಂತೆ । ಕಾಲಿಂದ ತುಳಿದಾತನಸುವಗೊಂಡನುಯೆಂದು ॥ ೪ ॥ ಬಳಿಕಾ ಇಪ್ಪತ್ತೊಂದು ದುರ್ಭಾಷ್ಯಂಗಳ । ಕಳೆದು ವೇದಾಂತ ಶಾಸ್ತ್ರಗಳಲೀ ॥ ಉಳುಹಿದ ವೈಷ್ಣವ ಮತವನಿವಗೆ ನಮ್ಮ । ಸಲಹುವ ಮಧ್ವೇಶ ಕೃಷ್ಣ ಪ್ರಿಯನೆಯೆಂದು ॥ ೫ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೬೬. ರಾಗ ಸೌರಾಷ್ಟ್ರ, ಆದಿತಾಳ.

ಮಂಗಳಂ ಜಯ ಮಂಗಳಂ ॥ ಪಲ್ಲ ॥ ಗೋಕುಲದಲಿ ಪೊಂಗೊಳಲೂದುತ । ಗೋವಳೆಯರ ಕೂಡೆ ನಲಿದಾಡುತ । ಶಕಟನ ತುಳಿದು

ಕಾಳಿಂಗನ ಮರ್ದಿಸಿ । ಭಕತರ ಪೊರೆವ ಗೋಪಾಲಕೃಷ್ಣಗೆ ॥ ೧ ॥ ಸರಸಿಜಮಿತ್ರ ಸುತನ ಕಾಯ್ದು । ಸುರಪತಿ ಸುತನ ಬಾಣದಿ ತರಿದು । ಚರಣ ನಖಾಗ್ರದಿ ಸ್ಪರ್ಶಿಸಿ ಶಿಲೆಯನ್ನು । ತರುಣಿಮಾಡಿದ ಶ್ರೀರಾಮಚಂದ್ರಗೆ ॥ ೨ ॥ ಶಂಕರಾಭರಣಶಯನನಿಗೆ । ಪಂಕಜೋದ್ಭವನ ಪಡೆದವಗೆ ॥ ಸಂಖ್ಯೆ ಇಲ್ಲದ ದೈತ್ಯಸಂಘಗಳ ತರಿದಗೆ । ಶಂಖಚಕ್ರವ ಪಿಡಿದ ಶ್ರೀಕೃಷ್ಣಗೆ ॥ ೩ ॥ ಶ್ರೀಃ ॥

೬೭. ರಾಗ ಪೂರ್ವಿ, ಅಟತಾಳ.

ಮಂಗಳ ಮುಖ್ಯಪ್ರಾಣೇಶಗೆ ॥ ಪಲ್ಲ ॥ ಜಯ । ಮಂಗಳ ವಾಯುಕುಮಾರಗೆ ॥ ಅನುಪಲ್ಲ ॥ ಅಂಜನದೇವಿಯ ಕಂದಗೆ ಮಂಗಳ । ಕಂಜಾಕ್ಷ ಹನುಮಂತಗೆ ಮಂಗಳ । ಸಂಜೀವನವ ತಂದಾತಗೆ ಮಂಗಳ । ಸಜ್ಜನ ಪರಿಪಾಲಗೆ ಮಂಗಳ ॥ ೧ ॥ ಅತಿ ಬಲವಂತ ಶ್ರೀಭೀಮಗೆ ಮಂಗಳ । ಪ್ರತಿಮಲ್ಲರ ಗೆಲಿದಗೆ ಮಂಗಳ । ಸತಿಯ ಶೀರೆಯ ಸೆಳೆವ ದೈತ್ಯನ ಕೊಂದ । ಕ್ಷಿತಿಯೊಳಪ್ರತಿಮಲ್ಲಗೆ ಮಂಗಳ ॥ ೨ ॥ ಸೀತಾದೇವಿಯ ಬಾಲಗೆ ಮಂಗಳ । ಶ್ರೀರಾಮರ ಬಂಟಗೆ ಮಂಗಳ ॥ ಗೋಪಾಲಕೃಷ್ಣನ ಪೂಜೆಯ ಮಾಡುವ । ಗುರು ಮಧ್ವಮುನಿರಾಯಗೆ ಮಂಗಳ ॥ ೩ ॥ ಶ್ರೀಃ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

ಶ್ರೀವ್ಯಾಸರಾಯರ ಕೀರ್ತನೆಗಳು ಸಂಪೂರ್ಣ.

॥ ಶ್ರೀಕೃಷ್ಣಾರ್ಪಣಮಸ್ತು ॥

ಶ್ರೀಃ

॥ ಶ್ರೀಗುರುಭ್ಯೋ ನಮಃ ॥

॥ ಶ್ರೀಗೋಪಾಲಕೃಷ್ಣಾಯ ನಮಃ ॥

ಶ್ರೀವ್ಯಾಸರಾಯರ ಸುಳಾದಿಗಳು.

೧. ಸುಷುಪ್ತಿ ಸುಳಾದಿ.

ಧ್ರುವತಾಳ ॥ ಆಲದೆಲೆಯಲ್ಲಿ ಮಲಗಿದಂದು ನಿನ್ನ । ಲಾಲಿಯೆಂದು ಲಾಲಿಸಿದರಾರೈ । ಮತ್ತೆ ಕ್ಷೀರಾಬ್ಧಿಯಲೊರಗಿದಂದು ನಿನ್ನ । ತೃಪ್ತಿತೃಪ್ತಿಯೆಂದು ತೂಗಿದರಾರೈ । ಆ ಜಲಧಿಯ ದರ್ಭಶಯನದಲ್ಲಿ ನಿನ್ನ । ಜೋಜೋಯೆಂದು ಪಾಡಿದರಾರೈ ॥ ಆರಮೆ ಸ್ತುತಿಮಾಡಿ ಪೊಗಳುವಂತೆ । ಶ್ರೀರಮಣ ನಿನ್ನ ಪಾಡಬಲ್ಲೆನೆ ॥ ನಾರದ ಮಹತೀಯ ಮೀಟುವಂತೆ । ಸ । ಮೀರಜ ಸ್ವರವೆತ್ತಿ ಪಾಡುವಂತೆ । ಶ್ರೀರಮಣ ನಿನ್ನ ಪೊಗಳಬಲ್ಲೆನೆ ನಾನು । ಕಣ್ಣುಮುಚ್ಚು ಪಾಲೂಡುವೆನೆಂತೆನೆ ಗೋಪಿ । ಕಣ್ಣುಮುಚ್ಚಿ ಕೃಷ್ಣ ಕಿವಿಯಾಂತು ನಗುತಿದ್ದ ॥ ೧ ॥

ಮಟ್ಟೆತಾಳ ॥ ತನ್ನುರದ ಮೋಹದರಸಿಯಾ । ಚೆನ್ನ ಚೆಲುವ ಸರಸಂಗಳಿಂದ । ಇನ್ನು ನಿದ್ರೆಬಾರದೆ । ನಿನ್ನ ಪೊಕ್ಕಳ ಬೊಮ್ಮನ ನಾಲ್ಕು ವದನದ ವೇದಘೋಷಣೆಗಳಿಂದ । ಇನ್ನು ನಿದ್ರೆಬಾರದೆ । ನಿನ್ನುದರದ ಜಗದುರುಪಿನಿಂದ ಇನ್ನು ನಿದ್ರೆಬಾರದೆ । ನಿನ್ನ ಭಕತರು ಕರೆವ ಚೀರಾಟದಿಂದ । ಇನ್ನು ನಿದ್ರೆಬಾರದೆ ॥ ಇಂತೆಂಬ ಗೋಪಿದೇವಿಯ ಮಾತಿಗೆ ಕೃಷ್ಣ ನಾಚಿ ಕಣ್ಣುಮುಚ್ಚಿದಾ ॥ ೨ ॥

ರೂಪಕತಾಳ ॥ ಶುಭಗುಣಂಗಳ ಕಣಿಯೆ ಜೋಜೋ । ಭಕತರ ಚಿಂತಾಮಣಿಯೆ ಜೋಜೋ । ಮುನಿಹೃದಯಾಂಬುಜ ಹಂಸ

ಜೋಜೋ। ಸರ್ವದೇವೋತ್ತಂಸನೆ ಜೋಜೋ। ಮುಕುತಿ ಕಾರಣ ಪುಣ್ಯನಾಮನೆ ಜೋಜೋ। ಶ್ರೀಕೃಷ್ಣ ವೈಕುಂಠ ಧಾಮನೆ ಜೋಜೋ ॥ ೩ ॥

ಝಂಪೆತಾಳ ॥ ಪರಬೊಮ್ಮನೆ ಯೆನ್ನ ತಮ್ಮ ಬಾಯೆಂಬ। ಅಜನ ತಂದೆಯೆನ್ನ ಅಪ್ಪಾ ಬಾಯೆಂಬ। ಹರಿಯೆ ನೋಡೆಲೊ ಎನ್ನ ಮರಿಯೆ ಮುದ್ದುಯೆಂಬ। ಗೋಪಿದೇವಿಯ ನೋಂಪು ತಾನೆಂತೊ। ಇದಕೆ ಬಂದಪ್ಪಿ ಮುದ್ದಿಸಿ ಒಲಿವ। ಮುದ್ದು ಮೈಯ ಕೃಷ್ಣ ನಿನ್ನ ದಯೆ ತಾನೆಂತೆಂತೊ ॥ ೪ ॥

ತ್ರಿಪುಟತಾಳ ॥ ಶ್ರೀಲೋಲುಪಲಾಲಿ ಗೋಪಾಲಕ ಜಾರ ಲಾಲಿ। ಮೂಲಕಾರಣ ಮುಕ್ತರೊಡೆಯನೆ ಲಾಲಿ। ಗೋಪಾಲ ಬಾಲ ಶ್ರೀಕೃಷ್ಣಯ್ಯನೆ ಲಾಲಿ ॥ ೫ ॥

ಅಟತಾಳ ॥ ಒಮ್ಮೆ ನೆನೆವರ ಋಣದ ಚಿಂತೆ। ಆವಾಗ ಭಕತರು ಕರೆದಾರೆಂಬ ಚಿಂತೆ। ನಿರುಪಾಧಿಕ ಭಕ್ತರ ಹಂಗಿನ ಚಿಂತೆ। ತನ್ನ ನಿಜವೆಲ್ಲಿ ಅರಿವರೊ ಎಂಬ ಚಿಂತೆ। ಇನಿತು ಚಿಂತೆಯುಳ್ಳ ನಿನಗೀ ನಿದ್ರೆ। ಇನ್ನು ಬಾರದೆ ಯೆಂದರೆ ಕೃಷ್ಣ ನಗುವಾ ॥ ೬ ॥

ಏಕತಾಳ ॥ ಬಾಲಲೀಲೆಯು ಜೇಕಾದರೆ। ಮೂಲೋಕ ಬಾಯೊಳು ತೋರುವನೆ ॥ ಮಕ್ಕಳಾಟಕೆ ಬಳ್ಳಿದನಾದಡೆ। ರಕ್ಕಸರಿಗೆಲ್ಲ ಕಕ್ಕಸನಪ್ಪನೆ। ಚಿಕ್ಕತನವು ನಿನಗಳವಡುವುದೆ। ಯೆನ್ನ। ದಿಕ್ಕುದೆಸೆಯು ಶ್ರೀಕೃಷ್ಣ ರಕ್ಷಿಸೊ ತಂದೆ ॥ ೭ ॥

ಜತೆ ॥ ಚೆನ್ನಕೃಷ್ಣನ ಮುದ್ದಿಗೆ ಗೋಪ। ಕನ್ನೆಯರೆಲ್ಲರು ತನ್ಮಯವಾಗಿಪ್ಪರು ॥ ೮ ॥ ಶ್ರೀಃ ॥

೨. ಶ್ರೀದೇವಿ ಸುಳಾದಿ.

ಧ್ರುವತಾಳ ॥ ಶ್ರೀದೇವಿಯ ಶ್ರೀಮಂತ ಸಿಂಧೂರಗಳಿಂ ಅತಿ ಅತಿ ರಂಜಿತವಾದ। ಶ್ರೀದೇವಿಯ ಕಸ್ತೂರಿ ತಿಲಕದಿಂ ಅತಿ ಅತಿ ವಾಸಿತವಾದ। ಶ್ರೀಕುಚಕುಂಭ ಕುಂಕುಮದಿಂ ಅತಿ ಅತಿ ಶೋಭಿತವಾದ। ಶ್ರೀದೇವಿಯ ಕರಕಂಜ ಸುರೇಖೆಗಳಿಂದ। ಅತಿ ಅತಿ ಅಂಕಿತವಾದ।

ಶ್ರೀವನಜಭವಾದಿ ಹೃತ್ಸರೋವರದಿಂ ಸರಸಿಜದಂತೆ ನಿಲಿಸಿಪ್ಪ । ಸನಕಾದಿ ಹೃದಯಾಂಬುಜದಿಂ ಹಂಸೆಯಂತೆ ನಲಿಯುತಿಪ್ಪ । ಮನುಜೋತ್ತಮರ ಹೃದಯಾಂಬರದಿಂ ಮಿಂಚಿನಂತೆ ಹೊಳಹೊಳೆವ । ಶಿರಿಕೃಷ್ಣನ ಚರಣಕಮಲ ಶರಣಾಯೆನಗೆಂದೆಂದು ॥ ೧ ॥

ಮಟ್ಟೆತಾಳ ॥ ನಿಧಿಯ ಮೇಲೆ ಇದ್ದು ನಿಧಿಯನರಿಯದಂತೆ । ತನ್ನ ಕಂಠಮಣಿಯ ತಾ ಮರೆದಂತೆ । ಕಣ್ದೆರೆಯದ ಹಸುಳೆ ತಾಯನರಿಯದಂತೆ । ಎನ್ನಲಿ ಹೊಂದಿಪ್ಪ ನಿನ್ನನರಿಯದಂತೆ । ನಿನ್ನ ತೋರಿದರೆನಗೆ ನಿನ್ನ ದಾಸರು ಶಿರಿಕೃಷ್ಣ ॥ ೨ ॥

ರೂಪಕತಾಳ ॥ ಜನನಮರಣ ಮಾರ್ಗದಲ್ಲಿ ತೊಳಲಿ ಬಳಲಿ ಸ್ವರ್ಗ । ನರಕಕ್ಕೇರಿ ಮಮತೆಯೆಂಬ ಭಾರವ ಪೊತ್ತು । ಬಳಲಿ ತಾಪತ್ರಯ ತಾಪದಿಂ ಬೆಂದೆನಾಗಿ । ನಖಚಂದ್ರಿಕೆ ಗಂಗಾ ಶೀತಕರದಿಂ ತಂಪಾದ । ಶಿರಿಕೃಷ್ಣನ ಚರಣ ನೆಳಲು ನೆಲೆಮನೆಯಾಯಿತು ॥ ೩ ॥

ತ್ರಿಪುಟತಾಳ ॥ ಕಾಮಿತ ಫಲವೀವ ಬಹುಶಾಖೆಗಳಿಂ। ಕೋಮಲಕರ ಚರಣಯುಗಳ ಪಲ್ಲವದಿಂ । ಹೊಸ ಕುಸುಮದಿಂದಾದ ಮಕರಂದದಿಂ । ಶ್ರೀಸತಿ ಕಲ್ಪಲತಾ ವಿಲಾಸಗಳಿಂ । ಶುಕ ಮುಖ್ಯ ದ್ವಿಜಗಣದಿಂದ ಸೊಗಸಿಪ್ಪ । ಶಿರಿಕೃಷ್ಣ ಕಲ್ಪತರುವಾ ಸಾರಿದೆವಯ್ಯ ॥ ೪ ॥

ಅಟತಾಳ ॥ ಕರುಣಾ ಜಲದಿಂ ಚರಣಾಬ್ಜ ಗಾಳಿಯಿಂ । ವರನಾಭಿ ಸುಳಿಯಿಂ ಪರಮಹಾಸಕೂಲದಿಂ । ಮೆರೆವ ಅಗಾಧ ಶ್ರೀಕೃಷ್ಣನ ಸರೋ । ವರದಿ ಮುಳುಗಿ ಕಳದೆನೊ ಭವತಾಪವಾ ॥ ೫ ॥

ಆದಿತಾಳ ॥ ಜಿಜ್ಞಾಸುವಿಗೆ ಜ್ಞಾನಕಾರಣ । ಜ್ಞಾನಿಗೆ ಅಪರೋಕ್ಷ ಜ್ಞಾನಸಾಧನ । ಅಪರೋಕ್ಷಿಗೆ ಅಧಿಕಾನಂದಜನಕ । ಮುಕ್ತಿಗೆ ತಾನೆ ಫಲರೂಪ । ಶಿರಿಕೃಷ್ಣನ ಪಾದಸೇವೆ । ಇದರ ತೂಕಕ್ಕೆ ಸಾಕೆ ಕೈವಲ್ಯ ॥ ೬ ॥

ಏಕತಾಳ ॥ ಪಾಪಾಟವಿಗೆ ದಾವಾನಲ। ಕಾವಮಾನಿಲ ಕಾಲಾಂಬುದ । ಮೋಹಾಂಬುದ ಝುಂಝಾನಿಲ । ಕೋಪಾನಿಲ ಭುಜಂಗಮ । ಶಿರಿಕೃಷ್ಣನ ಪದಸೇವೆ ಭವಭುಜಂಗ ಗರುಡಾ ॥ ೭ ॥

ಜತೆ ॥ ಶಿರಿಕೃಷ್ಣ ನಿನ್ನ ಪಾದನಖ ಚಂದ್ರಿಕೆಯಲ್ಲಿ । ಸಾಕೆನ್ನ ಚಿತ್ತ ಚಕೋರಾವಾದ ಧರ್ಮ ॥ ೮ ॥ ಶ್ರೀಃ ॥

೩. ಕಾಮ ಸುಳಾದಿ.

ಧ್ರುವತಾಳ ॥ ಕಾಮವೆಂಬ ಹೆಚ್ಚಿನ ಕಾಡುಗಿಚ್ಚೊಂದು ಕಡೆಯಲ್ಲೆನ್ನ ಸುಡುತಲಿದೆ । ಕ್ರೋಧವೆಂಬ ಹೆಬ್ಬುಲಿ ಹಸಿದು ಒಂದು ಕಡೆಯಲೆನ್ನ ತಿನ್ನುತಿದೆ । ಲೋಭವೆಂಬ ಮಹರಕ್ಕಸನೊಂದು ಕಡೆಯಲೆನ್ನ ಹೀರುತ್ತೈದಾನೆ । ಮೋಹವೆಂಬ ಕಗ್ಗತ್ತಲೆಯು ಕವಿದು ದಿಕ್ಕುದೆಶೆಯೇನೂ ತಿಳಿಯದು । ಮದವೆಂಬ ಮದಸೊಕ್ಕಿದ ಕಾಡಾನೆ ಒಂದು ಕಡೆಯಲೆನ್ನ ಸೀಳುತಿದೆ । ಮತ್ಸರವೆಂಬ ಮಹಾವಿಷದ ಚೇಳೊಂದು ಕಡೆಯಲೆನ್ನ ಊರುತಿದೆ । ಈ ಪರಿಯ ಭಯವೆಂಬಡವಿಯಲಿ ನಾನಾಪರಿ ಶತ್ರುಗಳೊಳಗಾದೆ । ಶ್ರೀಪತಿ ಪರಮ ದಯಾನಿಧೇ ದೀನನಾಥನೆನ್ನೊಡೆಯ ರಕ್ಷಿಸು ಶಿರಿಕೃಷ್ಣ ॥ ೧ ॥

ಮಟ್ಟತಾಳ ॥ ಆಗದ ಹೋಗದ ಮನೆಮನೆವಾರತೆ ಬೇರೊಬ್ಬ । ಲೋಗರಿಗಾಗಿ ಹೊತ್ತು ಭವಾಟವಿಯಲ್ಲಿ । ರಾಗವೆಂಬ ಘನ ತೃಷೆಯಿಂದ ಬಾಯೊಣಗಿ । ಭೋಗವೆಂಬ ಮೃಗತೃಷ್ಣೆಗೋಡುತ । ಬೇಗೆಯಿಂದ ಬಿದ್ದೆನೊ ನರಕಕೂಪದಲಿ । ನಾಗಶಯನ ಯೆನ್ನನುದ್ಧರಿಸೊ ಶಿರಿಕೃಷ್ಣ ॥ ೨ ॥

ರೂಪಕತಾಳ ॥ ಇಂದ್ರಿಯಂಗಳೆಂಬ ಕಳ್ಳರೈವರು । ಬಂಧಿಸಿ ತಮ್ಮ ವಿಷಯಕೊಯ್ದೆನ್ನ । ಕಂದಿಸಿ ಜ್ಞಾನವೆಂಬ ದೃಷ್ಟಿಯಾ । ಯೆಂದೆಂದಿನ ಧರ್ಮಧನವನೊಯ್ದರು ಬಂಧಿಸಿ। ಇಂದಿರೇಶ ಲೋಕಪತಿ ಶಿರಿಕೃಷ್ಣ ಯೆನ್ನ ತಂದೆ ॥ ೩ ॥

ಝಂಪೆತಾಳ ॥ ನಾನಾ ಗರ್ಭವೆಂಬ ಕಂಪಿನಲೊಮ್ಮೊಮ್ಮೆ। ಹೀನೋಚ್ಚ ಜನ್ಮವೆಂಬ ತಗ್ಗು ಮಿಟ್ಟೆಯಲೊಮ್ಮೆ । ಸ್ವರ್ಗವೆಂಬ ಪರ್ವತಾಗ್ರದಲೊಮ್ಮೊಮ್ಮೆ । ದುರ್ಗತಿಯೆಂಬ ಕಮರಿಯಲಿ ತಾನೊಮ್ಮೆ। ಬಂದೆ ಭವಾಟವಿಯಲ್ಲಿ ನಿನ್ನ ಪಾದಾರ । ವಿಂದದ ನೆಳಲಲಿರಿಸೆನ್ನ ಶಿರಿಕೃಷ್ಣ ॥ ೪ ॥

ತ್ರಿಪುಟತಾಳ ॥ ಹರಿದಾಸರನೆರವಿಲ್ಲದೆ । ಹರಿಸೇವೆಯೆಂಬ ಪಥವ ಕಾಣದೆ । ಹರಿಪದವೆಂಬ ಜನುಮ ಭೂಮಿಯು । ಪರಿದು ದೂರದಲ್ಲಿ ತಪ್ಪಿ । ಮರುಳಾದೆ ಭವಾಟವಿಯಲ್ಲಿ । ಶಿರಿಪತಿ ನಿನ್ನ ಸೇರಿಸೊ ಶಿರಿಕೃಷ್ಣ ॥ ೫ ॥

ಅಟತಾಳ ॥ ಮಾಯೆಯೆಂಬ ದುಷ್ಟರಾಯ । ಮಾನವೆಂಬ ಬಿನುಗು ಮಂತ್ರಿ । ಇಂದ್ರಿಯಂಗಳೆಂಬ ತಿಂದೋಡುವ ಪರಿವಾರ । ಬಿಗಿದು ಕಟ್ಟಿಯೆನ್ನ ಹಗೆಗಳಿಗಿತ್ತರು । ಕಾಮಾದಿ ಹಗೆಗಳ ಶಿಕ್ಷಿಸಿ ರಕ್ಷಿಸಯ್ಯ ಶಿರಿಕೃಷ್ಣ ॥ ೬ ॥

ಆದಿತಾಳ ॥ ತಾಪತ್ರಯವೆಂಬ ದಾವಾನಲದಿಂದ । ಪಾಪರ ಸಂಗವೆಂಬ ವಿಷವೃಕ್ಷದಿಂದಾ । ಕಾಪಥವೆಂಬ ಬಹು ತಪ್ಪುಗತಿಗಳಿಂದ । ಕೋಪವೆಂಬಟ್ಟುವ ಕಾಳೋರಗದಿಂದ । ಈ ಪರಿಯಲಿ ನೊಂದೆ ಭವಾಟವಿಯಲಿ । ನೀ ಪಾಲಿಸಲುಬೇಕೆನ್ನನು ಶಿರಿಕೃಷ್ಣ ॥ ೭ ॥

ಜತೆ ॥ ಅತ್ತಿತ್ತ ಸುತ್ತಿ ಭವಾಟವಿಯಲಿ ನೊಂದೆ । ಇತ್ತಬಾರೆಂದು ನಿನ್ನ ಹತ್ತಿರಿರಿಸೊ ಸಿರಿಕೃಷ್ಣ ॥ ೮ ॥ ಶ್ರೀಃ ॥

೪. ಹರಿಚರಿತೆಶ್ರವಣ ಸುಳಾದಿ.

ಧ್ರುವತಾಳ ॥ ಹರಿಚರಿತೆಶ್ರವಣ ದುರಿತ ತುಚ್ಛವನ । ಹರಿನಾಮ ಕೀರ್ತನೆ ಭವರೋಗಕ್ಕೆ ಸಿದ್ಧೌಷಧ । ಹರಿಚರಣ ಸ್ಮರಣ ಮುಕ್ತರೊಳಗರ್ಪಣ । ಇಂತು ಹರಿಸೇವೆ ಅನಂತ ಫಲಸಾಧನ । ಇಂತೆಂಬುದೊಂದು ಪೆರ್ಮೆಗೆ ಹರಿಸೇವೆ ಫಲರೂಪ ಶ್ರವಣವೆ ಶುಭದ ಬೆಳಸು । ಕೀರ್ತನೆಯೇ ಆಸೀಮ ಹೆಚ್ಚಿಗೆ । ಶ್ರವಣವಚ್ಛಸುಖ ತೊಟ್ಟಿಲು ಯೆಂಬುದನುಭವ ಸಿದ್ಧಾ । ಶಿರಿಕೃಷ್ಣನ ಪಾದ ಸೇವೆಯುಲ್ಲದಿಲ್ಲ ॥ ೧ ॥

ಮಟ್ಟತಾಳ ॥ ನೆನಹಿನ ಲೇಶಮಾತುರದಿಂದಾ । ಘನಸುಖಮಯನಾಗಿ ಇಪ್ಪೆನಾವಾಗ । ತನುಭವವಳಿದು ಮೌನಿಗಳಂತೆ ಮೈಮರೆದು ಕು । ಜನಾಚಾರ ಬಳಿದು ಯೆಲೆ ನಿನ್ನನನವರತ । ನೆನೆವ ಭಕತರನು ಸುಖವಿನ್ನೆಂತೊ ಶಿರಿಕೃಷ್ಣಯ್ಯಾ ॥ ೨ ॥

ತ್ರಿಪುಟತಾಳ ॥ ಪುತ್ರಮಿತ್ರಕಳತ್ರ ವರ್ಗದಿಂದಾ । ದೇಹ ಕರ್ಮ ಜ್ಞಾನೇಂದ್ರಿಯಗಳಿಂದ । ಚಿತ್ತ ಬುದ್ಧಿ ಮನೋಹಮ್ಮೊಗ ದಿಂದ । ಪ್ರಾಣದಿಂದಾ ತನ್ಮಾತ್ರತನ್ನಿಂದ । ನೀನೆ ಪ್ರಿಯನಾಗಿ ಕೃಷ್ಣ ನಿನ್ನಯ ನೆನಹಿನ । ಬೇರೆ ಪರಮ ಸುಖವುಂಟೆ ॥ ೩ ॥

ಅಟತಾಳ ॥ ಆ ನಿನ್ನ ಧನ್ಯನಲ್ಲ ಮತ್ತೇನು ಕೊಂಡೆನು ಕೊಂಡೆನಗೆ । ಆರೇನು ಕಾರಣವಯ್ಯ । ನಾನಾ ದುರಿತ ತಾನೆ ಬಂದುದಲ್ಲ । ಶ್ರೀನಾಥ ಶಿರಿಕೃಷ್ಣನ ತಾನೇನ ನೆನೆವಿಗೆ ಬಂದನಾಗಿ ॥ ೪ ॥

ಆದಿತಾಳ ॥ ಮರಹೆ ಯೆಡರು ಮರಹೆ ಬಡತನ । ಮರಹೆ ಅವಮಾನವು ಮರಹೆ ನಷ್ಟ । ಮರಹೆ ಅಹಂಕಾರ ಮರಹೆ ನರಕ । ಮರಹೆ ಶತ್ರು ಮರಹೆ ಮೃತ್ಯು । ಮರೆಯದೆ ನಿನ್ನ ನೆನೆವಂತೆ ಮಾಡೊ ಶಿರಿಕೃಷ್ಣ ॥ ೫ ॥

ಜತೆ ॥ ಶಿರಿಕೃಷ್ಣ ನೆನಹಿನ ಸುಖವು ಲವ ಬೇಕೆಂಬವನೆ । ಮುಕುತಿಯ ಸುಖವನೆಂತೇನು ॥ ೬ ॥ ಶ್ರೀಃ ॥

೫. ದೃಢಭಕ್ತಿ ಸುಳಾದಿ.

ಧ್ರುವತಾಳ ॥ ತಾಯಿಯೆಂಬೆನೆ ನಿನ್ನ ಧ್ರುವನ ತಾಯಿ ನಿನ್ನಂತೆ ಕಾವಳೆ । ತಂದೆಯೆಂಬೆನೆ ನಿನ್ನ ಪ್ರಹ್ಲಾದನ ತಂದೆ ನಿನ್ನಂತೆ ಕಾದನೆ । ಭ್ರಾತೃವೆಂಬೆನೆ ನಿನ್ನ ವಿಭೀಷಣನ್ನ ಭ್ರಾತರ ನಿನ್ನಂತೆ ಕಾದನೆ । ಭರ್ತೃವೆಂಬೆನೆ ನಿನ್ನ ಪಾಂಚಾಲಿಯ ಭರ್ತರು ನಿನ್ನಂತೆ ಕಾದರೆ । ಪುತ್ರನೆಂಬೆನೆ ನಿನ್ನ ಉಗ್ರಸೇನನ ಪುತ್ರ ನಿನ್ನಂತೆ ಕಾದನೆ । ಮಿತ್ರಯೆಂಬೆನೆ ನಿನ್ನ ಗಜೇಂದ್ರ ಮಿತ್ರರು ನಿನ್ನಂತೆ ಕಾದರೆ । ಆವಅನಿಮಿತ್ತ ಬಂಧುವೊ ಮೇ । ಣಾವ ಕರುಣಾಸಿಂಧುವೋ । ಶಿರಿಪತಿ ಶಿರಿಕೃಷ್ಣ ನಿನ್ನ ಭಕತರಲಿ । ನಂಟುತನ ಹೊಸಪರಿಯಾಯಿತಯ್ಯಾ ॥ ೧ ॥

ಮಟ್ಟೆತಾಳ ॥ ದಾನಿಗಳರಸಗೆ ದೈನ್ಯಬಲಿ ಲಕ್ಷ್ಮಿಪತಿಗೈದೆ ಯಜ್ಞಭಿಕ್ಷತೆ ತಿರುಪೆ । ಕೈವಲ್ಯಪತಿಗೆ ಆವಿನ ಬಂಧನ । ಲೋಕ ಗುರುವಿಂಗೆ ಪುಕ್ಕಟವೆ । ಗೋಪಿಯರೊಳು ಈಸುವಿನೋದವು ನಿನ್ನ

ಭಕತರಿಗಾಗಿಯೆ । ಶ್ರೀಪತಿ ಶಿರಿಕೃಷ್ಣ ಈಸುವಿನೋದವು ನಿನ್ನ ಭಕತರಿಗಾಗಿ ॥ ೨ ॥

ರೂಪಕತಾಳ ॥ ಹಿಂದೆ ಪೂಂಗೊಳಲೂದೊಂದೊಂದು । ಧಂದಾಗೋಪಾಲ ಮೂರುತಿಯೆ ಯೆಂದು । ಒಂದುಬಾರಿ ನೆನೆದ ಕಃಬುಜೆಗೆ ಮುಕುತಿಯನಿ । ತ್ತಿಂದಡೆ ನಾನಿನ್ನ ನೆನೆವುದ ಬಿಡೆ ಶ್ರೀಕೃಷ್ಣ ಯೆಂದೆಂದಿಗೂ ಬಿಡೆ ॥ ೩ ॥

ಝುಂಪೆತಾಳ ॥ ಆಳು ನಾನಿನ್ನಾಳು ನಿನ್ನಾಳು ನಾನು । ನೀನು ತಂದೆ ನಿನ್ನ ಕಂದ ನಾನು । ಶರಣ್ಯ ನಾನಿನ್ನ ಶರಣಾಗತ ನಾನು । ಪೋವನೋವಿತ್ತಿಂತು ಕಾವಯರ್ಾರಿನ್ನು । ಶ್ರೀಪತಿ ಶಿರಿಕೃಷ್ಣ ನೀಯೆನ್ನ ಸಲಹಬಹುದೋ ॥ ೪ ॥

ತ್ರಿಪುಟತಾಳ ॥ ಕಂಸಾರಿಯೆಂದು ಸಂಸಾರ ದಾಟುವೆನೂ । ಶಿರಿಪತಿಯೆಂದು ಪಾಪಂಗಳಟ್ಟುವೆನೂ । ಕಂಜನಾಭಾಯೆಂದಂಜಿಸುವೆ ಜವನವರ । ಶಿರಿಪತಿ ಶಿರಿಕೃಷ್ಣ ನಿನ್ನ ದಾಸರ ದಾಸನಾನು ॥ ೫ ॥

ಅಟತಾಳ ॥ ಹಿಂದೆ ಅಸುರರ ಬಲಿದೆ ಬಳಲಿಸಿದೆ । ವೃಂದಾರಕರಿಂಗೆಲ್ಲ ನೀ ಸುಧೆಯನೆರೆದೆ । ಆವಾವ ಪರಿಯಲ್ಲಿ ಅಸುರರ ಬಳಲಿಸಿದೆ । ದೇವರೆಲ್ಲರನೋವೆ ಕಾಯ್ದೆ । ಆಗವೋಕ್ತದ ದೇವಂಗಳಿಗೆಲ್ಲ ನೀನೊಬ್ಬನೆ ತೆತ್ತಿಗನಲ್ಲವೆ । ಶ್ರೀಕೃಷ್ಣ ಆವಾಗ ॥ ೬ ॥

ಏಕತಾಳ ॥ ಆವಾ ಕಾಲದಲಿ ಆವಾ ದೇಶದಲಿ । ಶ್ರೀಕೃಷ್ಣ ಕಾವಂತೆ । ಬಂಧುಜನ ಕಾಯುಬಲ್ಲುದೆ ಶಿರಿಪತಿ ಶಿರಿಕೃಷ್ಣ ಆವಾವ ಕಾಲದಲಿ ॥ ೭ ॥

ಜತೆ ॥ ಅನಿಮಿತ್ತ ಬಂಧು ಈ ನಮ್ಮ ಶ್ರೀಕೃಷ್ಣ । ಎಂದೆಂದಿಗೂ ಶತ್ರು ಅಸುರರ್ಗೆ ॥ ೮ ॥ ಶ್ರೀಃ ॥

೬. ಭಕ್ತಾಧೀನ ಸುಳಾದಿ.

ಧ್ರುವತಾಳ ॥ ನಾನಾ ಯಜ್ಞದ ಹವಿರ್ಗಳಿಂದ ಕದ್ದ ಬೆಣ್ಣೆಯು ಸವಿಯೆ । ಶ್ರೀನಾರಿಮಾಡುವ ಪೂಜೆಗಳಿಂದ ಒಪ್ಪಿದಿ ಅವಲೊಳ್ಳಿತೆ ।

ಏನೆನ್ನಬಾರದೆ ನಿನ್ನಾನಂದಕ್ಕೆ ವಿದುರನೌತಣ ಮಿಗಿಲೇನಯ್ಯ ।
ಮಾನಸ ವಚನಕ್ಕಗೋಚರವಾದ ಆನಂದ ನೀನಲ್ಲದೆ । ಏನಯ್ಯ
ನಿನ್ನ ಭಕತವತ್ಸಲತನ । ಎಲೆ ಎಲೆ ಕೃಷ್ಣಯ್ಯ ನೀನೆ ಬೇಡಿಕಾಡಿ
ಯಶೋದೆಯ ಕಯ್ಯುಗೆವೆರಸಿಕೊಂಡು ನಲಿದಾಡುವೆ ಅಯ್ಯ ॥ ೧ ॥

ಮಟ್ಟತಾಳ ॥ ಶ್ರೀವರಪರಾಕು ಚಿತ್ರವಧಾರೆಂದು ನಿನ್ನ ।
ಆವಾಗಲಿ ಅಜಭವಾದಿ ದೇವರೋಲೈಸಲೂ । ದೇವ ಸಾರ್ವಭೌಮ
ನೀನುಗ್ರಸೇನಂಗೈದೆ । ವಿಜಯನ ಸಮ್ಮುಖವದೆಂದು । ಈ ದಾವಲೀ
ಲೆಯೋ ನಿನಗೆ ಭಕತವತ್ಸಲ ಕೃಷ್ಣಾ ॥ ೨ ॥

ಝಂಪೆತಾಳ ॥ ಮುನಿಮನಂಗಳು ತೊಳಲಿ ಕಾಣವು । ಅನಂತ
ವೇದದ ನೆರಹುಗೂಡಿ ನಿನ್ನ । ಚಿನುಮಯನೆ ನೀನು ಕುಬುಜೆಯನ
ರಸಿಕೊಂಡೇಕೆ ಹೋದೆ । ವನಿತೆ ಸಿರಿಯೆಂಬ ಘನತೆಯನು ಬಿಟ್ಟು ।
ನೆನೆವರಲಿ ಯೆಳೆಗಂದಿತನವೀಸು । ಘನವಲ್ಲವೆ ಎಲೆ ಎಲೆ ಶ್ರೀಕೃಷ್ಣ ॥ ೩ ॥

ಅಟತಾಳ ॥ ನಿನ್ನ ಮೂರುತಿಯನ್ನು ನೋಡಿದಡಂ । ನಿನ್ನ
ನಾಮವ ನೆನೆದಡಂ । ಘನ್ನ ಭವಬಂಧ ಪರಿವುದು । ಇಂತೆನ್ನೆ ಕಟ್ಟಿದ
ಳೆಂತೊ ನಿನ್ನ ಗೋಪಿ । ಚೆನ್ನಶ್ರೀಕೃಷ್ಣ ವಿನೋದಿಗಳರಸ ॥ ೪ ॥

ಏಕತಾಳ ॥ ದ್ವಾರಾ ಕಾಶ್ಯಪಿ ತತ್ರದ್ವಾರದಿ ದ್ರುಹಿಣಾದ್ಯರು
ನಿನ್ನನೋಲೈಸಲು । ಪ್ರಹರಿಯ ಕಾಯ್ದೆಂತೊ ಮಹಾಮಹಿಮ । ನೀಪ
ರೀಕ್ಷಿತಗೆ ಪ್ರಹರಿಯ ಕಾಯ್ದೆಂತೊ । ಮಹಾಮಹಿಮ ಭಕತರ ಆರಭಾ
ರವ ವಹಿಸುವ ವಕ್ಕಲಿಗೆ ನಮೋ ನಮೋ ಕೃಷ್ಣಯ್ಯ ॥ ೫ ॥

ಜತೆ ॥ ಚಕ್ರವರ್ತಿ ಶಾಲ್ಯನ್ನ ಶಿಶುಗಳಿಗೆಂತೆಂತು । ಭಕತರಿಗೆ
ಸುಲಭನು ನಮ್ಮ ಕೃಷ್ಣಯ್ಯ ॥ ೬ ॥ ಶ್ರೀಃ ॥

೭. ವ್ಯಾಪ್ತಿ ಸುಳಾದಿ.

ಧ್ರುವತಾಳ ॥ ತಂದೆಯಾಗಿ ತಾಯಿಯಾಗಿ । ಇಂದಿರೇಶನೆ
ಎನಗೆ ಬಂಧುವಾಗಿ ಬಳಗವಾಗಿ । ಸಿಂಧುಶಯನನೆ ॥ ಹಿಂದಾಗಿ ಮುಂ
ದಾಗಿ ಮುಕುಂದನೆ । ಎನಗೆ ಸ್ವಾಮಿಯಾಗಿ ಭೂಮಿಯಾಗಿ

ರಕ್ಕಸಾಂತಕನೆ । ಗುರುವಾಗಿ ದೈವವಾಗಿ ದೇವೋತ್ತಮನೆ । ಎನಗೆ ವಿದ್ಯೆಯಾಗಿ ಬುದ್ಧಿಯಾಗಿ ವಿದ್ಯಾಪತಿಯೆ । ದಿಕ್ಕಾಗಿ ದೆಶೆಯಾಗಿ ರಾಮಚಂದ್ರನೆ । ಎನಗೆ ಇಹವಾಗಿ ಪರವಾಗಿ ಶ್ರೀಕೃಷ್ಣನೆ ॥ ೧ ॥

ಮಟ್ಟತಾಳ ॥ ಬೊಮ್ಮನಮ್ಮ ರುಗ್ಮಿಣಿರಾಣಿ ದೇವಿಯೂ । ಪೆರ್ಮೆಯ ಅಜನು ಹೆಮ್ಮಗ । ಹಮ್ಮಿನ ರುದ್ರ ಮೊಮ್ಮಗ । ಸುಮ್ಮನ ಸರೆಲ್ಲ ಪರಿವಾರ । ನಮ್ಮ ಸ್ವಾಮಿ ಕೃಷ್ಣಯೆಂದರೆ । ಪೆರ್ಮೆಯಿಂದೊಲಿದಿಲ್ಲವೆ ॥ ೨ ॥

ರೂಪಕತಾಳ ॥ ದೂರದೊಳ್ಳಿಂದೊಮ್ಮೆ ಗೋವಿಂದ ಗೋವಿಂದ । ಅನಾಥ ಬಂಧುವೆ ದ್ವಾರಕಾವಾಸಿಯೆಂದು । ಚೀರಿದ ದ್ರೌಪದಿಗೆ ಸಾರಿದೆ ನಾನಿನ್ನ ನಂಬಿದೆ ಎಂದು ಶ್ರೀಕೃಷ್ಣ ಚೀರಿದ ದ್ರೌಪದಿಗೆ ॥ ೩ ॥

ಅಟತಾಳ ॥ ಅಂದು ವಿಷ್ಣು ಇಂದು ವಿಷ್ಣು । ಎಂದೆಂದು ವಿಷ್ಣುತಾನೆ । ಅತ್ತ ವಿಷ್ಣು ಇತ್ತ ವಿಷ್ಣು ಎತ್ತಿತ್ತ ವಿಷ್ಣುತಾನೆ । ಸ್ವಪ್ನ ಸುಷುಪ್ತಿ ಜಾಗ್ರತೆಲಿ ವಿಷ್ಣುತಾನೆ । ಸರ್ವಯಜ್ಞ ಸರ್ವಶಕ್ತಿ । ಸಾಧುಸತಿ ವಿಷ್ಣುತಾನೆ । ಓವಿನೋವಿ ಮನದಲ್ಲಿ ಕಾವ ಕೃಷ್ಣ ಇರುತಿರೆ । ಆವಾಗಲೆಲ್ಲಿಹದಾವ ಭಯ ನಿನಗೆ ಜೀವಾ ॥ ೪ ॥

ಏಕತಾಳ ॥ ಕರಿ ಹರಿಯೆನಲಾ ಸುಪ್ತಿಯ ತಳ್ಳಿ । ಶಿರಿಯ ಸಾರೆನುತ ಉರಗಮಂಚದಿಂ ಧುಮುಕಿ । ಕರವಿತ್ತ ವಿರಿಂಚನ ಕೈಲಾಗವಲ್ಲದೆ । ಭರದಿ ಹನುಮನಿತ್ತ ಹಾವಿಗೆಯ ದಾಂಟದಾಗ । ಗರುಡನೊದಗುತಿರೆ । ತಿರುಗಿ ನೋಡದ ನಿನ್ನ ಕರುಣವ ತೋರೆನಗೆ ನಮೋ ನಮೋ ಶ್ರೀಕೃಷ್ಣ ॥ ೫ ॥

ಜತೆ ॥ ನಾರಾಯಣಯೆಂದು ಮಗನ ಕರೆಯುತಿರೆ ಎನ್ನ । ಕರೆದವರಾರೆಂದು ಅಂಜದಿರೆನುತಲಿ ಅಜಮಿಳಗೆ ಶ್ರೀಕೃಷ್ಣ ॥ ೬ ॥

೮. ನಾಮಸ್ಮರಣ ಸುಳಾದಿ.

ಧ್ರುವತಾಳ ॥ ದೇಹ ಜೀರ್ಣವಾಯಿತು ಧನದ । ಸ್ನೇಹ ಜೀರ್ಣವಾಗದು । ಕಣ್ಣುಕಿವಿ ಮಂದವಾಯಿತು । ಹೆಣ್ಣು ಮಣ್ಣಿನಾಶೆಯು

ಮಂದವಾಗದು । ಕಾಲುಕೈ ಜವಗುಂದಿತು ಭೋಗದ । ಲೋಲತೆಯು ಮಂದವಾಗದು । ಜರೆ ರೋಗದಿಂದ ನೆರೆಹೊರೆ ಹೇಸಿತು । ಶರೀರದೊಳು ಹೇಸಿಕೆ ಇನಿತಿಲ್ಲ । ಪಾಪಕೋಟಿಗಳ ಮಾಡಿಹೆ । ಅನು । ತಾಪ ಮನದೊಳಿಳ್ಳನಿತಿಲ್ಲ । ಸಂದುಹೋಯಿತು ಕಾಲವೆಲ್ಲ । ಮುಂದಣ ಗತಿ ಗೈಯೆಣಿಕೆ ಇಲ್ಲ । ಅನಾದಿಯಿಂದ ನಾನಿನ್ನವನಾಗಿಹೆ । ಯೆನ್ನ ಕುಂದು ನಿನ್ನವಲ್ಲವೆ ಶ್ರೀಕೃಷ್ಣ । ಇನ್ನಾದರು ರತಿಯನಿತ್ತು ದಯದಿಂದ ಸಲಹಯ್ಯ ॥ ೧ ॥

ರೂಪಕತಾಳ ॥ ಹರಿನಾಮ ಹರಿಪಾದ ತೀರ್ಥವಿರಲು । ಹರಿದಾಸರ ಸೇವೆ ಸಂಗ ಸುಖವಿರಲು । ದುರಿತ ಭಯವೇಕೆ ನರಕದ ಭೀತಿಯೇಕೆ । ಕೇಸರಿ ಪಕ್ಕದೊಳಿರಲು ಕರಿಭಯವೇಕೆ । ದುರಿತ ತಮಕೆ ತರಣಿ ತಾನಲ್ಲವೆ । ಶ್ರೀಹರಿ ಶ್ರೀಕೃಷ್ಣನ ಸಂಬಂಧ ದುರಿತ ಭಯವೇಕೆ ನರಕದ ಭೀತಿಯೇಕೆ ॥ ೨ ॥

ತ್ರಿಪುಟತಾಳ ॥ ಯಮಕಿಂಕರರು ಭಯಂಕರವಾದಡೇನೂ । ಯಮಯಾತನದ ಬಟ್ಟೆ ಅತಿ ಕಷ್ಟವಾದಡೇನು । ಯಮಯಾತನೆ ಘೋರ ಅತಿ ತೀವ್ರವಾದಡೇನು । ಕಮಲನಾಭನ ಡಿಂಗರಿಗಂಜಿಕೆಯುಂಟೆ । ನಮೋ ನಮೋ ಶ್ರೀಕೃಷ್ಣಯೆಂದಂಜಿ ಓಡುವರು । ಯಮಭಟರು ತಮ್ಮಾಳ್ದನಾಜ್ಞೆಯಲೀ ॥ ೩ ॥

ಅಟತಾಳ ॥ ಆವನ ಚಿತ್ತ ಅಚ್ಯುತನ ನೆನೆಯದು । ಆವನ ತಲೆ ಬಲಿಬಂಧನಗೆರಗದು । ಆವನ ನಾಲಿಗೆ ಶ್ರೀಲೋಲನೆನ್ನದು । ಆನರಾಧಮ ನರಕ ಪತಿತ । ಶ್ರೀಕೃಷ್ಣನವರು ವೈಕುಂಠ ಪಥಿಕರೂ । ಆ ನರಾಧಮ ನರಕ ಪತಿತ ॥ ೪ ॥

ಏಕತಾಳ ॥ ಅಣಕದಿಂದಾಗಲಿ ಡಂಬದಿಂದಾಗಲಿ । ಸಂಗೀತದಿಂದಾಗಲಿ । ಪರಿಹಾಸ್ಯದಿಂದಾಗಲಿ । ಎದ್ದಾಗಲಿ ಯೆಡಹಿದಾಗಾಗಲಿ । ತಾಗುವಾಗ ಮತ್ತಾವಾಗಲಾಗಲಿ । ನಮೋ ನಮೋ ಶ್ರೀಕೃಷ್ಣ ಮುಕುತಿ ಕನ್ಯಾಮದುವೆ ವಾದ್ಯದ ಘೋಷಾ ॥ ೫ ॥

ಜತೆ ॥ ಸಂತತ ನಿನ್ನ ನಾಮವ ನೆನೆವರೆ । ಅಂತ್ಯಕಾಲದಲ್ಲಿ ವಿಶೇಷ ಕೊಡು ಕೃಷ್ಣ ॥ ೬ ॥ ಶ್ರೀ ॥

೯. ಉಪಾಸನಾ ಸುಳಾದಿ.

ಧ್ರುವತಾಳ ॥ ತಾಯಿ ಈ ಲೋಕಕ್ಕೆ ಶ್ರೀಹರಿ । ಕಾಯದಿಂ ಜಗವಂ ಆದಿಯೊಳಿಟ್ಟನಾಗಿ । ತಂದೆ ಈ ಲೋಕಕೆ ಶ್ರೀಹರಿ । ಅಂದೆ ಬೊಮ್ಮಾದಿಗಳ ಸೃಜಿಸಿದನಾಗಿ । ಒಡೆಯಾ ಈ ಲೋಕಕೆ ಶ್ರೀಹರಿ । ಬಿಡದೆ ರಾಮಾದಿ ರೂಪದಿಂ ಪೊರವನಾಗಿ । ಈಶಾ ಈ ಲೋಕಕೆ ಶ್ರೀಹರಿ । ವ್ಯಾಸಾದಿ ರೂಪದಿ ಜ್ಞಾನವನೀವನಾಗಿ । ಪರತತ್ವ ಈ ಲೋಕಕ್ಕೆ ಶ್ರೀಹರಿ । ವರ ಮುಕುತಿಯನೊಬ್ಬನೀವನಾಗಿ । ಗತಿ ಈ ಲೋಕಕ್ಕೆ ಶ್ರೀಹರಿ । ಶ್ರೀಪತಿ ತನ್ನ ನೆನವರಿಗಭಯವನೀವನಾಗಿ । ದೈವ ಈ ಲೋಕಕ್ಕೆ ಶ್ರೀಹರಿ । ಸೇವ್ಯನಾಗಿ ತಮ್ಮ ತಮ್ಮ ಧರ್ಮಗಳಿಂದ । ಸರ್ವ ಈ ಲೋಕಕ್ಕೆ ಶ್ರೀಹರಿ । ಶ್ರೀಕೃಷ್ಣನೋರ್ವನು ಸರ್ವವ್ಯಾಪಕನಾಗಿ । ತಾಯಿ ಈ ಲೋಕಕ್ಕೆ ಶ್ರೀಹರಿ ॥ ೧ ॥

ಮಟ್ಟತಾಳ ॥ ಪತಿಯೆಂದುಪಾಸ್ಯ ಪಯೋಧಿಸುತೆಗೆ । ಪಿತನೆಂದುಪಾಸ್ಯ ಪದುಮಜಂಗೆ । ಶ್ವಶುರನೆಂದುಪಾಸ್ಯ ಸರಸ್ವತಿಗೆ । ಪಿತಾಮಹನೆಂದುಪಾಸ್ಯ ಪಿನಾಕಧರಗೆ । ಸ್ವಾಮಿಯೆಂದುಪಾಸ್ಯ ಸರ್ವರಿಗೆ । ಶ್ರೀಕೃಷ್ಣ ಆ ಮಾಹಾತ್ಮ್ಯಗುಪಾಸ್ಯ ಉಗ್ರಸೇನ ಗಡಾ ॥ ೨ ॥

ರೂಪಕತಾಳ ॥ ಸರಸಿಜಾಕ್ಷನು ವಿರಿಂಚಿಗೆ ಗುರು । ಪುರಹರನಿಗೆ ಪರಮಗುರು । ಮಿಕ್ಕಸುರತತಿಗೆಲ್ಲಾ ಆದಿಗುರು । ನರೋತ್ತಮರಿಂಗೆಲ್ಲ ಮೂಲಗುರು । ಪರದೈವ ಶ್ರೀಕೃಷ್ಣಗೆ ಗುರುವಾದಾ ಸಾಂದೀಪ ಗಡಾ ॥ ೩ ॥

ಝಂಪೆತಾಳ ॥ ಶೋಕಾದಿ ದೋಷ ಅತಿದೂರನೆಂಬಾ ಜ್ಞಾನೈಕ ರಸ ದಿವ್ಯ ಮೂರುತಿಯೆಂಬಾ । ಲೌಕಿಕಾನಂದಾ ಮಂದ ಸಾಂದ್ರವೆಂಬಾ । ಸಾಕುವದೀಯನ್ನ ಸ್ವಾಮಿಯೆಂದೆಂಬ । ಈ ನಾಲ್ಕು ವಿಧದಉಪಾಸ್ಯವಿಲ್ಲದವಗೆ ಶ್ರೀಕೃಷ್ಣ ತನ್ನ ಮೂರುತಿಯ ತೋರ ॥ ೪ ॥

ಏಕತಾಳ ॥ ಎಡರುಗಳೆಲ್ಲವು ಅಡಸಿದಡಂ । ಪತ್ತುಗಳೆಲ್ಲವು ಒಡಿದಡಂ । ವ್ಯಾಧಿಗಳೆಲ್ಲವು ಬಾಧಿಸಿದಡಂ । ಶೋಕಗಳೆಲ್ಲವು ಮುಖ

ಗಟ್ಟಿದೊಡಂ । ಶ್ರೀಕೃಷ್ಣ ಪೂರ್ಣಗುಣ ಸ್ವಾಮಿಯೆಂಬ ಏಕಾಂತ ಉಪಾಸ್ಯ ಮರೆಯದಿರೆ ॥ ೫ ॥

ಜತೆ ॥ ಶ್ರವಣಾದಿಗಳೊಂದು ಕ್ಷಣವ ಬಿಡದೆ ಮಾಡು । ಭವ ರೋಗ ವೈದ್ಯ ಶ್ರೀಕೃಷ್ಣನ ಚಿತ್ತವ ಪಡೆವರೆ ॥ ೬ ॥ ಶ್ರೀ ॥

೧೦. ಕ್ಷಮಾಪನಾ ಸುಳಾದಿ.

ಧ್ರುವತಾಳ ॥ ಎನ್ನ ಮಹಾ ದೋಷಗಳು ಅನಂತವಾದಡೆ ಅಂಜೆನು ನಾ । ನಿನ್ನಯ ಕಲ್ಯಾಣ ಗುಣಗಳು ಅನಂತಾನಂತವಾಗೆ । ಎನ್ನಯ ಅನಾದಿ ತಪ್ಪುಗಳು । ಅನಂತಾನಂತವಾದಡೆ ಅಂಜೆನು ನಾನು । ನಿನ್ನಯ ಅಪಾರ ಮಹಿಮೆ ಅನಂತಾನಂತವಾಗೆ ಬಾ । ವನ್ನವಂ ಸಾರಿದಾ ಬೇವು ಬಾವನ್ನದಂತಿಪ್ಪುದಲ್ಲಡೆ ಬೇವಹುದೆ । ತನ್ನಯಾ ಶಿಶುವಿನ ತಪ್ಪಿಗೆ ಜನನಿ ಕೈಬಿಡುವಳೆ । ನಿನ್ನವನು ನಾನೆಂದಡೆ ಇದೊಂದೆ ಸಾಲದೆ ದಯಾ । ಸಿಂಧು ಶಿರಿಪತಿ ಶಿರಿಕೃಷ್ಣ ನಿನ್ನವನು ನಾನೆಂದಡೆ ॥ ೧ ॥

ಮಟ್ಟೆತಾಳ ॥ ಹಿಂದಣಾ ಇಂದಿನಾ ಮುಂದಣದಂದ । ದಂದದ ಕರ್ಮಗಳು ಅನಂತಾನಂತವಾಗೆ । ಒಂದೊಂದನುಂಬ ಕಾಲದೊಳಗೆ । ಮ । ತ್ತೊಂದನಂತಾನಂತ ಕರ್ಮಗಳು ಕಾಡುತಲಿವೆ । ಒಂದೊಂ ದುಂಬಾ ಕಾಲದೊಳಗೆ । ತಂದೆ ಶ್ರೀಕೃಷ್ಣನ ಸಂದರುಶನವಲ್ಲದೆ ಈ । ದಂದುಗವನೀಗುವ ಬಗೆಯು ಬೇರುಂಟೆ । ಒಂದೊಂದುವುಂಬಾ ಕಾಲ ದೊಳಗೆ ॥ ೨ ॥

ರೂಪಕತಾಳ ॥ ಶ್ರುತಿಗಳು ಬಣ್ಣಿಸಿ ಬಣ್ಣಿಸಿ ಸ್ತುತಿಸಿ ಸ್ತುತಿಸಿ ದಣಿಯವೋ ನಿನ್ನ । ದಿತಿಸುತಾ ದೇಶದಿಂ ಸಭೆಯೊಳು । ಅತಿ ಅತಿ ಬಯ್ದ ಶಿಶುಪಾಲನಿಗೆ ಮು । ಕುತಿಯನಿತ್ತೆಂದಡೆ ನಿನ್ನ ಭಕತರಲಿ ನಿನ್ನ ದಯಕಿನ್ನು । ಮಿತಿಯುಂಟೆ ಶಿರಿಪತಿ ಶಿರಿಕೃಷ್ಣ ನಿನ್ನ ಭ । ಕತರಲಿ ನಿನ್ನ ದಯಕಿನ್ನು ಮಿತಿಯುಂಟೆ ॥ ೩ ॥

ಅಟತಾಳ ॥ ಆದ್ಯಾಪರಾಧ ಮಿಥ್ಯಾಜ್ಞಾನ ಅದ್ವಿತೀಯ ಹರಿ ವಿಸ್ಮರಣ । ಅಶ್ರುತಿಯ ವಿಹಿತಾಕರಣ ಅಹಿತಾಚರಣ । ಆ ಚತುರ್ಥ ಅಯೋಗ್ಯನಲ್ಲುಪದೇಶ । ಇಂತೀಯಪರಾಧಕ್ಕೆ । ನೀನೆನ್ನ ಕರುಣ ದಿಂದ ಕಾಯಯ್ಯ ಶ್ರೀಕೃಷ್ಣ ಕರುಣದಿಂದ ಕಾಯಯ್ಯ ॥ ೪ ॥

ಏಕತಾಳ ॥ ಭಕುತಿಲೇಶದ ಪ್ರಸಕ್ತಿ ಇಲ್ಲದ । ಜ್ಞಾನವೆಂಬುದ ಕಾಣೆನೊ । ಆಚಾರ ವಿಚಾರ ಮುನ್ನತಾನಿಲ್ಲ ಜ್ಞಾನವೆಂಬುದ ಕಾಣೆನೊ । ಆನೊಬ್ಬನೆ ಕೃಷ್ಣ ನಿನ್ನವರಲ್ಲಿಹ ಮಾನುಷ ವೇಷದ ಪಶುವಿದುಯೆಂದೆನ್ನ । ಕರುಣದಿಂದ ಕಾಯಯ್ಯ ಶ್ರೀಕೃಷ್ಣ ಕರುಣದಿಂದ ಕಾಯಯ್ಯ ॥ ೫ ॥

ಜತೆ ॥ ಮೆಚ್ಚಿದೆನು ಕೃಷ್ಣ ಅಚ್ಚಕರುಣಿಯೆಂದು ಯೆಮ್ಮ । ಯೆಚ್ಚರಿಗೆದೆಯುಲೊದಗಿದೆ । ಕರುಣಿಯೆಂದು ಮೆಚ್ಚಿದೆನೊ ಕೃಷ್ಣ ॥ ೬ ॥

॥ **ಶ್ರೀಮಧ್ವೇಶಾರ್ಪಣಮಸ್ತು** ॥

ಶ್ರೀವ್ಯಾಸರಾಯರ ಸುಳಾದಿಗಳು ಸಂಪೂರ್ಣ.

॥ ಶ್ರೀಕೃಷ್ಣಾರ್ಪಣಮಸ್ತು ॥

ಕೀರ್ತನೆ.

೬೮. ರಾಗ ನಾದನಾಮಕ್ರಿಯೆ, ಆದಿತಾಳ.

ನಮೋ ಪಾರ್ವತೀಪತಿ ನುತಜನ । ಪರ । ನಮೋ ವಿರೂಪಾಕ್ಷ ॥ ॥ ಪಲ್ಲ ॥ ರಮಾರಮಣನಲ್ಲ್ಯಮಲ ಭಕುತಿ ಕೊಡು ನಮೋ ನಮೋ ಕಮಲಾಕ್ಷಾ ॥ ಅನುಪಲ್ಲ ॥ ನೀಲಕಂಠ ತ್ರಿಶೂಲ ಡಮರು ಹಸ್ತಾಲಂಕೃತ ರಕ್ಷ । ಫಾಲನೇತ್ರ ಕಪಾಲ ರುಂಡ ಮಣಿಮಾಲಾ ಧೃತರಕ್ಷ ॥ ಶೀಲರಮ್ಯ ವಿಶಾಲನೇತ್ರ ಸಲ್ಲೀಲ ಸುರಾಧ್ಯಕ್ಷ । ಶ್ರೀಲಕುಮಿಶನ ಓಲೈಸುವ ಭಕ್ತಾವಳಿಗಳ ಪಕ್ಷ ॥ ೧ ॥ ವಾಸವನುತ ಹರಿದಾಸ ದಾಸ ಕೈಲಾಸವಾಸ ದೇವ । ದಾಶರಥಿ ಉಪಾಸಕ ಸುಜನರ

ಪೋಷಿಸುವ ಪ್ರಭಾವಾ ॥ ಭಾಷಿಸುತಿಹವಶೇಷ ಜೀವಂಗೆ ಈಶನೆಂಬ ಭಾವ । ಶ್ರೀಶನಲಿ ಕೇಲೀಸು ಮನವ ಗಿರಿಜೇಶ ಮಹಾದೇವಾ ॥ ೨ ॥ ಮೃತ್ಯುಂಜಯನ ಉತ್ತಮಪದಯುಗ ಭೃತ್ಯವೆ ಸರ್ವತ್ರ । ಹತ್ತಿಗರೆದು ಆಪತ್ತಿರಂದದಿ ಪೊರೆವುತಿಹದು ತ್ರಿನೇತ್ರ ॥ ತೆತ್ತನಂತೆ ಕಾಯುತ್ತಿಹ ಬಾಣನ ಸತ್ಯವೆ ಸುಚರಿತ್ರ । ಕರ್ತೃ ಉಡುಪಿ ಸರ್ವೋತ್ತಮ ಕೃಷ್ಣನ ಪವಿತ್ರ ಕೃಪಾಪಾತ್ರಾ ॥ ೩ ॥ ಶ್ರೀ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

ಈ ಪುಸ್ತಕವು

ಪಾವಂಜೆ ಗುರುರಾವ್, ಇವರ

ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು,

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಿಂದ ಪ್ರಕಟಿಸಲ್ಪಟ್ಟಿತು.

ಶಾಲೀವಾಹನಶಕ ೧೮೪೬.

1924.